ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಟೋರಿಕ್ಷಾ ಸ್ಫೋಟ ಆರೋಪಿ ಮುಖಕ್ಕೆ ಸುಟ್ಟ ಗಾಯ • ಆರೋಪಿ ಹೆಸರು ಖಚಿತಪಡಿಸದ ಪೊಲೀಸರು

ಸ್ಫೋಟ: ಭಯೋತ್ಪಾದನೆ ಕೃತ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಗರೋಡಿಯಲ್ಲಿ ಚಲಿಸುತ್ತಿದ್ದ ರಿಕ್ಷಾದಲ್ಲಿ ಶನಿವಾರ ಸಂಜೆ ಸಂಭವಿಸಿದ ಲಘು ಸ್ಫೋಟವು ಬೇರೆಯೇ ಆಯಾಮ ಪಡೆದುಕೊಂಡಿದೆ. 'ಇದು ಆಕಸ್ಮಿಕ ಘಟನೆಯಲ್ಲ. ಇದೊಂದು ಭಯೋತ್ಪಾದನೆ ಕೃತ್ಯ' ಎಂದು ಪೊಲೀಸರು ದೃಢಪಡಿಸಿದ್ದಾರೆ.

ಸಂಚು ನಡೆಸಲು ಉದ್ದೇಶಿಸಿದ್ದ ಸ್ಥಳದಲ್ಲಿ ಸ್ಫೋಟ ನಡೆದಿಲ್ಲ. ಆರೋಪಿ ರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಒಯ್ಯುವಾಗ ಅದು ಸ್ಫೋಟಗೊಂಡಿದೆ. ಹೀಗಾಗಿ ಸಂಭವನೀಯ ಅನಾಹುತ ತಪ್ಪಿದಂತಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ಗಾಯಾಳು ಪ್ರಯಾಣಿಕನ ಹೆಸರನ್ನು ಪೊಲೀಸರು ಇನ್ನೂ ಬಹಿರಂಗಪಡಿಸಿಲ್ಲ.

'ಸ್ಫೋಟದಿಂದ ಆರೋಪಿಯ ಮುಖವೂ ಸುಟ್ಟು ಹೋಗಿದೆ. ಆತನಿಗೆ ಶೇ 45ರಷ್ಟು ಸುಟ್ಟಗಾಯಗಳಾಗಿವೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಮುಖ ಊದಿಕೊಂಡಿರುವುದರಿಂದ ಆತ ಮಾತನಾಡುತ್ತಿಲ್ಲ. ಆತನನ್ನು ಬಲವಂತಪಡಿಸುವಂತೆಯೂ ಇಲ್ಲ. ಡಿಎನ್‌ಎ ಪರೀಕ್ಷೆಯಿಂದ ಅಥವಾ ಬಂಧುಗಳಿಂದ ಆರೋಪಿಯ ಗುರುತನನ್ನು ಖಚಿತಪಡಿಸಿಕೊಳ್ಳಬೇಕಿದೆ. ಆರೋಪಿಯ ಬಗ್ಗೆ ಸಿಕ್ಕಿರುವ ಸುಳಿವಿನ ಆಧಾರದಲ್ಲಿ ಬಂಧುಗಳನ್ನು ಕರೆಸುತ್ತಿದ್ದು, ಅವರು ಖಚಿತ ಪಡಿಸಿದ ಬಳಿಕವಷ್ಟೇ ಆರೋಪಿ ಯಾರು ಎಂಬುದನ್ನು ನಿಖರವಾಗಿ ಹೇಳಬಹುದು' ಎಂದು ಹೆಚ್ಚುವರಿ ಪೊಲೀಸ್ ನಿರ್ದೇಶಕ ಅಲೋಕ್ ಕುಮಾರ್ ಅವರು ಭಾನುವಾರ ಸುದ್ದಿಗಾರರಿಗೆ ಇಲ್ಲಿ ತಿಳಿಸಿದರು.

ಘಟನೆ ನಡೆದ ಸ್ಥಳಕ್ಕೆ ಭಾನುವಾರ ರಾತ್ರಿ ಭೇಟಿ ನೀಡಿದ ಅವರು ತನಿಖಾಧಿಕಾರಿಗಳಿಂದ ಹಾಗೂ ಪ್ರತ್ಯಕ್ಷದರ್ಶಿಗಳಿಂದ ಮಾಹಿತಿ ಕಲೆ ಹಾಕಿದರು. ಗಾಯಗೊಂಡಿರುವ ರಿಕ್ಷಾ ಚಾಲಕ ಉಜ್ಜೋಡಿಯ ಪುರುಷೋತ್ತಮ ಪೂಜಾರಿ ಅವರನ್ನು ಹಾಗೂ ಆರೋಪಿಯನ್ನು ಆಸ್ಪತ್ರೆಯಲ್ಲಿ ಭೇಟಿ ಮಾಡಿದರು.

'ಘಟನೆ ಬಗ್ಗೆ ಚಾಲಕ ಪುರುಷೋತ್ತಮ ಪೂಜಾರಿ ಕೆಲ ಮಾಹಿತಿ ನೀಡಿದ್ದಾರೆ. ಪ್ರತ್ಯಕ್ಷ ದರ್ಶಿಗಳಿಂದಲೂ ಬಹಳಷ್ಟು ಮಾಹಿತಿ ಕಲೆ ಹಾಕಿದ್ದೇವೆ. ಆರೋಪಿಯು ರಿಕ್ಷಾ ಹತ್ತಿದ ಬಳಿಕ ಪಂಪ್‌ವೆಲ್‌ಗೆ ಹೋಗುವಂತೆ ಹೇಳಿದ್ದ.

8ನೇ ಪುಟ ನೋಡಿ



ಮಂಗಳೂರು ಗರೋಡಿಯಲ್ಲಿ ರಿಕ್ಷಾದಲ್ಲಿ ಸ್ಫೋಟ ಉಂಟಾದ ಸ್ಥಳಕ್ಕೆ ಎಡಿಜಿಪಿ ಅಲೋಕ್ ಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಮಂಗಳೂರು ಪೊಲೀಸ್ ಆಯುಕ್ತ ಎನ್.ಶಶಿಕುಮಾರ್ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳು ಜತೆಗಿದ್ದರು —ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ರಾಜ್ಯದಲ್ಲಿ ಕಟ್ಟೆಚ್ಚರ: ಸಿ.ಎಂ ಸೂಚನೆ

ಬೆಂಗಳೂರು: ರಾಜ್ಯದ ಎಲ್ಲ ಸೂಕ್ಷ್ಮ ಪ್ರದೇಶಗಳಲ್ಲಿ ಕಟ್ಟೆಚ್ಚರ ವಹಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಅವರಿಗೆ ಸೂಚಿಸಿದ್ದಾರೆ.

ಮಂಗಳೂರಿನ ಸ್ಫೋಟ ಪ್ರಕರಣದ ಬಳಿಕ ಮುಖ್ಯಮಂತ್ರಿ ಅವರನ್ನು ಸೂದ್ ಭೇಟಿ ಮಾಡಿ ಪ್ರಕರಣದ ಮಾಹಿತಿ ನೀಡಿದರು.

'ಕೊಡಗು, ಉತ್ತರ ಕನ್ನಡ, ಹುಬ್ಬಳ್ಳಿ, ಶಿವಮೊಗ್ಗ, ಮೈಸೂರು, ಬೆಳಗಾವಿ ಜಿಲ್ಲೆಯ ಸೂಕ್ಷ್ಮ ಹಾಗೂ ಅತಿಸೂಕ್ಷ್ಮ ಪ್ರದೇಶದಲ್ಲಿ ಹೆಚ್ಚಿನ ಭದ್ರತೆ ಕಲ್ಪಿಸಬೇಕು. ಶಂಕಿತ ವ್ಯಕ್ತಿಗಳ ವಿಚಾರಣೆ ನಡೆಸಬೇಕು. ರಾಜ್ಯದ ಗಡಿಗಳಲ್ಲಿ ನಿಗಾವಹಿಸಬೇಕು' ಎಂದು ಕಾನೂನು ಸುವ್ಯವಸ್ಥೆ ವಿಭಾಗ, ಆಂತರಿಕ ಭದ್ರತಾ ವಿಭಾಗಕ್ಕೆ ಮುಖ್ಯಮಂತ್ರಿ ಸೂಚಿಸಿದರು.

'ರಾಜಧಾನಿಯಲ್ಲೂ ಭದ್ರತೆ ಹೆಚ್ಚಿಸಬೇಕು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸೇರಿದಂತೆ ರಾಜ್ಯದ ಎಲ್ಲ ವಿಮಾನ ನಿಲ್ದಾಣಗಳಲ್ಲೂ ತೀವ್ರ ನಿಗಾ ವಹಿಸಬೇಕು. ಭದ್ರತೆಯಲ್ಲಿ ಲೋಪವಾದರೆ ಹಿರಿಯ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು' ಎಂದು ಬೊಮ್ಮಾಯಿ ಎಚ್ಚರಿಕೆ ನೀಡಿದರು.

'ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿಯಿದ್ದು ದುಷ್ಕರ್ಮಿಗಳು ದುಷ್ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ. ಅದಕ್ಕೆ ಅವಕಾಶ ನೀಡಬಾರದು' ಎಂದೂ ಸೂಚಿಸಿದರು.

ಮೈಸೂರಿನಲ್ಲಿ ಮನೆ ಬಾಡಿಗೆಗೆ ಪಡೆದಿದ್ದ ಶಂಕಿತ

ಮೈಸೂರು: ಮಂಗಳೂರಿನ ಗರೋಡಿಯಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಶಂಕಿತ ಆರೋಪಿಯು ಮೇಟಗಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನೆಲೆಸಿದ್ದನು.

'ಆರೋಪಿ ಲೋಕನಾಯಕ ನಗರದ 10ನೇ ಕ್ರಾಸ್‌ನಲ್ಲಿ ಮನೆಯನ್ನು ಬಾಡಿಗೆಗೆ ಪಡೆದಿದ್ದ. ಆ ಮನೆ ಮೇಲೆ ದಾಳಿ ನಡೆಸಿ ಮಾಹಿತಿ ಕಲೆ ಹಾಕಲಾಗಿದೆ. ಆತ ಬಾಡಿಗೆಗಿದ್ದುದ್ದನ್ನು ಮನೆ ಮಾಲೀಕ ಮೋಹನ್‌ಕುಮಾರ್ ಖಚಿತಪಡಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿ ಮಾಹಿತಿ ನೀಡಿದರು.

ಆರೋಪಿಯು ಹುಬ್ಬಳ್ಳಿಯ ಮಾರುತಿ ಪುತ್ರ ಪ್ರೇಮರಾಜ ಎಂದು ವಿಳಾಸ ನೀಡಿದ್ದ ಎಂದು ಗೊತ್ತಾಗಿದೆ. ಕೊಠಡಿಯಲ್ಲಿ ತನಿಖಾ ತಂಡ ಪರಿಶೀಲಿಸಿದಾಗ, ಸರ್ಕಿಟ್ ಬೋರ್ಡ್, ಸ್ಮಾಲ್ ಬೋಲ್ಟ್, ಬ್ಯಾಟರಿ, ಮರದ ಪೌಡರ್, ಅಲ್ಯೂಮಿನಿಯಂ, ಮಲ್ಟಿಮೀಟರ್, ವೈರ್, ಪ್ರೆಷರ್ ಕುಕ್ಕರ್, ಮೊಬೈಲ್ ಫೋನ್, 2 ನಕಲಿ ಆಧಾರ್ ಕಾರ್ಡ್, ಒಂದು ನಕಲಿ ಪ್ಯಾನ್ ಕಾರ್ಡ್, ಡೆಬಿಟ್ ಕಾರ್ಡ್ ಸಿಕ್ಕಿವೆ. ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು, ಶ್ವಾನದಳದಿಂದಲೂ ಪರಿಶೀಲನೆ ನಡೆದಿದೆ ಎಂದು ಮೂಲಗಳು ಹೇಳಿವೆ.

ಆತ ಅಗ್ರಹಾರದಲ್ಲಿರುವ ಮೊಬೈಲ್ ಅಂಗಡಿಯಲ್ಲಿ ಕೆಲ ತಿಂಗಳವರೆಗೆ ಮೊಬೈಲ್ ಫೋನ್ ರಿಪೇರಿ ತರಬೇತಿ ಪಡೆದಿದ್ದ ಎನ್ನಲಾಗಿದ್ದು, ಅಲ್ಲಿಯೂ ಪೊಲೀಸರು ಪರಿಶೀಲನೆ ನಡೆಸಿದರು.

ಮಂಗಳೂರಿನಲ್ಲಿ ಸ್ಫೋಟಿಸಿದ ಕುಕ್ಕರ್ ಬಾಂಬ್ ಅನ್ನು ಮೈಸೂರಿ ನಿಂದ ಬಸ್‌ನಲ್ಲಿ ತೆಗೆದುಕೊಂಡು ಹೋಗಲಾಗಿತ್ತು ಎಂದು ತಿಳಿದುಬಂದಿದೆ.

ಗೋಡೆ ಬರೆಹದ ಆರೋಪಿಗೂ ಕೃತ್ಯಕ್ಕೂ ನಂಟು?

ಮಂಗಳೂರು ನಗರದಲ್ಲಿ 2020ರ ನವೆಂಬರ್‌ನಲ್ಲಿ ಲಷ್ಕರ್ ಎ ತಯ್ಯಬಾ ಹಾಗೂ ತಾಲಿಬಾನ್ ಪರವಾಗಿ ಗೋಡೆ ಬರಹ ಪ್ರಕರಣದಲ್ಲಿ ಬಂಧಿತನಾಗಿದ್ದ ವ್ಯಕ್ತಿಯೇ ಈ ಕೃತ್ಯದ ಆರೋಪಿಯಾಗಿರಬಹುದು ಎಂಬ ಬಲವಾದ ಸಂಶಯ ಪೊಲೀಸರನ್ನು ಕಾಡುತ್ತಿದೆ.

'ಗೋಡೆ ಬರಹ ಪ್ರಕರಣದಲ್ಲಿ ಅಬ್ದುಲ್ ಮತೀನ್, ಶಾರಿಕ್, ಮಾಜ್ ಮುನೀರ್ ಅಹಮದ್ ಎಂಬ ಮೂವರು ಆರೋಪಿಗಳಿದ್ದಾರೆ. ಸ್ಫೋಟಕ್ಕೆ ಸಂಚುರೂಪಿಸಿದ ಪ್ರಕರಣದಲ್ಲಿ ಮಾಜ್ ಮುನೀರ್ ಅಹಮದ್‌ನನ್ನು ಇತ್ತೀಚೆಗೆ ಶಿವಮೊಗ್ಗ ಪೊಲೀಸರು ಬಂಧಿಸಿದ್ದರು. ಆತನ ವಿರುದ್ಧ ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ) ಅಡಿ ಪ್ರಕರಣ ದಾಖಲಾಗಿದ್ದು ಬಂಧನದಲ್ಲಿದ್ದಾನೆ. ಅಬ್ದುಲ್ ಮತೀನ್ ಮೇಲೆ ಸುದ್ದಗುಂಟೆಪಾಳ್ಯದಲ್ಲಿ, ತಮಿಳುನಾಡಿನಲ್ಲಿ ಪ್ರಕರಣ ದಾಖಲಾಗಿದೆ. ಇನ್ನೊಬ್ಬ ಆರೋಪಿಯು ಶಾರಿಕ್ ಹೌದೋ ಅಲ್ಲವೋ ಎಂಬುದನ್ನು ಆತನ ಬಂಧುಗಳು ಖಚಿತಪಡಿಸಿದ ಬಳಿಕವಷ್ಟೇ ಸ್ಪಷ್ಟವಾಗಿ ಹೇಳಬಹುದು' ಎಂದು ಅಲೋಕ್ ಕುಮಾರ್ ತಿಳಿಸಿದರು.



ವರ್ಣರಂಜಿತ ಚಾಲನೆ ದೋಹಾದಲ್ಲಿರುವ ಅಲ್‌ಬೈತ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಫಿಫಾ ವಿಶ್ವಕಪ್ ಟೂರ್ನಿಯ ಉದ್ಘಾಟನೆಯಲ್ಲಿ ಕಲಾವಿದರು ನೃತ್ಯ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರ

ಚಿಲುಮೆ: 'ಸಮೀಕ್ಷಾ ಆ್ಯಪ್' ರೂಪಿಸಿದ್ದ ವ್ಯಕ್ತಿಯ ವಿಚಾರಣೆ

ಅಕ್ರಮಕ್ಕೆ ಅಧಿಕಾರಿಗಳ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ದತ್ತಾಂಶ ಕಳವು ಆರೋಪ ಹೊತ್ತಿರುವ 'ಚಿಲುಮೆ' ಸಂಸ್ಥೆಯ ಅಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಕೆಲವು ವಲಯ ಅಧಿಕಾರಿಗಳೇ ಬೆಂಬಲವಾಗಿದ್ದರು ಎನ್ನುವ ಅಂಶ ಪೊಲೀಸ್ ತನಿಖೆಯಿಂದ ಹೊರಬಿದ್ದಿದೆ.

'ಚಿಲುಮೆ' ಸಮೀಕ್ಷಾ ತಂಡವು ಬೆಂಗಳೂರಿನ ಬಹುತೇಕ ವಿಧಾನ ಸಭಾ ಕ್ಷೇತ್ರಗಳ ಸಮೀಕ್ಷೆ ನಡೆಸಿದ್ದು, ಅದಕ್ಕೆ ಬಿಬಿಎಂಪಿಯ ವಲಯದ ಕಂದಾಯ ಅಧಿಕಾರಿಗಳು (ಆರ್‌ಒ) ಹಾಗೂ ಸಿಬ್ಬಂದಿ ನೆರವು ನೀಡಿದ್ದರು. ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಈ ಸಂಸ್ಥೆಗೆ ಅಧಿಕಾರಿಗಳೇ ಒದಗಿಸುತ್ತಿದ್ದರು. ಅದನ್ನು ಆಧರಿಸಿ ಈ ತಂಡವು ಮನೆಮನೆಗೆ ತೆರಳಿ ಮಾಹಿತಿ ಕಲೆಹಾಕುತ್ತಿತ್ತು.

'ಸಂಸ್ಥೆ ಷರತ್ತು ಉಲ್ಲಂಘಿಸಿದೆ' ಎಂಬ ಆಪಾದನೆ ಮೇರೆಗೆ ಇದೇ ನ.2ರಂದು ಬಿಬಿಎಂಪಿ ಅನುಮತಿ ರದ್ದು ಪಡಿಸಿತ್ತು. ಅದಕ್ಕೂ ಮೊದಲೇ ಷರತ್ತು ಉಲ್ಲಂಘಿಸಿರುವುದು ಅಧಿಕಾರಿಗಳ ಗಮನಕ್ಕೆ ಬಂದಿದ್ದರೂ ಸಂಸ್ಥೆಯ ವಿರುದ್ಧ ದೂರು ನೀಡಿರಲಿಲ್ಲ. ವಿಷಯ ಬಹಿರಂಗಗೊಂಡ ಮೇಲಷ್ಟೇ ಬಿಬಿಎಂಪಿಯ ಅಧಿಕಾರಿಗಳು ಸಂಸ್ಥೆಯ ವಿರುದ್ಧ ದೂರು ನೀಡಿದ್ದಾರೆ. ದುರ್ಬಳಕೆ ನಡೆದಿರುವುದು ಗೊತ್ತಾಗಿ 16 ದಿನಗಳ ಬಳಿಕ ಹಲಸೂರು ಠಾಣೆಯಲ್ಲಿ ದೂರು ದಾಖಲಿಸಲಾಗಿತ್ತು.

5ನೇ ಪುಟ ನೋಡಿ

'ಚಿಲುಮೆ' ಸಂಸ್ಥೆ ಮುಖ್ಯಸ್ಥ ರವಿಕುಮಾರ್ ಬಂಧನ

ಬೆಂಗಳೂರು: 'ಚಿಲುಮೆ' ಸಂಸ್ಥೆಯ ಮುಖ್ಯಸ್ಥ ರವಿಕುಮಾರ್ ಅವರನ್ನು ಹಲಸೂರು ಗೇಟ್ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ.

ಕಳೆದ ಮೂರು ದಿನಗಳಿಂದ ಇವರು ತಲೆಮರೆಸಿಕೊಂಡಿದ್ದರು. ರವಿಕುಮಾರ್ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು. ನಗರದ ಹೊರ ವಲಯದಲ್ಲಿ ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರವಿಕುಮಾರ್ ತಲೆಮರೆಸಿಕೊಂಡಿದ್ದರಿಂದ ಅವರ ಪತ್ನಿ ಐಶ್ವರ್ಯಾ ಅವರನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದರು.


'ಮತದಾರರ ದತ್ತಾಂಶ ಕಳವು ಪ್ರಕರಣದಲ್ಲಿ ರವಿಕುಮಾರ್ ಮುಖ್ಯ ಸೂತ್ರಧಾರಿ ಆಗಿದ್ದಾರೆ. ಸೋಮವಾರ ಕೋರ್ಟ್‌ಗೆ ಹಾಜರು ಪಡಿಸಿ ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗುವುದು' ಎಂದು ಮೂಲಗಳು ತಿಳಿಸಿವೆ.

ಶಾಸಕ ಕುಮಾರಸ್ವಾಮಿ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಮೂಡಿಗೆರೆ: ಕಾಡಾನೆ ದಾಳಿಯಿಂದ ಮೃತಪಟ್ಟ ಮಹಿಳೆಯ ಕುಟುಂಬದವರಿಗೆ ಸಾಂತ್ವನ ಹೇಳಲು ಹೋದ ಶಾಸಕ ಎಂ.ಪಿ. ಕುಮಾರಸ್ವಾಮಿ ವಿರುದ್ಧ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿ, ಹಲ್ಲೆ ನಡೆಸಿರುವುದು ಭಾನುವಾರ ನಡೆದಿದೆ.

ತಾಲ್ಲೂಕಿನ ಎಸ್ಟೇಟ್ ಕುಂದೂರಿನ ತೋಟದಲ್ಲಿ ಭಾನುವಾರ ಶೋಭಾ (45) ಎಂಬುವರ ಮೇಲೆ ಕಾಡಾನೆ ದಾಳಿ ನಡೆಸಿದ್ದು, ಅವರು ಮೃತಪಟ್ಟಿದ್ದಾರೆ. ವಿಷಯ ತಿಳಿದು ಸ್ಥಳೀಯರು ಘಟನಾ ಸ್ಥಳಕ್ಕೆ ಧಾವಿಸಿ ಬಂದಿದ್ದರು. ಸ್ವಲ್ಪ ಹೊತ್ತಿನಲ್ಲೇ ಶಾಸಕ ಎಂ.ಪಿ. ಕುಮಾರಸ್ವಾಮಿ ಅವರೂ ಸ್ಥಳಕ್ಕೆ ಬಂದರು. ಆಗ ಉದ್ರಿಕ್ತರು ಅವರಿಗೆ ಘೇರಾವ್ ಹಾಕಿ ಆಕ್ರೋಶ ವ್ಯಕ್ತಪಡಿಸಿದರು.




ಅಂಗಿ ಹರಿದಿರುವುದನ್ನು ಶಾಸಕ ಕುಮಾರಸ್ವಾಮಿ ತೋರಿಸಿದರು

ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದರಿಂದ ಪೊಲೀಸರು ಲಾಠಿ ಹಿಡಿದು ಉದ್ರಿಕ್ತರನ್ನು ಚದುರಿಸಿದರು. ಬಳಿಕ ಕುಮಾರಸ್ವಾಮಿ ಅವರನ್ನು ಅರಣ್ಯ ಇಲಾಖೆಯ ಜೀಪು ಹತ್ತಿಸಿದರು. ಈ ಸಂದರ್ಭದಲ್ಲಿ ಕುಮಾರಸ್ವಾಮಿ ಅವರ ಅಂಗಿ ಹರಿಯಿತು. ಉದ್ರಿಕ್ತ ಜನರು ಜೀಪನ್ನು ಸ್ವಲ್ಪ ದೂರದವರೆಗೆ ಹಿಂಬಾಲಿಸಿಕೊಂಡು ಹೋದರು. ಪೊಲೀಸರು ಜನರನ್ನು ಚದುರಿಸಲು ಹರಸಾಹಸ ಪಟ್ಟರು. ಶಾಸಕರು ಜೀಪಿನಿಂದ ಇಳಿಯಬೇಕು ಎಂದು ಜನರು ಪಟ್ಟು ಹಿಡಿದರು. ಕೊನೆಗೆ ಜೀಪಿನ ಮೇಲೆ ಕಲ್ಲು ತೂರಾಟ ನಡೆಸಿದರು. ಜೀಪು ಜಖಂಗೊಂಡಿತು.

ಉದ್ದೇಶಪೂರ್ವಕ ಹಲ್ಲೆ: ಘಟನೆಯ ಬಳಿಕ, ಅಂಗಿ ಹರಿದ ಸ್ಥಿತಿಯಲ್ಲೇ ವಿಡಿಯೊ ಸಂದೇಶವನ್ನು ಹರಿಬಿಟ್ಟ ಶಾಸಕ ಕುಮಾರಸ್ವಾಮಿ, 'ಪ್ರತಿಭಟನಾ ಸ್ಥಳದಲ್ಲೇ ಇರಲು ನಾನು ಮುಂದಾಗಿದ್ದೆ. ಆದರೆ, ಪೊಲೀಸರು ದಾರಿ ತಪ್ಪಿಸಿ ಹೊರಕ್ಕೆ ಕಳಿಸಿದರು. ಇದು ಪೊಲೀಸರು ಮಾಡಿದ ತಪ್ಪು. ಉದ್ದೇಶ ಪೂರ್ವಕವಾಗಿ ನನ್ನ ಮೇಲೆ ಹಲ್ಲೆ ಮಾಡಿಸಲಾಗಿದೆ. ಇದರಲ್ಲಿ ಪೊಲೀಸರ ವೈಫಲ್ಯ ಇದೆ. ಸ್ಥಳದಲ್ಲಿ 10 ಮಂದಿ ಪೊಲೀಸರು ಮಾತ್ರ ಇದ್ದರು' ಎಂದು ಆರೋಪಿಸಿದ್ದಾರೆ.

ಕ್ರಿಕೆಟ್: ಸೂರ್ಯ ಮಿಂಚಿನ ಶತಕ



ಮೌಂಟ್ ಮಾಂಗನೂಯಿ (ಪಿಟಿಐ): ಭಾರತದ ಬ್ಯಾಟರ್ ಸೂರ್ಯಕುಮಾರ್ ಯಾದವ್ ಭಾನುವಾರ ನ್ಯೂಜಿಲೆಂಡ್ ವಿರುದ್ಧ ನಡೆದ ಟಿ20 ಪಂದ್ಯದಲ್ಲಿ ಮಿಂಚಿನ ಶತಕ ದಾಖಲಿಸಿದರು.

ಬೇ ಓವಲ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಸೂರ್ಯಕುಮಾರ್ 51 ಎಸೆತಗಳಲ್ಲಿ ಅಜೇಯ 111 ರನ್ ಗಳಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 191 ರನ್ ಪೇರಿಸಿತು. ಅದಕ್ಕುತ್ತರವಾಗಿ ಕಿವೀಸ್ 18.5 ಓವರ್‌ಗಳಲ್ಲಿ 126 ರನ್ ಗಳಿಸಿತು.

ಭಾರತ 65 ರನ್‌ಗಳಿಂದ ಗೆದ್ದಿತು. ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.



ಬಳ್ಳಾರಿಯಲ್ಲಿ ಭಾನುವಾರ ನಡೆದ ಬಿಜೆಪಿ ಎಸ್‌.ಟಿ. ಸಮಾವೇಶದಲ್ಲಿ ಪಾಲ್ಗೊಂಡ ಜನಸ್ತೋಮ

ಬಳ್ಳಾರಿಯಲ್ಲಿ ಬೃಹತ್ ಎಸ್‌.ಟಿ ಸಮಾವೇಶ

ವಾಲ್ಮೀಕಿ ವೇದಿಕೆಯಲ್ಲಿ ಚುನಾವಣೆ ರಣಕಹಳೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ರಾಜ್ಯ ಸರ್ಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಿರುವ ಬೆನ್ನಲ್ಲೇ, ನಗರದಲ್ಲಿ ಭಾನುವಾರ ನಡೆದ ಬಿಜೆಪಿ ಪರಿಶಿಷ್ಟ ಪಂಗಡದ ಬೃಹತ್ ಸಮಾವೇಶದಲ್ಲಿ ಮುಂಬರುವ ವಿಧಾನಸಭೆ ಚುನಾವಣೆಯ ರಣಕಹಳೆ ಮೊಳಗಿತು.

ಮಹರ್ಷಿ ವಾಲ್ಮೀಕಿ ಹೆಸರಿನಲ್ಲಿ ನಿರ್ಮಿಸಿದ್ದ ವಿಶಾಲವಾದ ವೇದಿಕೆಯಲ್ಲಿ ಮಾತನಾಡಿದ ಬಿಜೆಪಿ ರಾಷ್ಟ್ರೀಯ ಮತ್ತು ರಾಜ್ಯ ನಾಯಕರು ಕಾಂಗ್ರೆಸ್, ಅದರ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದರು. ಈ ಪಕ್ಷವನ್ನು ಬುಡಸಹಿತ ಕಿತ್ತೊಗೆಯಬೇಕು ಎಂದು ಮನವಿ ಮಾಡಿದರು.

'ಕಾಂಗ್ರೆಸ್ ಲೂಟಿಕೋರ ಪಕ್ಷ, ಮೋಸಗಾರ ಪಕ್ಷ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳನ್ನು ಕೇವಲ ವೋಟ್ ಬ್ಯಾಂಕ್ ಗಳಾಗಿ ಬಳಸಿಕೊಂಡಿದೆ. ಕೇಂದ್ರ, ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಪರಿಶಿಷ್ಟರು ಮತ್ತು ಹಿಂದುಳಿದವರ ಬದುಕನ್ನು ಬದಲಾಯಿಸಿ, ಸ್ವಾಭಿಮಾನದ ಬದುಕು ಕಲ್ಪಿಸಲು ಶ್ರಮಿಸುತ್ತಿದೆ' ಎಂದು ಪ್ರತಿಪಾದಿಸಿದರು.

> ಶ್ರೀರಾಮುಲು ಎಸ್‌.ಟಿ ಸಮುದಾಯದ ಹೃದಯ ಸಾಮ್ರಾಟ. ಅವರು ಮುಖ್ಯಮಂತ್ರಿ ಆಗುವ ಕಾಲವೂ ಬರುತ್ತದೆ
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

> ಕಾಂಗ್ರೆಸ್‌ನ ದಮನ ಬಳ್ಳಾರಿಯಿಂದಲೇ ಆರಂಭವಾಗಲಿ. ಸುದರ್ಶನ ಚಕ್ರ ಇಲ್ಲಿಂದಲೇ ಹೊರಟು ಆ ಪಕ್ಷದ ಶಿರಚ್ಛೇದ ಮಾಡಲಿ
> **ಬಿ.ಶ್ರೀರಾಮುಲು,** ಸಚಿವ

8ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಅಂಗಾಂಗ ಚಲನೆ ಅಸ್ವಸ್ಥತೆ 23ರಿಂದ ಸಮಾಲೋಚನೆ

ಬೆಂಗಳೂರು: ನಿಮ್ಹಾನ್ಸ್ ಸಂಸ್ಥೆಯು ಅಂಗಾಂಗ ಚಲನೆಯ ಅಸ್ವಸ್ಥತೆ ಬಗ್ಗೆ ತನ್ನ ಕೇಂದ್ರದಲ್ಲಿ ಇದೇ 23ರಿಂದ ಜಾಗೃತಿ ಸಪ್ತಾಹ ಹಮ್ಮಿಕೊಂಡಿದ್ದು, ವೈದ್ಯರ ಜತೆಗೆ ನೇರ ಸಮಾಲೋಚನೆಗೆ ಅವಕಾಶ ಕಲ್ಪಿಸಲಾಗಿದೆ.

ಪಾರ್ಕಿನ್‌ಸನ್, ಹಂಟಿಂಗ್ ಟನ್ ಸೇರಿ ವ್ಯಕ್ತಿಯ ಚಲನಶೀಲತೆ, ಬೌದ್ಧಿಕ ಮತ್ತು ಮಾನಸಿಕ ಸಾಮರ್ಥ್ಯವನ್ನು ಕುಂದಿಸುವ ಕಾಯಿಲೆಗಳು ಅಂಗಾಂಗ ಚಲನೆ ಅಸ್ವಸ್ಥತೆ ರೋಗಗಳ ಅಡಿಯಲ್ಲಿ ಬರಲಿವೆ. ಈ ಕಾಯಿಲೆಗಳನ್ನು ಎದುರಿಸುತ್ತಿರುವವರಿಗೆ ಅಂಗಾಂಗಗಳನ್ನು ತಿರುಗಿಸಲು ಕಷ್ಟವಾಗುತ್ತದೆ. ಸ್ನಾಯುಗಳು ಹಿಡಿದುಕೊಳ್ಳುವುದು, ಕಣ್ಣುಗಳ ಚಲನೆ ನಿಧಾನವಾಗುವುದು, ಸಮತೋಲನ ತಪ್ಪುವುದು, ಮಾತನಾಡಲು ಹಾಗೂ ಆಹಾರ ನುಂಗಲು ಕಷ್ಟವಾಗುವುದು, ನಿಯಂತ್ರಣವಿಲ್ಲದೇ ಕೈ ಮತ್ತು ಕಾಲುಗಳು ಅಲುಗಾಡುವುದು ಸೇರಿ ವಿವಿಧ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ ಎಂದು ಸಂಸ್ಥೆ ಹೇಳಿದೆ.

ನ.23ರಿಂದ ನ.25ರವರೆಗೆ ಸಂಸ್ಥೆಯ ಹೊರರೋಗಿ ವಿಭಾಗದಲ್ಲಿ ರೋಗಿಗಳು ಹಾಗೂ ಅವರ ಸಹಾಯಕರಿಗೆ ಅಂಗಾಂಗ ಚಲನೆಯ ಅಸ್ವಸ್ಥತೆ ಮತ್ತು ಚಿಕಿತ್ಸೆ ಬಗ್ಗೆ ಜಾಗೃತಿ ಮೂಡಿಸಲಾಗುವುದು. ಕಾಯಿಲೆಯ ಬಗ್ಗೆ ಸಂವಾದವನ್ನೂ ನಡೆಸಲಾಗುವುದು. ನ.26ರಂದು ಸಂಸ್ಥೆಯ ಅಶ್ವಿನಿ ಹಾಲ್‌ನಲ್ಲಿ ಬೆಳಿಗ್ಗೆ 10ರಿಂದ ತಜ್ಞ ಮನೋವೈದ್ಯರ ಜತೆಗೆ ಸಮಾಲೋಚನೆಗೆ ಅವಕಾಶ ಕಲ್ಪಿಸಲಾಗುವುದು ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.




ಬಸವನಗುಡಿ ಬುಲ್ ಟೆಂಪಲ್ ರಸ್ತೆಯಲ್ಲಿ ನಡೆಯುತ್ತಿರುವ ಕಡಲೆಕಾಯಿ ಪರಿಷೆಯಲ್ಲಿ ಕಂಡು ಬಂದ ಜನಸ್ತೋಮ (ಎಡಚಿತ್ರ), ಪರಿಷೆಯಲ್ಲಿ ಕಡಲೆಕಾಯಿ ಖರೀದಿಗೆ ಮುಗಿಬಿದ್ದ ಜನರು – ಪ್ರಜಾವಾಣಿ ಚಿತ್ರ : ಕಿಶೋರ್ ಕುಮಾರ್ ಬೋಳಾರ್

ಬಸವನಗುಡಿಯಲ್ಲಿ ತಿನಿಸು, ಆಟದ ಮೋಜು • ಪ್ಲಾಸ್ಟಿಕ್ ನಿಷೇಧದ ಕುರಿತು ಜಾಗೃತಿ ಪ್ರಯತ್ನ

ಜನಜಾತ್ರೆಯ ಕಡಲೆಕಾಯಿ ಪರಿಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸುಂಕೇನಹಳ್ಳಿಯಲ್ಲಿ ನಾಲ್ಕಾರು ಬಗೆಯ ಕಡಲೆಕಾಯಿಯ ಆಕರ್ಷಣೆಯ ಜತೆಗೆ ವಿವಿಧ ಭಕ್ಷ್ಯಗಳು, ಆಟಿಕೆ, ಝಗಮಗಿಸುವ ಬೆಳಕಿನಲ್ಲಿ ಜಾಯಿಂಟ್ ವೀಲ್, ಟೊರಾ ಟೋರಾ ಆಟದ ಮೋಜು... ಚುಮುಚುಮು ಚಳಿಯಲ್ಲೂ ಕಾರ್ತಿಕ ಮಾಸದ ಕೊನೆವಾರ ಬಸವನಗುಡಿಯಲ್ಲಿ ಜನಜಾತ್ರೆ...

ನಗರದ ಐತಿಹಾಸಿಕ ಕಡಲೆಕಾಯಿ ಪರಿಷೆಯ ಸಂಕ್ಷಿಪ್ತ ಚಿತ್ರಣ ಇದು. ಕಾರ್ತಿಕ ಮಾಸದ ಕೊನೆ ಸೋಮವಾರ ಪರಿಷೆ ನಡೆಯುತ್ತದೆ. ಆದರೆ, ಅದಕ್ಕೂ ಮೂರು ದಿನ ಮೊದಲು ಹಾಗೂ ನಂತರ ಮುಂದಿನ ಮೂರು ದಿನ ಇಲ್ಲಿ ಜಾತ್ರೆ ಸಂಭ್ರಮವಿರುತ್ತದೆ.

ಕಳೆದ ಬಾರಿ ಪರಿಷೆ ಸಾರ್ವಜನಿಕವಾಗಿ ಆಚರಣೆಯಾಗಿತ್ತಾದರೂ ಕೋವಿಡ್ ಮೂರನೇ ಅಲೆಯ ಭೀತಿ ಹಾಗೂ ಮಾಸ್ಕ್ ಧಾರಣೆ ನಿರ್ಬಂಧದಿಂದಾಗಿ ಕಳೆಗುಂದಿತ್ತು. ಈ ಬಾರಿ ಜನರು ಯಾವುದೇ ಆತಂಕವಿಲ್ಲದೆ ಭಾಗವಹಿಸಿದ್ದರು.

ಮಳೆಯಿಂದ ಕಡಲೆಕಾಯಿ ಆವಕ ಕಡಿಮೆ...

ಕಡಲೆಕಾಯಿ ಪರಿಷೆ ಎಂದರೆ ನಾಲ್ಕಾರು ವರ್ಷಗಳ ಹಿಂದೆ ಬಸವನಗುಡಿ ಮುಖ್ಯರಸ್ತೆಯ ಇಕ್ಕೆಲಗಳಲ್ಲಿ ಹಲವು ಬಗೆಯ ಕಡಲೆಕಾಯಿ ರಾಶಿರಾಶಿಯಾಗಿ ಕಾಣಸಿಗುತ್ತಿತ್ತು. ರಾಶಿಯ ಜತೆಗೆ ಮೂಟೆಗಟ್ಟಲೆ ಕಡಲೆಕಾಯಿ ವ್ಯಾಪಾರಿಗಳ ಮಳಿಗೆಗಳಲ್ಲಿರುತ್ತಿದ್ದವು. ಆದರೆ, ಈ ಬಾರಿ ಕಡಲೆಕಾಯಿ ರಾಶಿ, ಮೂಟೆ ಎಲ್ಲವೂ ಕಡಿಮೆ.

'ನವೆಂಬರ್‌ವರೆಗೂ ಸಾಕಷ್ಟು ಮಳೆಯಾದ ಕಾರಣ ಇಳುವರಿ ಸಾಕಷ್ಟು ಕಡಿಮೆಯಾಗಿದೆ. ನೀರು ಹೆಚ್ಚು ನಿಂತಿದ್ದರಿಂದ ಕಾಯಿ ಕೊಳೆತುಹೋಗಿದೆ' ಎಂದು ವ್ಯಾಪಾರಿ ಚಿನ್ನಮ್ಮ ಹೇಳಿದರು.

'ನಗರದ ಸುತ್ತಮುತ್ತಲಿನ ಪ್ರದೇಶಗಳಾದ ಕನಕಪುರ, ದೊಡ್ಡಬಳ್ಳಾಪುರ, ರಾಮನಗರ, ಮಾಗಡಿ, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಮೈಸೂರು, ಮಂಡ್ಯ, ತುಮಕೂರು ಕಡೆಗಳಿಂದ ಕಡಲೆಕಾಯಿಯನ್ನು ಇಲ್ಲಿಗೆ ತಂದು ಮಾರಾಟ ಮಾಡಲಾಗುತ್ತದೆ. ತಮಿಳುನಾಡಿನಿಂದಲೂ ಒಂದಷ್ಟು ಬರುತ್ತದೆ' ಎಂದು ವ್ಯಾಪಾರಿ ಚಿನ್ನಸ್ವಾಮಿ ಹೇಳಿದರು.

'ಬಡವರ ಬಾದಾಮಿ' ಕಡಲೆಕಾಯಿಗೂ ಈಗ ಸರಿಸುಮಾರು ಬಾದಾಮಿ ಬೆಲೆಯೇ ಬಂದಂತಾಗಿದೆ. ಒಂದು ಲೀಟರ್‌ಗೆ (ಸೇರು) ₹60. ಹಸಿ, ಹುರಿದ ಕಡಲೆಕಾಯಿಗೂ ಒಂದೇ ಬೆಲೆ. ಒಂದಷ್ಟು ಹೆಚ್ಚಿನ ಗುಣಮಟ್ಟದ ಕಾಯಿ ಬೇಕೆಂದರೆ ಬೆಲೆ ಮತ್ತಷ್ಟು ಹೆಚ್ಚು.

ಬಸವನಗುಡಿ ಮುಖ್ಯರಸ್ತೆಯಲ್ಲಿ ಗುರುವಾರ ಸಂಜೆಯಿಂದಲೇ ಕಡಲೆಕಾಯಿ ಹಾಗೂ ಆಟಿಕೆ, ತಿನಿಸುಗಳ ಮಳಿಗೆ ಆರಂಭವಾಗಿದ್ದವು. ವಾರಾಂತ್ಯದಲ್ಲಿ ಮಳಿಗೆ ಹಾಗೂ ಜನರ ಆಗಮನ ಹೆಚ್ಚಾಯಿತು. ಕಡಲೆಕಾಯಿ ರಾಶಿಗಳಿಗಿಂತ ಇತರೆ ಮಳಿಗೆಗಳ ಅಬ್ಬರವೇ ಹೆಚ್ಚಾಗಿತ್ತು.

ದೊಡ್ಡ ಬಸವಣ್ಣ, ದೊಡ್ಡ ಗಣತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಅನುಭವಿಸಿದರು. ಭೇಲ್, ಬಜ್ಜಿ, ಮಸಾಲ ಹಪ್ಪಳ, ಆಲೂ ಟ್ವಿಸ್ಟರ್... ಪ್ರಮುಖ ತಿನಿಸುಗಳಾಗಿ ಮನಸೆಳೆದವು. ಮಕ್ಕಳು ಸೇರಿದಂತೆ ಎಲ್ಲ ವಯೋಮಾನದವರನ್ನು ಹೆಚ್ಚಾಗಿ ಸೆಳೆದದ್ದು ಟೊರಾಟೊರಾ, ಜಾಯಿಂಟ್ ವೀಲ್, ತೇಲುವ ಹಡಗು ಇತರೆ ಆಟಗಳು. ರಾಕ್ಷಸನ ಬೆಳಕಿನ ಕೊಂಬುಗಳು, ಏಂಜಲ್ ಕಿರೀಟ, ವಿವಿಧ ರೀತಿಯ ಪೀಪಿಗಳು, ಬಲೂನ್‌ಗಳು ಮಕ್ಕಳನ್ನು ಹೆಚ್ಚು ಆಕರ್ಷಿಸಿದವು. ಬೊಂಬೆ ಮಿಠಾಯಿಯಿಂದ ಕೈಗೆ ವಾಚು, ಬೆರಳಿಗೆ ಉಂಗುರುವನ್ನು ಮಕ್ಕಳಿಗೆ ತೊಡಿಸಿ ಪೋಷಕರು ಸಂಭ್ರಮಿಸಿದರು. ಮಕ್ಕಳಿಗೆ ಎಂದೂ ಕಾಣದ ಸಂಭ್ರಮ.

'ಕಳೆದ ಬಾರಿ ಕೊರೊನಾ ಆತಂಕದಿಂದ ಪರಿಷೆಗೆ ಬಂದಿರಲಿಲ್ಲ. ಈ ಬಾರಿ ಕುಟುಂಬದೊಂದಿಗೆ ಬಂದಿದ್ದೇವೆ. ಮಕ್ಕಳು ಆನಂದಿಸುತ್ತಿದ್ದಾರೆ. ಬೃಹತ್ ಮಾಲ್‌ಗಳ ಮಳಿಗೆಗಳನ್ನು ಕಂಡಿರುವ ಮಕ್ಕಳು ಇಂತಹ ಜಾತ್ರೆಯ ಸೊಬಗನ್ನೂ ಅರಿಯುವ ತಾಣ ಇದಾಗಿದೆ' ಎಂದು ಗಿರಿನಗರದ ಜಗನ್ನಾಥ್ ಎಂದರು.

'ಇದು ಕಡಲೆಕಾಯಿ ಪರಿಷೆ. ಈ ಮೊದಲು ಕಡಲೆಕಾಯಿಗಳ ರಾಶಿ ಕಾಣಸಿಗುತ್ತಿತ್ತು. ಇತ್ತೀಚೆಗೆ ಬದಲಾಗಿದೆ. ಇದೀಗ ಜಾತ್ರೆ ಯಂತಾಗಿದೆ. ಜಾತ್ರೆ ಎಂದರೆ ಎಲ್ಲವೂ ಸಿಗುವ ತಾಣ. ಅಡುಗೆ ಮನೆಯಿಂದ ಹಿಡಿದು ಮನೆಯ ಎಲ್ಲ ಉಪಕರಣ, ಸೌಂದರ್ಯ ಸಾಧನಗಳು ಸೇರಿದಂತೆ ಉಡುಪುಗಳೂ ಇಲ್ಲಿ ಸಿಗುತ್ತಿವೆ. ಬೀದಿಬದಿಯ ತಿನಿಸುಗಳೂ ಮನಸೆಳೆಯುತ್ತಿವೆ. ಮಾಲ್ ಸಂಸ್ಕೃತಿ ನಡುವೆ ಮಕ್ಕಳಿಗೆ ನಮ್ಮ ಆಚರಣೆಯನ್ನು ಒಂದಷ್ಟು ತಿಳಿಸುವ ಪರಿಷೆ ಇದು' ಎಂದು ರಾಜರಾಜೇಶ್ವರಿನಗರದ ಶ್ರೀನಿವಾಸ್ ಅಭಿಪ್ರಾಯಪಟ್ಟರು.

ಪ್ಲಾಸ್ಟಿಕ್ ಮುಕ್ತ: ಪ್ಲಾಸ್ಟಿಕ್ ಏಕೆ, ಬಟ್ಟೆ ಚೀಲ ಓಕೆ... ಉಫೇ ಉಫೇ ಬಟ್ಟೆ ಚೀಲ, ಬೇಡ ಬೇಡ ಪ್ಲಾಸ್ಟಿಕ್ ಚೀಲ... ಹೀಗೆಂದು ಬಹುತೇಕ ವ್ಯಾಪಾರಿಗಳು ಫಲಕ ಹಾಕಿಕೊಂಡು, ಪೇಪರ್ ಅಥವಾ ಬಟ್ಟೆ ಚೀಲಗಳಲ್ಲಿ ಕಡಲೆಕಾಯಿ ನೀಡುತ್ತಿದ್ದರು. ಪ್ಲಾಸ್ಟಿಕ್ ಬಳಕೆ ನಿರ್ಬಂಧಿಸಿ ಬಿಬಿಎಂಪಿ ಆದೇಶಿಸಿದ್ದ ಹಿನ್ನೆಲೆಯಲ್ಲಿ ಪೇಪರ್ ಹಾಗೂ ಬಟ್ಟೆಯ ಚೀಲಗಳ ಬಳಕೆಯೇ ಹೆಚ್ಚಾಗಿತ್ತು.



ಕಡಲೆಕಾಯಿ ಪರಿಷೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಚಾಲನೆ ನೀಡಿದರು. ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ರವಿ ಸುಬ್ರಮಣ್ಯ, ಉದಯ ಗರುಡಾಚಾರ್, ವಿಧಾನ ಪರಿಷತ್ ಸದಸ್ಯರಾದ ಯು.ಬಿ.ವೆಂಕಟೇಶ್, ಟಿ.ಎ. ಶರವಣ, ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ ಇದ್ದರು

'ಇತಿಹಾಸ ಸೃಷ್ಟಿಸಬೇಕು'

ಬೆಂಗಳೂರು: 'ನಾವೆಲ್ಲ ಇತಿಹಾಸ ಸೃಷ್ಟಿಸಬೇಕು ಅಥವಾ ಇತಿಹಾಸದ ಭಾಗವಾಗಬೇಕು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಸವನಗುಡಿಯಲ್ಲಿ ಬಸವನಿಗೆ ಕಡಲೆಕಾಯಿ ತುಲಾಭಾರ ನೆರವೇರಿಸಿ ಕಡಲೆಕಾಯಿ ಪರಿಷೆಗೆ ಭಾನುವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಕೆಂಪೇಗೌಡರು ಇತಿಹಾಸ ಸೃಷ್ಟಿಸಿದವರು. ನಗರ ಅಭಿವೃದ್ಧಿಯಾಗಬೇಕು. ವ್ಯಾಪಾರ ಹೆಚ್ಚಾಗಬೇಕು. ಕೃಷಿ ಮುಂದುವರಿಯಬೇಕು. ರೈತರಿಗೆ ಮಾರುಕಟ್ಟೆಯೊಂದಿಗೆ ಸಂಬಂಧ ಇರಬೇಕು. ಎಲ್ಲ ವೃತ್ತಿಗಳಿಗೆ ಅವರವರ ಪೇಟೆ ಇರಬೇಕು ಎಂಬ ದೂರದೃಷ್ಟಿಯಿಂದ ನಗರ ನಿರ್ಮಿಸಿದರು ಎಂದರು

'ನಗರದ ಇತಿಹಾಸ, ಕುರುಹುಗಳಿರುವ ಪ್ರದೇಶಗಳ ಅಭಿವೃದ್ಧಿಗೆ ನಿರ್ಧರಿಸಲಾಗಿದೆ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆ ಪಾರಂಪರಿಕ ತಾಣಗಳನ್ನು ದತ್ತು ತೆಗೆದುಕೊಂಡು ಅಭಿವೃದ್ಧಿ ಮಾಡಬಹುದು' ಎಂದರು.

'ಶಾಸಕ ರವಿ ಸುಬ್ರಮಣ್ಯ ಆಶಯದಂತೆ ಬಸವನಗುಡಿಯನ್ನು ಪಾರಂಪರಿಕ ಪ್ರದೇಶ ಎಂದು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿಸಲಾಗುತ್ತದೆ. ಕೆಂಪಾಂಬುಧಿ ಕೆರೆಯಲ್ಲಿ ರೋಪ್‌ವೇಗೆ ಮುಂದಿನ ಬಜೆಟ್‌ನಲ್ಲಿ ಹೆಚ್ಚು ಅನುದಾನ ನೀಡಲಾಗುತ್ತದೆ' ಎಂದರು

'ಪ್ರತಿ ವರ್ಷ ಕಡಲೆಕಾಯಿಯ ಪ್ರಥಮ ಫಸಲನ್ನು ನಿನಗೆ ಕೊಡುತ್ತೇವೆ. ಬಸವಣ್ಣಗೆ ದೇವಸ್ಥಾನ ಕಟ್ಟುತ್ತೇವೆ ಎಂದು ಬಸವನ ಆರ್ಶೀವಾದ ಪಡೆದ ಕ್ಷೇತ್ರ ಬಸವನಗುಡಿ ಆಗಿದೆ' ಎಂದರು.

'ಬೃಹತ್ ಬಸವ ಕನ್ನಡನಾಡಿನ ಸಂಸ್ಕೃತಿ, ಕಾಯಕ ಸಂಕೇತ ಈ ಬಸವ. ನನಗೆ ಕಡಲೆಕಾಯಿ ಎಂದರೆ ಹೆಚ್ಚು ಪ್ರೀತಿ. ಕಡಲೆಕಾಯಿ ನಮ್ಮ ಪೂರ್ವಜನರನ್ನು ಹೊರತರುತ್ತದೆ. ಕಡಲೆಕಾಯಿ ಮಂಗನಿಗೆ ಹೆಚ್ಚು ಪ್ರೀತಿ. ನಮಗಿಂತ ಚೆನ್ನಾಗಿ ಅದು ತಿನ್ನುತ್ತದೆ' ಎಂದರು.

ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಮ್ ರಾಯ್ ಪುರ ಹಾಗೂ ಬಿಬಿಎಂಪಿ ಅಧಿಕಾರಿಗಳು ಹಾಜರಿದ್ದರು

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಯಶವಂತಪುರದ ಅಂದ್ರಹಳ್ಳಿ ಮುಖ್ಯರಸ್ತೆಯ ಮಧ್ಯ ಗುಂಡಿ ಬಿದ್ದಿರುವುದು.

'ಅಂದ್ರಹಳ್ಳಿಯಲ್ಲಿನ ರಸ್ತೆ ಗುಂಡಿ ಮುಚ್ಚಿ'

ಯಶವಂತಪುರ ವಿಧಾನಸಭಾ ಕ್ಷೇತ್ರದ ವಿದ್ಯಮಾನ್ಯನಗರ ವಾರ್ಡ್‌ನ ಅಂದ್ರಹಳ್ಳಿ ಮುಖ್ಯರಸ್ತೆಯ ಮಧ್ಯದಲ್ಲಿ ಗುಂಡಿ ಬಿದ್ದಿದೆ. ಇಲ್ಲಿ ನಿತ್ಯ ನೂರಾರು ವಾಹನಗಳು ಸಂಚರಿಸುತ್ತವೆ. ಇದುವರೆಗೂ ಬಿಬಿಎಂಪಿ ಈ ರಸ್ತೆಯಲ್ಲಿರುವ ಗುಂಡಿಗಳನ್ನು ನೋಡಿಲ್ಲ. ಸ್ಥಳೀಯ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಆದಷ್ಟು ಬೇಗ ರಸ್ತೆ ಗುಂಡಿ ಮುಚ್ಚಿಸುವ ಕಾರ್ಯ ಕೈಗೊಳ್ಳಬೇಕು.

ಆರ್. ಚಂದ್ರಶೇಖರ, ಸ್ಥಳೀಯ ನಿವಾಸಿ



ಪೀಣ್ಯ 1ನೇ ಹಂತದ ಟಿವಿಎಸ್ ವೃತ್ತದಲ್ಲಿ ರಾಜಕಾಲುವೆ ಸ್ಥಿತಿ.

ದುರಸ್ತಿಯಾಗದ ರಾಜಕಾಲುವೆ

ಪೀಣ್ಯ 1ನೇ ಹಂತದ ಟಿವಿಎಸ್ ವೃತ್ತದಿಂದ ಪೊಲೀಸ್ ಠಾಣೆಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿರುವ ರಾಜಕಾಲುವೆ ಒಡೆದು ಮೂರು ವರ್ಷಗಳಾದರೂ ದುರಸ್ತಿಯಾಗಿಲ್ಲ. ಮಳೆ ಬಂದರೆ ನೀರೆಲ್ಲ ಮನೆಗಳಿಗೆ ನುಗ್ಗುತ್ತದೆ. ಜತೆಗೆ ಸಾರ್ವಜನಿಕರು ಇಲ್ಲಿಯೇ ಕಸ ಚೆಲ್ಲುವುದರಿಂದ ಮೋರಿ ನೀರು ಹೋಗದೆ ಕಟ್ಟಿಕೊಂಡು, ಗಬ್ಬೆದ್ದು ನಾರುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಸದಾನಂದ, ಆದರ್ಶನಗರ, ಅರಿಶಿನ ಕುಂಟೆ, ನೆಲಮಂಗಲ



ದುಃಸ್ಥಿತಿಯಲ್ಲಿ ನ್ಯೂ ಟೌನ್ ರಸ್ತೆ.

'ವಾಹನ ಸವಾರರ ಪರದಾಟ'

ನೆಲಮಂಗಲದ ಪ್ರತಿಷ್ಠಿತ ಬಡಾವಣೆಯಾಗಿ ಬೆಳೆಯುತ್ತಿರುವ ನ್ಯೂ ಟೌನ್ ರಸ್ತೆಗಳು ಗುಂಡಿಗಳಿಂದ ಕೂಡಿವೆ. ಇಲ್ಲಿ ವಾಹನ ಸವಾರರು ಪ್ರತಿನಿತ್ಯ ಸಂಕಷ್ಟದಲ್ಲಿ ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರಸ್ತೆ ಹಲವು ಬಡಾವಣೆಗಳಿಗೆ ಸಂಪರ್ಕ ಕಲ್ಪಿಸುತ್ತದೆ. ಮಾರಪ್ಪನ ಪಾಳ್ಯ ಸಂಪರ್ಕಿಸುವ ಮುಖ್ಯರಸ್ತೆಯಾಗಿದೆ. ಈ ರಸ್ತೆಯಲ್ಲಿ ಅವಸರದಲ್ಲಿ ಸಂಚರಿಸುವಾಗ ಅಪಘಾತಗಳು ಸಂಭವಿಸಿವೆ. ಬಡಾವಣೆಗಳಲ್ಲಿ ಹೊಸ ಕಟ್ಟಡಗಳು ನಿರ್ಮಾಣ ಮಾಡುತ್ತಿದ್ದು, ಕಟ್ಟಡ ಸಾಮಗ್ರಿಗಳನ್ನು ತೆಗೆದುಕೊಂಡು ಹೋಗುವ ಬೃಹತ್ ಲಾರಿಗಳು ಸಂಚರಿಸುವುದರಿಂದ ರಸ್ತೆಯ ಗುಂಡಿಗಳು ಹೊಂಡಗಳಾಗಿ ಪರಿಣಮಿಸಿವೆ. ಚರಂಡಿ ವ್ಯವಸ್ಥೆಯಿಲ್ಲದೆ ರಸ್ತೆಯ ಮೇಲೆಯೇ ಮೋರಿ ನೀರು ಹರಿಯುತ್ತಿದೆ.

ಈ ಸಂಬಂಧ ಸಾರ್ವಜನಿಕರು ಸಂಬಂಧಪಟ್ಟ ಸಚಿವರಿಗೆ ಮತ್ತು ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ರಸ್ತೆ ಸರಿಪಡಿಸಿ ಗುಂಡಿಗಳನ್ನು ಮುಚ್ಚುವಲ್ಲಿ ಮೀನಮೇಷ ಎಣಿಸುತ್ತಿದ್ದಾರೆ. ಸಾರ್ವಜನಿಕರ ಜೀವನದ ಜೊತೆ ಚೆಲ್ಲಾಟವಾಡುತ್ತಿದ್ದಾರೆ. ತುರ್ತು ಕ್ರಮ ಕೈಗೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನಗರಸಭೆಯ ಕಚೇರಿಯ ಮುಂದೆ ಸ್ಥಳೀಯರೆಲ್ಲ ಸೇರಿ ಪ್ರತಿಭಟನೆ ಕೈಗೊಳ್ಳುವುದು ಅನಿವಾರ್ಯ.

ನಂದೀಶ್ ನೆಲಮಂಗಲ, ನ್ಯೂ ಟೌನ್ ನಿವಾಸಿ.

'ರಸ್ತೆ ದುರಸ್ತಿಗೊಳಿಸಿ'

ವಿಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ನಂಬರ್ 122ರ ಕೆಂಪಾಪುರ ಅಗ್ರಹಾರ 7ನೇ 'ಎ' ಮುಖ್ಯರಸ್ತೆ ಸಂಪೂರ್ಣ ಹಾಳಾಗಿದೆ. ದೂಳಿನಿಂದಾಗಿ ಸ್ಥಳೀಯ ನಾಗರಿಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಈ ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ, ಸಂಬಂಧಪಟ್ಟವರಿಗೆ ಅಧಿಕಾರಿಗಳಿಗೆ ಈಗಾಗಲೇ ಹಲವು ಬಾರಿ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಲಾದರೂ ಇದರ ಬಗ್ಗೆ ಗಮನ ಹರಿಸಿ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಬೇಕು.

ಎಂ. ಉಮಾಶಂಕರಬಾಬು, ಕೆಂಪಾಪುರ ಅಗ್ರಹಾರ ಮಾಗಡಿ ರಸ್ತೆ



ವಿಜಯನಗರದ ಕೆಂಪಾಪುರ ಅಗ್ರಹಾರದ 7ನೇ ಮುಖ್ಯರಸ್ತೆ

‘ಲಾಲ್‌ಬಾಗ್ ಏನು ಸಚಿವರ ಪಿತ್ರಾರ್ಜಿತ ಆಸ್ತಿಯೇ’

ಸಸ್ಯಕಾಶಿಯಲ್ಲಿ ಸಮಸ್ಯೆಗಳ ರಾಶಿ ಇರುವುದಕ್ಕೆ ಜನರಿಂದ ಬಂದಿರುವ ಪ್ರತಿಕ್ರಿಯೆಗಳೇ ಸಾಕ್ಷಿ. ತೋಟಗಾರಿಕಾ ಸಚಿವ ಮುನಿರತ್ನ ಅವರು ಅಲ್ಲಿ ‘ಜನಸ್ಪಂದನ’ ನಡೆಸಬೇಕೆಂಬ ವಿನಂತಿಗೆ ಒಪ್ಪಿಗೆ ನೀಡಲಿಲ್ಲ. ಇದರಿಂದ ಜನರಿಗೆ ಅಹವಾಲು ಹೇಳಿಕೊಂಡು, ಅಲ್ಲಿಯೇ ಪರಿಹಾರ ಪಡೆಯುವ ಅವಕಾಶವೊಂದನ್ನು ತಪ್ಪಿಸಿದಂತೆ ಆಗಿದೆ. ಅಂತಹ ಜನದನಿಗೆ ‘ಪ್ರಜಾವಾಣಿ’ ಈ ಮೂಲಕ ವೇದಿಕೆ ಒದಗಿಸಿದೆ.




‘ಜನಸಂಪರ್ಕ ಸಭೆಗೆ ಅನುಮತಿ ಏಕಿಲ್ಲ’



ಲಾಲ್‌ಬಾಗ್‌ನಲ್ಲಿ ಬೀದಿ ನಾಯಿಗಳ ಕಾಟ ಹೆಚ್ಚಾಗಿದೆ. ಅವುಗಳಿಗೆ ಚೀಲಗಳಲ್ಲಿ ತಿಂಡಿ–ತಿನಿಸು ಹಾಕುವವರನ್ನು ನಿಯಂತ್ರಿಸಬೇಕು. ಎಲ್ಲೆಂದರಲ್ಲಿ ಮೂತ್ರ ವಿಸರ್ಜನೆ ಮಾಡುವವರಿಗೆ ದಂಡ ವಿಧಿಸಬೇಕು. ವಸ್ತುಗಳನ್ನು ಹಿಡಿದು ಮಾರಾಟ ಮಾಡಲು ಬರುವವರನ್ನು ನಿಯಂತ್ರಿಸಬೇಕು. ಪ್ರವಾಸಿಗರ ಹೆಸರಿನಲ್ಲಿ ಕೆಲ ಪುಂಡರು ಬಂದು ಅಸಭ್ಯವಾಗಿ ವರ್ತಿಸುತ್ತಿದ್ದು, ಇದು ಸಾರ್ವಜನಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಜನರ ಸಮಸ್ಯೆ ಆಲಿಸಲು ಜನಸಂಪರ್ಕ ಸಭೆ ನಡೆಸಲು ತೋಟಗಾರಿಕಾ ಸಚಿವರು ಅನುಮತಿ ನೀಡುತ್ತಿಲ್ಲ ಎಂದರೆ ಲಾಲ್‌ಬಾಗ್ ಅವರ ಪಿತ್ರಾರ್ಜಿತ ಆಸ್ತಿಯೇ?

ಕೆ.ಕೆ.ರಾಜಣ್ಣ, ಬಸವನಗುಡಿ

ಸಚಿವರ ಬೇಜವಾಬ್ದಾರಿ...



ಚಿಕ್ಕ ವಯಸ್ಸಿನಿಂದಲೂ ಈ ಲಾಲ್‌ಬಾಗ್‌ನಲ್ಲಿ ಆಟವಾಡುತ್ತಾ ಬೆಳೆದಿದ್ದೇನೆ. ಬೇರೆಯವರಿಗೆ ಸಸ್ಯಕಾಶಿ, ಹೂತೋಟ.. ಏನೇನೋ ಆಗಿರಬಹುದು. ನನಗೆ ಇದು ‘ನಮ್ಮ ಲಾಲ್‌ಬಾಗ್’. ಇಂದು ಈ ಲಾಲ್‌ಬಾಗ್ ಅನ್ನು ಸ್ವಚ್ಛತೆ ಇಲ್ಲದೆ ಹಾಳು ಮಾಡುತ್ತಿರುವುದು ನೋವಾಗುತ್ತಿದೆ. ಲಾಲ್‌ಲಾಗ್ ಅಂತರರಾಷ್ಟ್ರೀಯ ದರ್ಜೆಗೆ ಕೊಂಡೊಯ್ಯುವಂತಹ ತಾಣವಾಗಬೇಕು. ಮೊದಲು ಇಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳಿ. ಹೊಸ ತಂತ್ರಜ್ಞಾನ ಬಳಸಿಕೊಳ್ಳಿ ಎಂದು ತೋಟಗಾರಿಕೆ ಸಚಿವ ಮುನಿರತ್ನ ಅವರಿಗೆ ಹೇಳಿದರೆ, ‘ಈಗಲೇ ಒಂದು ಕೋಟಿ ರೂಪಾಯಿ ಸ್ಯಾಂಕ್ಷನ್ ಮಾಡುತ್ತೇನೆ’ ಎಂದು ಪ್ರಚಾರ ತೆಗೆದುಕೊಂಡರು. ಈವರೆಗೆ ಯಾವುದೇ ಹಣ ಬಂದಿಲ್ಲ. ಇಂತಹ ಬೇಜವಾಬ್ದಾರಿ ಸಚಿವರಿಂದ ಏನು ತಾನೆ ಸಾಧ್ಯ? ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾಗಿದ್ದಾಗ ಲಾಲ್‌ಬಾಗ್ ಅನ್ನು ಉನ್ನತೀಕರಿಸಲಾಗಿತ್ತು. ಸ್ವಚ್ಛತೆ ಕಾಪಾಡಲು ಯೋಜನೆ ಅನುಷ್ಠಾನಗೊಳಿಸಲಾಗಿತ್ತು. ಅಲ್ಲದೆ, ಲಾಲ್‌ಲಾಗ್‌ನ ನಿರ್ದಿಷ್ಟ ಸ್ಥಳದಲ್ಲಿ ಮಾತ್ರ ಫುಡ್ ಕೋರ್ಟ್ ಸ್ಥಾಪಿಸಲು ಸೂಚಿಸಲಾಗಿತ್ತು. ಆದರೆ, ನಂತರದ ಸಚಿವರು, ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡಿಲ್ಲ.

ಉದಯಶಂಕರ್, ಬಿಬಿಎಂಪಿ ಮಾಜಿ ಸದಸ್ಯ, ಸಿದ್ದಾಪುರ

ಮೂಲಸೌಕರ್ಯ: ಶಾಸಕರೊಂದಿಗೆ ಚರ್ಚೆ



ಲಾಲ್‌ಬಾಗ್‌ನಲ್ಲಿ ನಾಯಿಗಳ ಕಾಟ, ಹಾಪ್‌ಕಾಮ್ಸ್ ಮುಚ್ಚಿದ್ದರಿಂದ ಆಗಿರುವ ತೊಂದರೆ ಸೇರಿ ಉದ್ಯಾನದ ಮೂಲಸೌಕರ್ಯಗಳ ಬಗ್ಗೆ ಬಂದಿದ್ದ ದೂರುಗಳ ಬಗ್ಗೆ ಕ್ಷೇತ್ರದ ಶಾಸಕರೊಂದಿಗೆ ಚರ್ಚಿಸಿದ್ದೇನೆ. ಅವುಗಳ ಪಟ್ಟಿಯನ್ನೂ ಶಾಸಕರಿಗೆ ಕೊಟ್ಟಿದ್ದೇನೆ. ತೋಟಗಾರಿಕೆ ಇಲಾಖೆ ಈ ಉದ್ಯಾನ ನಿರ್ವಹಿಸುತ್ತಿದೆ. ಅಗತ್ಯ ಮೂಲಸೌಕರ್ಯದ ಬಗ್ಗೆ ಶಾಸಕರೊಂದಿಗೆ ಮತ್ತೊಮ್ಮೆ ಮಾತನಾಡುತ್ತೇನೆ.

ವಾಣಿ ವಿ.ರಾವ್, ವಿಶ್ವೇಶ್ವರಪುರ ವಾರ್ಡ್‌ನ ಮಾಜಿ ಸದಸ್ಯೆ

ಅಕ್ರಮ ಚಟುವಟಿಕೆ ತಡೆಯಿರಿ



ಲಾಲ್‌ಬಾಗ್‌ನ ಮೂರು ಪ್ರವೇಶ ದ್ವಾರಗಳಲ್ಲಿ ಬರುವ ಸಾರ್ವಜನಿಕರನ್ನು ತಪಾಸಣೆ ನಡೆಸಿ ಒಳಗೆ ಪ್ರವೇಶ ನೀಡುವ ವ್ಯವಸ್ಥೆಯಾಬೇಕು. ಮದ್ಯ ವ್ಯಸನಿಗಳ ಹಾವಳಿಯೂ ಇದೆ. ತಂಬಾಕು, ಗುಟ್ಕಾ ಸೇರಿ ಮಾದಕ ವಸ್ತುಗಳನ್ನು ಉದ್ಯಾನದೊಳಗೆ ತರದಂತೆ ನಿಷೇಧ ಹೇರಬೇಕು. ಸಸಿಗಳನ್ನು ಖರೀದಿಸಲು ಬರುವ ಗ್ರಾಹಕರಿಂದ ಪಾರ್ಕಿಂಗ್ ಶುಲ್ಕ ಪಡೆಯಲಾಗುತ್ತಿದ್ದು, ಸಸಿಗಳ ಬೆಲೆಗಿಂತ ಪಾರ್ಕಿಂಗ್ ಶುಲ್ಕವೇ ಹೆಚ್ಚಾಗಿದೆ. ಅದನ್ನು ನಿಲ್ಲಿಸಬೇಕು.

ಸಿ.ಗಣೇಶ್ ಬಾಬು, ಸಂಪಂಗಿರಾಮನಗರ


‘ಪ್ರವಾಸಿಗರ ಆಕರ್ಷಣೆಗೆ ಕ್ರಮ ವಹಿಸಿ’



ನಾನು ಪ್ರತಿದಿನ ಸಂಜೆ ಲಾಲ್‌ಬಾಗ್‌ಗೆ ಭೇಟಿ ನೀಡುತ್ತೇನೆ. ವಾಯು ವಿಹಾರಿಗಳಲ್ಲದೇ, ಪ್ರತಿದಿನ ಸಾವಿರಾರು ಪ್ರವಾಸಿಗರು ಲಾಲ್‌ಬಾಗ್‌ಗೆ ಭೇಟಿ ನೀಡುತ್ತಾರೆ. ವಾರಾಂತ್ಯ, ಹಬ್ಬ ಮತ್ತು ಸರ್ಕಾರಿ ರಜಾದಿನಗಳಲ್ಲಿ ಸಂದರ್ಶಕರ ಸಂಖ್ಯೆ ಹೆಚ್ಚು. ಒಣಗಿರುವ ಪುಟ್ಟ ಜಲಪಾತಗಳನ್ನು ನೋಡಿದರೆ ಬೇಸರವಾಗುತ್ತದೆ. ಅವುಗಳನ್ನು ಪ್ರವಾಸಿಗರ ಆಕರ್ಷಣೆಯನ್ನಾಗಿ ಮಾಡಲು ಸಂಬಂಧಪಟ್ಟವರು ಗಮನ ಹರಿಸಬೇಕು.

ಪ್ರಕಾಶ್, ಜಯನಗರ 2ನೇ ಬ್ಲಾಕ್

ಅಧಿಕಾರಿಗಳಿಗೆ ಯಾವ ಕೊರತೆ ಇದೆ?



ಲಾಲ್‌ಬಾಗ್ ನೋಡಲು ರಾಜ್ಯದವರಷ್ಟೇ ಅಲ್ಲ ದೇಶ–ವಿದೇಶದಿಂದ ಜನ ಬರುತ್ತಾರೆ. ಇದನ್ನು ಅಷ್ಟೇ ಉನ್ನತಮಟ್ಟಕ್ಕೆ ಅಭಿವೃದ್ಧಿ ಮಾಡಬೇಕಾದ ಅಗತ್ಯ ಇದೆ. ನಗರಕ್ಕೆ ಹಸಿರ ಕಿರೀಟದಂತೆ ಇರಬೇಕಾದ ಲಾಲ್‌ಬಾಗ್‌ನಲ್ಲಿ ಸ್ವಚ್ಛತೆ ಇಲ್ಲವಾಗಿರುವುದು ಬೇಸರದ ಸಂಗತಿ. ತೋಟಗಾರಿಕೆ ಇಲಾಖೆ ಅಧಿಕಾರಿಗಳಿಗೆ ಯಾವ ರೀತಿಯ ಕೊರತೆ ಇದೆಯೋ ಗೊತ್ತಾಗುತ್ತಿಲ್ಲ. ಇದನ್ನು ಉತ್ತಮವಾಗಿ ನಿರ್ವಹಿಸಬೇಕು. ಲಾಲ್‌ಬಾಗ್ ಒಳಗೆ ಕೆರೆ ಇದೆ. ಇಲ್ಲೊಂದು ಉತ್ತಮವಾದ ಬೋಟಿಂಗ್ ವ್ಯವಸ್ಥೆ ಕಲ್ಪಿಸದಿರುವುದು ಲೋಪವೇ ಸರಿ. ಸಿಂಗಪುರದಂತಹ ನಗರಗಳಲ್ಲಿ ಸಣ್ಣದೊಂದು ಹೊಂಡದಲ್ಲೂ ಉತ್ತಮ ವ್ಯವಸ್ಥೆಗಳಿರುತ್ತವೆ. ಇಲ್ಲಿ ಇಷ್ಟು ದೊಡ್ಡದಾದ ಕೆರೆ, ಹಸಿರು ಪರಿಸರದಲ್ಲಿದ್ದರೂ ಅದನ್ನು ನಿರ್ವಹಿಸದಿರುವುದು ಸರಿಯಲ್ಲ. ಪಾದಚಾರಿ ಮಾರ್ಗಗಳನ್ನೂ ಉತ್ತಮವಾಗಿ ಅಭಿವೃದ್ಧಿಪಡಿಸಬೇಕಿದೆ.

ಕಟ್ಟೆ ಸತ್ಯನಾರಾಯಣ, ಮಾಜಿ ಮೇಯರ್

ಪ್ರಜಾವಾಣಿ@75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ನೆಹರೂ ಯುವ ಕೇಂದ್ರದ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ

ಮಾತೃಭಾಷೆಯ ಬಲದಲ್ಲೇ ಅಭಿವೃದ್ಧಿ ಸಾಧ್ಯ: ರಾಜ್ಯಪಾಲ

ಪ್ರಜಾವಾಣಿ ವಾರ್ತೆ



ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದ ಅಡಿಯಲ್ಲಿ ವಿವಿಧ ರಾಜ್ಯಗಳಿಂದ ರಾಜ್ಯಕ್ಕೆ ಬಂದಿರುವ ಯುವಜನರನ್ನು ಸ್ವಾಗತಿಸಲು ಬೆಂಗಳೂರಿನ ಯವನಿಕಾ ಸಭಾಂಗಣದಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಡೊಳ್ಳು ಬಾರಿಸಿ ಸಂಭ್ರಮಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಮುಲ್ಲೈ ಮುಹಿಲನ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ಮಾತೃಭಾಷೆಯ ಬಲದಲ್ಲೇ ಅಭಿವೃದ್ಧಿ ಹೊಂದಲು ಸಾಧ್ಯವಿದೆ. ಮಾತೃಭಾಷೆಯ ಮಾಧ್ಯಮದ ಶಿಕ್ಷಣದ ಬಗ್ಗೆ ಕೀಳರಿಮೆ ಬೇಡ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ನೆಹರೂ ಯುವ ಕೇಂದ್ರದ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮದ ಅಡಿಯಲ್ಲಿ ಜಾರ್ಖಂಡ್, ಛತ್ತೀಸಗಢ, ಒಡಿಶಾ ಮತ್ತು ಬಿಹಾರ ರಾಜ್ಯಗಳಿಂದ ರಾಜ್ಯಕ್ಕೆ ಬಂದಿರುವ ಬುಡಕಟ್ಟು ಯುವಜನರ ತಂಡಗಳನ್ನು ಸ್ವಾಗತಿಸಲು ನಗರದ ಯವನಿಕಾ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಜಪಾನ್, ಫ್ರಾನ್ಸ್, ಚೀನಾ, ಜರ್ಮನಿ, ರಷ್ಯಾ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಇಂಗ್ಲಿಷ್ ಭಾಷಾ ಶಿಕ್ಷಣವಿಲ್ಲ. ಆ ದೇಶಗಳು ಮಾತೃಭಾಷಾ ಮಾಧ್ಯಮದ ಶಿಕ್ಷಣದ ಮೂಲಕವೇ ಜಗತ್ತಿನ ಪ್ರಬಲ ರಾಷ್ಟ್ರಗಳಾಗಿ ಬೆಳೆದಿವೆ. ಇಂಗ್ಲಿಷ್ ಭಾಷೆಯಿಂದಷ್ಟೇ ಅಭಿವೃದ್ಧಿ ಸಾಧ್ಯ ಎಂಬ ಭಾವನೆ ಸರಿಯಲ್ಲ ಎಂದರು.

ದೇಶದಲ್ಲಿ ಹಲವು ಭಾಷೆ ಮತ್ತು ಸಂಸ್ಕೃತಿಗಳಿವೆ. ವೈವಿಧ್ಯಮಯವಾದ ರಾಷ್ಟ್ರದಲ್ಲಿ ಎಲ್ಲ ಸಮುದಾಯಗಳೂ ಅಭಿವೃದ್ಧಿಯ ಭಾಗವಾಗಬೇಕು. 75 ವರ್ಷಗಳ ಸುದೀರ್ಘ ಪ್ರಯತ್ನದಿಂದ ದೇಶವು ಸಾಕಷ್ಟು ಅಭಿವೃದ್ಧಿ ಸಾಧಿಸಿದೆ.

> **ನಮ್ಮ ರಾಜ್ಯದಲ್ಲಿ ದೊಡ್ಡ ಪ್ರಮಾಣದ ಖನಿಜ ಸಂಪತ್ತಿದೆ. ಆದರೆ, ಇಲ್ಲಿನಷ್ಟು ಅಭಿವೃದ್ಧಿ ಹೊಂದಿಲ್ಲ. ಖನಿಜ ಸಂಪತ್ತಿನ ಲಾಭ ಕೆಲವೇ ಜನರ ಜೇಬು ಸೇರುತ್ತಿದೆ.**
> **ಸತೀಶ್ ರಾಮ್,** ಜಾರ್ಖಂಡ್ ಯುವಕ

ಪರಿಸರಕ್ಕೆ ಧಕ್ಕೆಯಾಗದಂತೆ ಬೆಳವಣಿಗೆ ಸಾಧಿಸುವ ಅಭಿವೃದ್ಧಿ ಮಾದರಿಗೆ ಒತ್ತು ನೀಡಬೇಕಿದೆ ಎಂದು ಸಲಹೆ ನೀಡಿದರು.

ಬೆಂಗಳೂರು ಅಭಿವೃದ್ಧಿಯಲ್ಲಿ ದೇಶದಲ್ಲೇ ಮುಂಚೂಣಿಯಲ್ಲಿರುವ ನಗರ. ಕರ್ನಾಟಕ ರಾಜ್ಯ ಕೂಡ ದೊಡ್ಡ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸಿದೆ. ಇಲ್ಲಿ ಮಠಗಳು, ಧಾರ್ಮಿಕ ಸಂಸ್ಥೆಗಳು ಉಚಿತವಾಗಿ ಶಿಕ್ಷಣ ನೀಡುತ್ತಿವೆ. ಇಂತಹ ಕೆಲಸ ಇತರ ರಾಜ್ಯಗಳಲ್ಲೂ ಆಗಬೇಕು. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯನ್ನು ತೊಲಗಿಸುವುದಕ್ಕೆ ಶಿಕ್ಷಣವನ್ನೇ ಬಳಸಿಕೊಳ್ಳಬೇಕು ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಮಾತನಾಡಿ, ‘ನಾಲ್ಕು ರಾಜ್ಯಗಳ ಯುವಜನರಿಗೆ ನೆಹರೂ ಯುವ ಕೇಂದ್ರದ ಮೂಲಕ ಬೆಂಗಳೂರು ಮತ್ತು ಕರ್ನಾಟಕವನ್ನು ಅರಿಯುವ ಅವಕಾಶ ಒದಗಿದೆ. ಭವಿಷ್ಯದ ಕುರಿತು ಹೊಸ ದಿಕ್ಸೂಚಿಯೊಂದಿಗೆ ಇಲ್ಲಿಂದ ಮರಳುವಂತೆ ಈ ಪ್ರವಾಸವನ್ನು ಬಳಸಿಕೊಳ್ಳಿ’ ಎಂದು ಪ್ರವಾಸಿ ತಂಡಗಳಿಗೆ ಕಿವಿಮಾತು ಹೇಳಿದರು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯುಕ್ತ ಮುಲ್ಲೈ ಮುಹಿಲನ್, ನೆಹರೂ ಯುವ ಕೇಂದ್ರದ ರಾಜ್ಯ ಘಟಕದ ನಿರ್ದೇಶಕ ಎಂ.ಎನ್. ನಟರಾಜ್, ಉಪ ನಿರ್ದೇಶಕ ಅನಿಲ್ ಕುಮಾರ್ ಉಪಸ್ಥಿತರಿದ್ದರು.

ಡೊಳ್ಳು ಹೆಗಲಿಗೇರಿಸಿದ ಗೆಹಲೋತ್

ಕಾರ್ಯಕ್ರಮದ ಉದ್ಘಾಟನಾ ವೇದಿಕೆಯಲ್ಲಿ ಛತ್ತೀಸ್‌ಗಡದ ಯುವ ತಂಡ ತಂದಿದ್ದ ಡೊಳ್ಳು ಬಾರಿಸುವಂತೆ ಆಯೋಜಕರು ರಾಜ್ಯಪಾಲರಿಗೆ ಮನವಿ ಮಾಡಿದರು. ಭಾರವಾದ ಡೊಳ್ಳನ್ನು ಹೆಗಲಿಗೇರಿಸಿಕೊಂಡೇ ಬಾರಿಸಿದ ರಾಜ್ಯಪಾಲ ಥಾವರಚಂದ್ ಗೆಹಲೋತ್, ಯುವಜನರೊಂದಿಗೆ ಸಂಭ್ರಮಿಸಿದರು.

ಭಾಷಣದ ಮಧ್ಯೆಯೇ ಬುಡಕಟ್ಟು ಯುವಕ, ಯುವತಿಯರೊಂದಿಗೆ ಸಂವಾದ ನಡೆಸಿದ ರಾಜ್ಯಪಾಲರು, ಆ ರಾಜ್ಯಗಳ ರಾಜ್ಯಪಾಲರು, ಅಲ್ಲಿನ ಪ್ರಸಿದ್ಧ ಕ್ರೀಡಾಪಟುಗಳ ಕುರಿತು ಪ್ರಶ್ನೆ ಕೇಳಿ, ಉತ್ತರ ಪಡೆದರು.

ಸಂಕ್ಷಿಪ್ತ ಸುದ್ದಿ

ಇಂದು ಬೆಂಗಳೂರು ಚಲೋ

ಬೆಂಗಳೂರು: ಕುರುಬ ಸಮುದಾಯಕ್ಕೆ ಎಸ್.ಟಿ ಮೀಸಲಾತಿ ಕಲ್ಪಿಸಲು ಆಗ್ರಹಿಸಿ ಹಾಲುಮತ ಮಹಾಸಭಾದಿಂದ ನ.21ರಂದು ಬೆಂಗಳೂರು ಚಲೋ ಹಮ್ಮಿಕೊಳ್ಳಲಾಗಿದೆ.

ಕುರುಬ ಸಮುದಾಯಕ್ಕೆ ಎಸ್.ಟಿ ಮೀಸಲಾತಿಯಲ್ಲಿ ಅನ್ಯಾಯವಾಗುತ್ತಿದೆ. ಪರಿಶಿಷ್ಟ ಪಂಗಡದ ಮೀಸಲಾತಿ ಪಟ್ಟಿಯಲ್ಲಿ ಕುರುಬರಿಗೆ ಸಂಬಂಧಪಟ್ಟ ‘ಗೊಂಡ’, ‘ರಾಜಗೊಂಡ’, ‘ಜೇನುಕುರುಬ’, ‘ಕಾಡುಕುರುಬ’, ‘ಕಾಟ್ಟುನಾಯಕನ್’, ‘ಕುರುಮನ್ಸ್’ ಮತ್ತು ಕ್ರಮ ಸಂಖ್ಯೆ 28ರಲ್ಲಿ ‘ಕುರುಬ’ ಎಂಬ ಜಾತಿಗಳಿದ್ದರೂ ರಾಜ್ಯವ್ಯಾಪಿ ವಿಸ್ತಾರ ಮಾಡಿಲ್ಲ. ಈ ಅನ್ಯಾಯ ಸರಿಪಡಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿತ್ತು. ಆದರೆ, ಬೇಡಿಕೆ ಈಡೇರಿಸಿಲ್ಲ ಎಂದು ಮಹಾಸಭಾದ ಅಧ್ಯಕ್ಷ ರುದ್ರಣ್ಣ ಗುಳಗಳಿ ದೂರಿದ್ದಾರೆ.

ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಎಸ್.ಟಿ ಮೀಸಲಾತಿಗಾಗಿ ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗಿತ್ತು. ಆ ವರದಿ ಅಂಗೀಕರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು. ಮೀಸಲಾತಿ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸದೆ ಅಧ್ಯಯನ ವರದಿ ಅಂಗೀಕರಿಸಿ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಕೋರಿದ್ದಾರೆ.

ಫ್ರೀಡಂ ಪಾರ್ಕ್‌ನಲ್ಲಿ ನಡೆಯುವ ಪ್ರತಿಭಟನೆಗೆ ವಿವಿಧ ಜಿಲ್ಲೆಗಳಿಂದ ಜನರು ಬರಲಿದ್ದಾರೆ ಎಂದು ಮಾಹಿತಿ ನೀಡಿದ್ದಾರೆ.

ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ 2022–23ನೇ ಸಾಲಿನ ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸುವ ಅವಧಿಯನ್ನು ವಿಸ್ತರಿಸಿದೆ.

ವಿದ್ಯಾರ್ಥಿಗಳ ಮನವಿಯ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಪ್ರವೇಶಕ್ಕಾಗಿ ₹200 ಶುಲ್ಕದೊಂದಿಗೆ ಅರ್ಜಿಗಳನ್ನು ಸಲ್ಲಿಸಲು ನ.22 ಕೊನೆಯ ದಿನವಾಗಿದೆ ಎಂದು ಕುಲಸಚಿವರು ತಿಳಿಸಿದ್ದಾರೆ.

ಬಡ್ತಿ ನೀಡಲು ವಿಳಂಬ: ಕೆಪಿಟಿಸಿಎಲ್ ಎಂಜಿನಿಯರ್‌ಗಳ ದೂರು

ಬೆಂಗಳೂರು: ಕಿರಿಯ ಎಂಜಿನಿಯರ್ ಹುದ್ದೆಗಳಿಂದ ಸಹಾಯಕ ಎಂಜಿನಿಯರ್ ಹುದ್ದೆಗಳಿಗೆ ಬಡ್ತಿ ನೀಡುವಲ್ಲಿ ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ಕೆಪಿಟಿಸಿಎಲ್ ಡಿಪ್ಲೊಮಾ ಎಂಜಿನಿಯರ್ಸ್ ಅಸೋಸಿಯೇಷನ್ ತಿಳಿಸಿದೆ.

ಕಳೆದ ನಾಲ್ಕೂವರೆ ವರ್ಷಗಳಿಂದ ಬಡ್ತಿಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ನೀಡಿಲ್ಲ. 2018ರ ಮೇ 5ರಂದು ನೀಡಿರುವ ಬಡ್ತಿಯೇ ಕೊನೆಯದ್ದಾಗಿದೆ. ಬಡ್ತಿ ನೀಡುವಂತೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಜೆ. ಲೋಕೇಶ್, ಪ್ರಧಾನ ಕಾರ್ಯದರ್ಶಿ ಬಿ. ಮನೋಜ್ ಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಲಿನ ದರ ಹೆಚ್ಚಳಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕರ್ನಾಟಕ ಸಹಕಾರಿ ಹಾಲು ಮಹಾ ಮಂಡಳ (ಕೆಎಂಎಫ್) ರೈತರಿಂದ ಖರೀದಿ ಮಾಡುತ್ತಿರುವ ಹಾಲಿನ ದರವನ್ನು ತಕ್ಷಣವೇ ಹೆಚ್ಚಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಆಗ್ರಹಿಸಿದ್ದಾರೆ.

‘ಹಾಲಿನ ದರ ಹೆಚ್ಚಳಕ್ಕೆ ಕೆಎಂಎಫ್ ನಿರ್ಧರಿಸಿತ್ತು. ಆದರೆ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಧ್ಯ ಪ್ರವೇಶಿಸಿ ಹೆಚ್ಚಳ ತಡೆ ಹಿಡಿದಿದ್ದಾರೆ. ಇದರ ಹಿಂದಿನ ಉದ್ದೇಶ ಏನು ಎಂಬುದು ತಿಳಿದಿಲ್ಲ. ರೈತರಿಂದ ಖರೀದಿಸುವ ಹಾಲಿನ ದರ ಹೆಚ್ಚಳಕ್ಕೆ ಮುಖ್ಯಮಂತ್ರಿಯವರು ತಕ್ಷಣ ಕ್ರಮ ಕೈಗೊಳ್ಳಬೇಕು’ ಎಂದು ಪತ್ರಿಕಾ ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

ಬ್ರಾಹ್ಮಣ ಮಹಾಸಭಾದಿಂದ ಪ್ರತಿಭಾ ಪುರಸ್ಕಾರ

‘ಋಷಿ ಪರಂಪರೆ ಕಾಪಾಡಿ’

ಪ್ರಜಾವಾಣಿ ವಾರ್ತೆ



ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕಗಳನ್ನು ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ಶಿಕ್ಷಣ ತಜ್ಞ ಗುರುರಾಜ ಕರಜಗಿ, ತುಮಕೂರು ರಾಮಕೃಷ್ಣ ವಿವೇಕಾನಂದ ಆಶ್ರಮ ಅಧ್ಯಕ್ಷ ವೀರೇಶಾನಂದ ಸರಸ್ವತಿ ಸ್ವಾಮೀಜಿ ಇದ್ದರು – ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಋಷಿ ಪರಂಪರೆಯನ್ನು ಕಾಪಾಡಿಕೊಳ್ಳುವ ಕರ್ತವ್ಯ ನಮ್ಮೆಲ್ಲರ ಮೇಲಿದೆ’ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಹೇಳಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಭಾನುವಾರ ಆಯೋಜಿಸಿದ್ದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಉತ್ತಮ ನಡವಳಿಕೆ, ಜೀವನಶೈಲಿ ಮತ್ತು ಹಿರಿಯರ ಮಾರ್ಗದರ್ಶನದಿಂದ ಸಮಾಜ ಪರಿವರ್ತನೆ ಮಾಡಬೇಕು ಎಂದು ಕರೆ ನೀಡಿದರು.

ತುಮಕೂರಿನ ರಾಮಕೃಷ್ಣ ವಿವೇಕಾನಂದ ಆಶ್ರಮದ ಅಧ್ಯಕ್ಷ ವೀರೇಶಾನಂದ ಸ್ವಾಮೀಜಿ ಮಾತನಾಡಿ, ‘ಕಠಿಣ ಪರಿಶ್ರಮವಿಲ್ಲದಿದ್ದರೆ ಜೀವನದಲ್ಲಿ ಯಶಸ್ಸು ಸಾಧ್ಯವಿಲ್ಲ. ಜೀವನದಲ್ಲಿ ನಾವು ಬಯಸಿದಂತೆ ಯಶಸ್ಸು ಪಡೆಯಲು ಕಷ್ಟಪಟ್ಟು ಅಧ್ಯಯನ ಮಾಡಬೇಕು. ವಿದ್ಯಾರ್ಥಿಗಳು ನಕಾರಾತ್ಮಕ ಧೋರಣೆ ಕೈ ಬಿಟ್ಟು ಸಾಧನೆಯ ಶಿಖರವನ್ನು ಏರಬೇಕು. ಶ್ರದ್ಧೆ ಮತ್ತು ಪರಿಶ್ರಮದಿಂದ ಮಾತ್ರ ಯಶಸ್ಸು ದೊರೆಯಲು ಸಾಧ್ಯ’ ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿಯಲ್ಲಿ ಗರಿಷ್ಠ ಅಂಕ ಪಡೆದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ಮಾತನಾಡಿದರು. ಪರಮಾನಂದ ಸ್ವಾಮೀಜಿ , ಹಿರಿಯ ಕ್ರಿಕೆಟಿಗ ವಿಜಯ್ ಭಾರದ್ವಾಜ್, ಡಾ.ಎಂ.ಆರ್.ವಿ ಪ್ರಸಾದ್ ಇದ್ದರು.

ವೈಟ್‌ಫೀಲ್ಡ್‌ನ ಕೈಗಾರಿಕಾ ಪ್ರದೇಶದಲ್ಲಿ ‘ಕಾಮಿಕ್ ಕಾನ್’

ಗಮನಸೆಳೆದ ಕಾರ್ಟೂನ್ ಪಾತ್ರಗಳು

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ವೈಟ್‌ಫೀಲ್ಡ್ ಕೈಗಾರಿಕಾ ಪ್ರದೇಶದಲ್ಲಿ ನಡೆದ ಕಾಮಿಕ್ ಕಾನ್ – 2022ರಲ್ಲಿ ಕಾರ್ಟೂನ್ ಪಾತ್ರಗಳ ವೇಷ ತೊಟ್ಟು ಸಂಭ್ರಮಿಸಿದ ಮಕ್ಕಳು, ಯುವಜನರು

ಬೆಂಗಳೂರು: ಫ್ಯಾಂಟಮ್, ಸ್ಪೈಡರ್‌ಮ್ಯಾನ್, ಡೋರಾ, ಶಿವ, ಹನುಮಾನ್... ಹೀಗೆ ಹತ್ತಾರು ಕಾರ್ಟೂನ್ ಪಾತ್ರಗಳು ಇಲ್ಲಿ ನೈಜವಾಗಿ ಪ್ರತ್ಯಕ್ಷವಾದಂತಿತ್ತು.

ನಗರದ ವೈಟ್‌ಫೀಲ್ಡ್‌ನ ಕೈಗಾರಿಕಾ ಪ್ರದೇಶದಲ್ಲಿರುವ ‘ಕಾಮಿಕ್ ಕಾನ್’ ಆವರಣದಲ್ಲಿ ಪ್ರಸಕ್ತ ವರ್ಷದ ‘ಬೆಂಗಳೂರು ಕಾಮಿಕ್ ಕಾನ್-2022’ನಲ್ಲಿ ಈ ಎಲ್ಲ ಪಾತ್ರಗಳ ವೇಷಧಾರಿಗಳು ಕಾಣಿಸಿಕೊಂಡರು. ಪುಟಾಣಿಗಳಿಂದ ಹಿಡಿದು ಹರೆಯದವರವರೆಗೂ ಕಾರ್ಟೂನ್ ಪ್ರಿಯರು ಈ ವೇಷಗಳನ್ನು ತೊಟ್ಟು ಆನಂದಿಸಿದರು. ಹಲವರು ಪ್ರದರ್ಶನ ಮಳಿಗೆಗಳಲ್ಲಿ ಈ ಕಾರ್ಟೂನ್ ಪಾತ್ರಗಳ ತಾಂತ್ರಿಕ ವಿಷಯಗಳನ್ನು ತಿಳಿದುಕೊಳ್ಳಲು ಮುಂದಾದರು.


ಮಳಿಗೆಯೊಂದರಲ್ಲಿ ಮೋಷನ್ ಗ್ರಾಫಿಕ್ಸ್ ತಂತ್ರಾಂಶ ‘ರಿವರ್ ಕಾಮಿಕ್ಸ್’ ಗಮನ ಸೆಳೆಯಿತು. ಸಂಗೀತ, ಧ್ವನಿ ಪರಿಣಾಮಗಳು ಮತ್ತು ಗ್ರಾಫಿಕ್ಸ್ ವಿಡಿಯೊಗಳನ್ನು ಈ ಅಪ್ಲಿಕೇಷನ್ ಹೊಂದಿದೆ. ಭಾರತದ ಮೊದಲ ಮೋಷನ್ ಗ್ರಾಫಿಕ್ಸ್ ಅಪ್ಲಿಕೇಷನ್ ಎಂದೂ ಈ ಮನೋರಂಜನಾ ತಂತ್ರಾಂಶಗಳ ಕಂಪನಿ ಹೇಳಿಕೊಂಡಿದೆ.


‘ರಿವರ್ ಕಾಮಿಕ್ಸ್ ಪ್ರೇಕ್ಷಕರಿಗೆ ವರ್ಧಿತ ಧ್ವನಿ, ಚಲನೆಯ ವಿಶಿಷ್ಟತೆಗಳ ಮೂಲಕ ನಮ್ಮ ಕಲ್ಪನೆಗೆ ಜೀವ ತುಂಬಲು ತಾಂತ್ರಿಕ ನೆರವು ನೀಡುತ್ತದೆ. ಧ್ವನಿ, ಸಂಗೀತ, ವಿಶೇಷ ಪರಿಣಾಮಗಳ ಭಂಡಾರವೂ ಇದರಲ್ಲಿದೆ. ಭಾರತ ಮತ್ತು ವಿಶ್ವದ ಇತಿಹಾಸ, ಸಾಂಸ್ಕೃತಿಕ-ಆಧಾರಿತ ಕಂಟೆಂಟ್‌ನ ವ್ಯಾಪಕ ಪ್ರಕಾರಗಳ ಕಥಾ ಸೃಷ್ಟಿಗೆ ಅವಕಾಶ ಕಲ್ಪಿಸಿದೆ’ ಎಂದು ರಿವರ್‌ಕಾಮಿಕ್ಸ್ ಸಿಇಒ ಮತ್ತು ಸಂಸ್ಥಾಪಕ ಜೆ.ಎಂ. ಥಾಕರ್ ಹೇಳಿದರು.

ಬೇರೇನಿತ್ತು ಕಾಮಿಕ್ ಕಾನ್‌ನಲ್ಲಿ?

‘ಬಾಂಬೆ ಲೋಕಲ್’ ಹಿಪ್ – ಹಾಪ್ ತಂಡ ವಿಶೇಷ ಪ್ರದರ್ಶನ ನೀಡಿತು. ಹಿಪ್-ಹಾಪ್ ಕಲಾವಿದರಾದ ಗ್ರಾವಿಟಿ, ಶೇಕ್ಸ್‌ಪಿಯರ್, ಫರ್ಹಾನ್ ಬೀಟ್ ಬಾಕ್ಸರ್ಸ್, ಡಿ-ಸೈಫರ್, ಬೀಟ್ ರಾ ಅವರ ಗೀತ ಗಾಯನ ಕೇಳುಗರಿಗೆ ಮುದ ನೀಡಿತು.

ಇಲ್ಲಿ ಹೊಸ ಮೋಜಿನ ಆಟಗಳು, ಕಾರ್ಟೂನ್‌ಗಳು ಗಮನ ಸೆಳೆದವು. ಮಕ್ಕಳು ಇಲ್ಲಿ ಪುಟ್ಟ ಉಡುಗೊರೆಗಳನ್ನು ಪಡೆದು ಸಂಭ್ರಮಿಸಿದರು. ಪುಟ್ಟ ಆಟಗಳಲ್ಲಿ ವಿಜೇತರಿಗೆ ಬಹುಮಾನ ನೀಡಲಾಯಿತು.





ಶೈಕ್ಷಣಿಕ ಪ್ರವಾಸ ನೆನಪಿನ ಖಜಾನೆಯಾಗಲಿ

ಶೈಕ್ಷಣಿಕ ಪ್ರವಾಸ ಸಾಂದರ್ಭಿಕ ಪ್ರಯಾಸವಾಗದೆ ಬದುಕಿನ ಸೂಕ್ಷ್ಮಗಳನ್ನು ಅರಿಯುವ ಅರ್ಥಪೂರ್ಣ ಪಯಣವಾಗಲಿ

ವೀರಣ್ಣ ಮಡಿವಾಳರ

ಪ್ರವಾಸ ಎಂಬುದು ನಮ್ಮ ನಮ್ಮ ಉತ್ಸಾಹವನ್ನು ನವೀಕರಿಸಿಕೊಳ್ಳುವ ಒಂದು ಉತ್ತಮ ವಿಧಾನ. ಹೊಸ ಜಾಗ, ಹೊಸ ಜನ, ಹೊಸ ತಿಳಿವಳಿಕೆ ಮಕ್ಕಳಿಗೆ ಎಲ್ಲಿಲ್ಲದ ಉತ್ಸಾಹವನ್ನು ತಂದುಕೊಡಬಲ್ಲವು. ಪ್ರವಾಸ ಎಂಬುದು ಉದ್ದೇಶವೇ ಇಲ್ಲದ ಸುತ್ತಾಟವಾಗದೆ ಬದುಕಿಡೀ ಹಸಿರಾಗಿ ಉಳಿಯುವಂಥ ಕ್ಷಣಗಳ, ಅರ್ಥಪೂರ್ಣ ಸಂಗತಿಗಳು, ಸಂಭ್ರಮದ ಬೆರಗಿನ ಘಟನೆಗಳ ಸಂಗ್ರಹದ ದಾರಿಯಾದರೆ ಅದಕ್ಕಿಂತ ಸಾರ್ಥಕತೆ ಬೇರೊಂದೇನಿದೆ ಅಲ್ಲವೆ. ಹಾಗಾದರೆ ನಮ್ಮ ಮಕ್ಕಳ 'ಶೈಕ್ಷಣಿಕ ಪ್ರವಾಸ ಅದೊಂದು ಸಾಂದರ್ಭಿಕ ಪ್ರಯಾಸವಾಗದೆ ನಿಜ ಅರ್ಥದಲ್ಲಿ ಅರ್ಥಪೂರ್ಣ ಶೈಕ್ಷಣಿಕ ಪ್ರವಾಸವಾಗಿಸಿಕೊಳ್ಳುವ ಬಗ್ಗೆ ನಾವು ಕೆಲವು ಸಂಗತಿಗಳನ್ನು ಪರಿಗಣಿಸಬಹುದು.

ನೀಲನಕ್ಷೆ ತಯಾರಿ

ನಾವು ಕೈಗೊಳ್ಳುತ್ತಿರುವುದು ಮಕ್ಕಳ ಶೈಕ್ಷಣಿಕ ಪ್ರವಾಸವಾದ್ದರಿಂದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹೊರಡಿಸಿರುವ ಆದೇಶದಲ್ಲಿನ ಮಾರ್ಗದರ್ಶಿ ಅಂಶಗಳನ್ನ ಗಂಭೀರವಾಗಿ ಪರಿಗಣಿಸಿ ಅದರಂತೆ ನಡೆದುಕೊಳ್ಳಬೇಕು. ನಾಡು ಸುತ್ತಿ ಅನುಭವ ಇರುವ ಶಿಕ್ಷಕರು ಅಥವಾ ಇತರರು ಸೇರಿ ಪ್ರವಾಸಕ್ಕೆ ಯೋಗ್ಯ ಸ್ಥಳಗಳನ್ನ ಆಯ್ಕೆ ಮಾಡಿ ಅಗತ್ಯ ನೀಲನಕ್ಷೆಯನ್ನು ತಯಾರಿಸಿಕೊಳ್ಳಬೇಕು. ಪ್ರವಾಸಕ್ಕೆ ಹೊರಡುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ಸಂಖ್ಯೆಯೂ ಇರುವಂತೆ ನೋಡಿಕೊಳ್ಳುವುದು. ಮುಖ್ಯವಾಗಿ ವಿದ್ಯಾರ್ಥಿನಿಯರ ಕಾಳಜಿ, ಸುರಕ್ಷತೆ ಮತ್ತು ಮಾರ್ಗದರ್ಶನಕ್ಕಾಗಿ ಗುರುಮಾತೆಯರೂ ಇರುವುದು ಅಪೇಕ್ಷಣೀಯ ಮತ್ತು ಸೂಕ್ತ.



ಸಾಂದರ್ಭಿಕ ಚಿತ್ರ

ಪ್ರವಾಸಕ್ಕೆ ಮುನ್ನ..

ಪ್ರವಾಸಕ್ಕೆ ಹೊರಡುವ ಮಕ್ಕಳ ಆರೋಗ್ಯದ ಕಾಳಜಿ ಅತಿಮುಖ್ಯ. ಚಳಿಗಾಲವಾದ್ದರಿಂದ ಮಕ್ಕಳಿಗೆ ಬೆಚ್ಚಗಿನ ಬಟ್ಟೆ ಹೊದಿಕೆ, ಅಗತ್ಯ ಔಷಧಿ ಜೊತೆಗಿರುವಂತೆ ನೋಡಿಕೊಳ್ಳಬೇಕು. ಪ್ರವಾಸಕ್ಕೆ ಹೊರಡುವ ಪ್ರತಿ ಮಗುವಿಗೂ ಕ್ಯಾಪ್ ಅಥವಾ ಬ್ಯಾಡ್ಜ್ ಇರಲಿ. ಇದರಿಂದ ಮಕ್ಕಳನ್ನು ಗುಂಪಿನಲ್ಲಿರುವಾಗ ಸಹಜವಾಗಿ ಅವರನ್ನು ಗುರುತಿಸಲು ಸಾಧ್ಯವಾಗುತ್ತದೆ.

ಪ್ರವಾಸದ ಸ್ಥಳಗಳನ್ನು ಆಯ್ಕೆ ಮಾಡುವಾಗ ಮಕ್ಕಳ ಮನೋವಿಕಾಸಕ್ಕೆ ಅನುಕೂಲವಾಗುವಂಥ, ಅವರ ಕುತೂಹಲ ತಣಿಸುವಂಥ ಬೆರಗು ಹೆಚ್ಚಿಸುವಂಥ ಸ್ಥಳಗಳಿಗೆ ಆದ್ಯತೆಯಿರಲಿ. ಮಕ್ಕಳ ವಯೋಮಾನ ಮತ್ತು ಆಸಕ್ತಿಗಳಿಗನುಗುಣವಾಗಿ ಸ್ಥಳಗಳ ಆಯ್ಕೆಯಿದ್ದರೆ ಒಳ್ಳೆಯದು.



ಶಾಲಾ ಮಕ್ಕಳು 'ಪರಿಸರ ಪ್ರವಾಸ'ದ ಭಾಗವಾಗಿ ಇತ್ತೀಚೆಗೆ ಶಿರಸಿ ಸಮೀಪದ ಅರಣ್ಯ ಪ್ರದೇಶಕ್ಕೆ ಭೇಟಿ ನೀಡಿದ್ದರು ಚಿತ್ರ: ಶಿವಾನಂದ ಕಳವೆ

ಮುಖ್ಯವಾಗಿ ಮಕ್ಕಳಿಗೆ ಹೂವು, ಹಸಿರು, ಪ್ರಾಣಿ, ಪಕ್ಷಿ, ಚಿಟ್ಟೆ, ಮೀನುಗಳಿರುವಂಥ ಅಭಯಾರಣ್ಯ, ರಾಷ್ಟ್ರೀಯ ಉದ್ಯಾನಗಳು, ಚಿಟ್ಟೆ ಪಾರ್ಕ್, ಅಕ್ವೇರಿಯಂನಂತಹವು ನೈಜ ಮತ್ತು ಉಲ್ಲಾಸದ ಅನುಭವಗಳನ್ನು ನೀಡುವುದರಿಂದ ಇವುಗಳಿಗೆ ಆದ್ಯತೆ ನೀಡಬಹುದು.

ಹೊಸ ಜನ, ವಿಭಿನ್ನ ವಿಶಿಷ್ಟ ಜೀವನ ಶಿಕ್ಷಣ ಸಂಸ್ಕೃತಿ ಕೇಂದ್ರಗಳು, ಎಲ್ಲದಕ್ಕಿಂತ ಮುಖ್ಯವಾಗಿ ಯಾವುದು ಹತ್ತಿರವೋ ಆ ಸ್ಥಳವನ್ನು ಆಯ್ಕೆ ಮಾಡಿ ಅಲ್ಲಿಗೂ ಭೇಟಿನೀಡಬಹುದು. ಮಕ್ಕಳ ಮನೋಲೋಕದಲ್ಲಿ ಈ ಸ್ಥಳಗಳ ಭೇಟಿ ಆನಂದದಾಯಕ ಅನುಭವಗಳಾಗಿ ಉಳಿಯಬಲ್ಲವು. ಮಕ್ಕಳ ವಯಸ್ಸು, ತರಗತಿ ಆಧರಿಸಿ, ಎಷ್ಟು ದೂರದ ತಾಣಗಳನ್ನು ಆಯ್ಕೆ ಮಾಡಿಕೊಳ್ಳಬೇಕೆಂದು ನಿರ್ಧರಿಸಬೇಕು.

ಸಾಧಕರ ಭೇಟಿ

ಪ್ರವಾಸಕ್ಕೆ ಆಯ್ಕೆ ಮಾಡಿಕೊಂಡಂಥ ಸ್ಥಳಗಳಲ್ಲಿ ಇರಬಹುದಾದ ವಿಭಿನ್ನ ಕ್ಷೇತ್ರಗಳ ವಿಭಿನ್ನ ವಯೋಮಾನದ ಸಾಧಕರನ್ನು ಗುರುತಿಸಿಕೊಂಡು ಮಕ್ಕಳಿಗೆ ಅವರನ್ನು ಭೇಟಿ ಮಾಡಿಸಿ ಅವರೊಂದಿಗೆ ಸಂವಾದ ಏರ್ಪಡಿಸಬಹುದು. ಇದು ಅರ್ಥಪೂರ್ಣ ಪ್ರವಾಸವಾಗುತ್ತದೆ.

ಮಕ್ಕಳ ಪಠ್ಯದಲ್ಲಿ ನಮೂದಿಸಲಾದ ಅಥವಾ ಪಠ್ಯದ ಅಂಶಗಳಿಗೆ ಹತ್ತಿರವಾದ ಸ್ಥಳಗಳಿಗೆ ಭೇಟಿ ನೀಡಿ ಕಲಿಕೆಯನ್ನು ಸಾಕ್ಷಾತ್ಕರಿಸಿಕೊಳ್ಳುವುದು ನಿಜಕ್ಕೂ ಅಮೋಘವಾದದ್ದು. ಆ ಸ್ಥಳಗಳ ವೈಶಿಷ್ಟ್ಯ, ಐತಿಹ್ಯಗಳು, ಐತಿಹಾಸಿಕ ಮಹತ್ವ, ಅಲ್ಲಿನ ಜೀವನಕ್ರಮ ಮುಂತಾದ ಅಂಶಗಳನ್ನು ಅಲ್ಲಿ ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳು ಅಥವಾ ಮಾರ್ಗದರ್ಶಿಗಳ ಸಹಾಯದಿಂದ ಮಕ್ಕಳ ಜ್ಞಾನವಿಕಾಸಕ್ಕೆ ಅವಕಾಶ ಮಾಡಿಕೊಡಬಹುದು.

ಅನುಭವಗಳ ಟಿಪ್ಪಣಿ

ಪ್ರವಾಸಕ್ಕೆ ಹೊರಡುವ ಪ್ರತಿ ಮಗುವಿನ ಕೈಯಲ್ಲೊಂದು ನೋಟ್ ಪುಸ್ತಕ ಅಥವಾ ಡೈರಿ ಇರಲಿ. ಇದರಲ್ಲಿ ಮಗು ತನಗೆ ದಕ್ಕಿದ ವಿಶಿಷ್ಟ ಅನುಭವಗಳನ್ನು, ತಿಳಿದುಕೊಂಡ ವಿಷಯಗಳನ್ನು ತನ್ನದೇ ಭಾಷೆಯಲ್ಲಿ ಟಿಪ್ಪಣಿ ಮಾಡಿಕೊಳ್ಳಲಿ. ಮಾರ್ಗ ಮಧ್ಯ ಈ ಟಿಪ್ಪಣಿಗಳ ಸಹಾಯದಿಂದ ಮಕ್ಕಳು ಒಬ್ಬೊಬ್ಬರಾಗಿ ತಮ್ಮ ತಮ್ಮ ತಿಳಿವಳಿಕೆಯನ್ನು ಇತರ ಮಕ್ಕಳೊಂದಿಗೆ ಹಂಚಿಕೊಳ್ಳಲು ಅವಕಾಶ ಕೊಟ್ಟರೆ ಉಳಿದ ಮಕ್ಕಳೂ ಒಂದು ಮಹತ್ವದ ಸ್ಥಳ ಅಥವಾ ವಾತಾವರಣವನ್ನು ಹೇಗೆ ಗ್ರಹಿಸಬೇಕು, ಅನುಭವಕ್ಕೆ ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ಪ್ರಾಯೋಗಿಕ ತಿಳಿವಳಿಕೆ ಮೂಡಿ ಮುಂದಿನ ಸ್ಥಳಗಳನ್ನು ಮತ್ತಷ್ಟು ಆಸಕ್ತಿ ಮತ್ತು ಕುತೂಹಲದಿಂದ ನೋಡಲು ಸಾಧ್ಯವಾಗುತ್ತದೆ.

ಈಗೀಗ ಪುಟ್ಟ ಮಕ್ಕಳೂ ಸಹ ಮೊಬೈಲ್ ತರುವ ಸಾಧ್ಯತೆ ಇರುವುದರಿಂದ ಸಾಧ್ಯವಾದಷ್ಟು ಇದನ್ನು ನಿರಾಕರಿಸಬೇಕು. ಮಕ್ಕಳು ಮೊಬೈಲ್‌ನಲ್ಲಿ ಫೋಟೊ ಅಥವಾ ವಿಡಿಯೊ ತೆಗೆಯುವುದರಲ್ಲಿ ಮಗ್ನರಾಗಿ ಪ್ರವಾಸದ ನೈಜ ಅನುಭವ ದಕ್ಕದೆ, ಅಮೂಲ್ಯ ಘಟನೆಗಳನ್ನು ಆಸ್ವಾದಿಸದೆ ಹೋಗಬಹುದು. ಬದಲಾಗಿ ಶಾಲೆ ವತಿಯಿಂದಲೇ ಬಾಡಿಗೆಗಾದರೂ ಸರಿ ಒಂದು ಒಳ್ಳೆಯ ಕ್ಯಾಮೆರಾ ತೆಗೆದುಕೊಂಡು ಹೋಗುವುದು ಸೂಕ್ತ. ಪ್ರವಾಸದಲ್ಲಿ ಸಿಕ್ಕಿದ ದಕ್ಕಿದ ವಿಶಿಷ್ಟ ಅನುಭವಗಳ ಮಕ್ಕಳ ನೆನಪಿನ ಕೋಶದ ಖಜಾನೆಯಲ್ಲಿ ಶಾಶ್ವತವಾಗಿ ಉಳಿದು ಜೀವನಪೂರ್ತಿ ನೆನಪಿಡುವಂತಾಗಬೇಕು. ಕೇವಲ ಸಾಂದರ್ಭಿಕ ಕ್ರಿಯೆಯಾಗಿ ಅನಿವಾರ್ಯತೆಗಾಗಿ ಅಥವಾ ಸಮಯ ಕಳೆಯುವುದಕ್ಕಾಗಿ ಎಂಬ ಭಾವನೆ ಮೂಡದೆ ಪ್ರವಾಸ ಎಂಬುದು ಒಂದು ಜೀವನ ಪೂರ್ತಿ ನಾವು ಬೆಳೆಸಿಕೊಳ್ಳಲೇಬೇಕಾದ ಒಂದು ಮೌಲ್ಯಯುತ ಹವ್ಯಾಸವಾಗಿ ಮಕ್ಕಳಲ್ಲಿ ಬೆಳೆಸಲು ಸಾಧ್ಯವಾದರೆ ಪ್ರವಾಸದ ಪರಿಕಲ್ಪನೆ ಸಾರ್ಥಕತೆಯನ್ನು ಪಡೆಯುತ್ತದೆ, ನಿಜ ಉದ್ದೇಶಗಳು ಸಫಲವಾಗುತ್ತವೆ.

ಪ್ರವಾಸ ಹಲವು ನೆನಪುಗಳ ಖಜಾನೆ. ಪ್ರವಾಸ ಹೋಗಿ ಬಂದ ಮಕ್ಕಳಿಗೆ ಸ್ವಲ್ಪ ಸಮಯಾವಕಾಶ ಕೊಟ್ಟು ತಮ್ಮ ಅನುಭವ ನೆನಪುಗಳನ್ನು ತಮ್ಮದೇ ಆದ ಭಾಷೆಯಲ್ಲಿ ದಾಖಲಿಸಲು ಪ್ರೇರಣೆ ನೀಡಬೇಕು. ಬರವಣಿಗೆ ರೂಪದಲ್ಲೂ ಮಕ್ಕಳ ಅನುಭವ ದಾಖಲಿಸಿ, ನಿಯತಕಾಲಿಕೆಗಳು ಕಳಿಸಲು ಪ್ರೋತ್ಸಾಹ ನೀಡಬಹುದು.

(ಲೇಖಕರು ಶಿಕ್ಷಕರು)

ಐಇಎಸ್ ಪರೀಕ್ಷೆಗೆ ಸಿದ್ಧತೆ ಹೇಗೆ?

1. ನಾನು ಪಿಯುಸಿ(ವಿಜ್ಞಾನ) ನಂತರ ಬಿಕಾಂ ಮುಗಿಸಿದ್ದೇನೆ. ನಂತರ, ಎಲ್ಎಲ್‌ಬಿ ಓದಿ, ವಕೀಲ ವೃತ್ತಿ ಮಾಡಬೇಕೆಂಬ ಬಯಕೆ ಇತ್ತು. ಆದರೆ, ಅದರಲ್ಲಿ ಯಶಸ್ಸು ಕಾಣುವುದಕ್ಕೆ ಬಹಳ ಸಮಯ ಹಿಡಿಯುವುದರಿಂದ, ನಾನು ಎರಡನೇ ಆಯ್ಕೆಯಾಗಿ ಎಂಬಿಎ ಆಯ್ಕೆ ಮಾಡಿಕೊಂಡೆ. ನನಗೆ ಇಂಗ್ಲಿಷ್ ಭಾಷಾ ಜ್ಞಾನದ ಕೊರತೆಯಿದೆ. ಆದರೆ, ವೇದಿಕೆ ಮೇಲೆ ಉತ್ತಮವಾಗಿ ಮಾತನಾಡುವ ಧೈರ್ಯವಿದೆ. ಹಾಗಾಗಿ, ನಾನು ಆ್ಯಂಕರಿಂಗ್ ವೃತ್ತಿಗೆ ಹೋದರೆ ಹೇಗೆ? ಈ ಗೊಂದಲಗಳಿಗೆ ಪರಿಹಾರ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

ಎಲ್ಎಲ್‌ಬಿ ಬದಲು ಎಂಬಿಎ ಮಾಡುವ ಆಲೋಚನೆ ಸರಿಯಿದೆ ಎನಿಸುತ್ತದೆ. ಈಗ, ಎಂಬಿಎ ಸುಮಾರು 25ಕ್ಕೂ ಹೆಚ್ಚಿನ ವಿಭಾಗಗಳಲ್ಲಿ (ಇವೆಂಟ್ಸ್ ಮ್ಯಾನೇಜ್‌ಮೆಂಟ್, ಮಾರ್ಕೆಟಿಂಗ್, ಎಚ್‌ಆರ್, ಫೈನಾನ್ಸ್ ಇತ್ಯಾದಿ) ಮಾಡ ಬಹುದು. ಹಾಗಾಗಿ, ನಿಮ್ಮ ಸ್ವಾಭಾವಿಕ ಆಸಕ್ತಿ, ಅಭಿರುಚಿ ಯಾವ ವಿಭಾಗದಲ್ಲಿದೆ ಎಂದು ತಿಳಿದು ಅದರಂತೆ ಎಂಬಿಎ ಕೋರ್ಸ್ ಆಯ್ಕೆಯಿರಲಿ.

ಇಂಗ್ಲಿಷ್ ಭಾಷಾ ಪರಿಣತಿಗಾಗಿ, ಈ ಸಲಹೆಗಳನ್ನು ಅನುಸರಿಸಿ:

- **ಓದುವುದು:** ಇಂಗ್ಲಿಷ್ ದಿನ ಪತ್ರಿಕೆಗಳನ್ನು, ಪುಸ್ತಕಗಳನ್ನು, ಲೇಖನಗಳನ್ನು ದಿನನಿತ್ಯ ಓದಿ. ಪದಬಳಕೆ, ವಾಕ್ಯ ರಚನೆ, ವ್ಯಾಕರಣವನ್ನು ಗಮನಿಸಿ. ಸಾಧ್ಯವಾದರೆ, ಉಚ್ಚಾರಣೆಗೆ ಸಹಾಯವಾಗುವಂತೆ ಜೋರಾಗಿ ಓದಿ. ಅರ್ಥವಾಗದ ಪದಗಳನ್ನು ನಿಘಂಟಿನ ಮೂಲಕ ಅರ್ಥೈಸಿಕೊಳ್ಳಿ.
- **ಮಾತನಾಡುವುದು:** ಆತ್ಮೀಯರೊಂದಿಗೆ ಸರಳವಾದ ವಿಷಯಗಳನ್ನು ಮಾತನಾಡಲು ಪ್ರಯತ್ನಿಸಿ. ತಪ್ಪು-ಒಪ್ಪುಗಳಾದಲ್ಲಿ, ಸಂಕೋಚ ಪಡದೆ ಪ್ರಯತ್ನವನ್ನು ಮುಂದುವರೆಸಿ. ಆತ್ಮವಿಶ್ವಾಸವನ್ನು ಬೆಳೆಸಿಕೊಳ್ಳಲು, ಕನ್ನಡಿಯ ಮುಂದೆ ಆಂಗಿಕ ಭಾಷೆಯನ್ನು ಬಳಸಿ ಮಾತನಾಡಿ.
- **ಬರೆಯುವುದು:** ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ವಾಕ್ಯರಚನೆಯಲ್ಲಿರುವ ವ್ಯತ್ಯಾಸಗಳನ್ನು ಗಮನಿಸಿ, ಕಂಪ್ಯೂಟರ್‌ನಲ್ಲಿಯೇ ಸರಳ ವಾಕ್ಯಗಳನ್ನು ರಚಿಸಿ, ಕಾಲಕ್ರಮೇಣ ಕ್ಲಿಷ್ಟವಾದ ವಾಕ್ಯಗಳನ್ನು ರಚಿಸಲು ಪ್ರಾರಂಭಿಸಿ. ನೀವು ರಚಿಸಿದ ವಾಕ್ಯಗಳ ವ್ಯಾಕರಣದಲ್ಲಿನ ಲೋಪದೋಷಗಳನ್ನು ಆಪ್ (ಮೈಕ್ರೊಸಾಫ್ಟ್ ವರ್ಡ್, ಗ್ರಾಮರ್ಲಿ ಇತ್ಯಾದಿ) ಮೂಲಕ ಸರಿಪಡಿಸಿ. ಆಪ್ ಸೆಟಿಂಗ್ಸ್ ಅನ್ನು ನಿಮ್ಮ ಅಗತ್ಯಕ್ಕೆ ತಕ್ಕಂತೆ ಹೊಂದಿಸಿ.
- **ವೀಡಿಯೊ, ಚಲನಚಿತ್ರಗಳ ವೀಕ್ಷಣೆ:** ಕನ್ನಡದ ಉಪಶೀರ್ಷಿಕೆಗಳಿರುವ ಇಂಗ್ಲಿಷ್ ಚಲನಚಿತ್ರಗಳು, ಟಿವಿ ಕಾರ್ಯಕ್ರಮಗಳು, ಸಾಕ್ಷ್ಯ ಚಿತ್ರಗಳನ್ನು ವೀಕ್ಷಿಸಿ. ಅದೇ ರೀತಿ, ಯೂಟ್ಯೂಬ್‌ನಲ್ಲಿ ಇಂಗ್ಲಿಷ್ ಕಲಿಕೆಗೆ ನೆರವಾಗುವ ವಿಡಿಯೊಗಳನ್ನು ವೀಕ್ಷಿಸಿ. ಸಾಧಕರ ಭಾಷಣಗಳನ್ನು ಕೇಳಿ.
- **ಮೊಬೈಲ್ ಆ್ಯಪ್ ಬಳಕೆ:** ಇಂಗ್ಲಿಷ್ ಕಲಿಕೆಗೆ ಅನುಕೂಲವಾಗುವ ಹಲವಾರು ಮೊಬೈಲ್ ಅಪ್ಲಿಕೇಶನ್‌ಗಳಿವೆ (ಹಲೊ ಇಂಗ್ಲಿಷ್, ಡ್ಯುಲಿಂಗೊ, ಹಲೊ ಟಾಕ್ ಇತ್ಯಾದಿ). ಇವುಗಳನ್ನು ಬಳಸಿ.

ಈ ಸಲಹೆಗಳನ್ನು ನಿರಂತರವಾಗಿ ಕೆಲವು ತಿಂಗಳ ಕಾಲ ಅನುಸರಿಸಿದ ನಂತರ ನಿಮ್ಮ ಇಂಗ್ಲಿಷ್ ಕಲಿಕೆ ಒಂದು ಹಂತಕ್ಕೆ ತಲುಪುತ್ತದೆ. ಜೊತೆಗೆ, ಎಂಬಿಎ ಕಲಿಕೆಯಲ್ಲಿ ಇಂಗ್ಲಿಷ್ ಭಾಷಾ ಪರಿಣತಿ ಸಾಮಾನ್ಯವಾಗಿಯೇ ಹೆಚ್ಚಾಗುತ್ತದೆ. ಎಂಬಿಎ ನಂತರ ವೃತ್ತಿ ಜೀವನವನ್ನು ಅನುಸರಿಸಿಕೊಂಡು, ನಿರೂಪಣೆಯ (ಆ್ಯಂಕರಿಂಗ್) ಅವಕಾಶಗಳನ್ನು ಪ್ರವೃತ್ತಿಯಂತೆ ಬಳಸಿಕೊಳ್ಳಿ. ವೃತ್ತಿ ಯೋಜನೆಯನ್ನು ಮಾಡುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/@ExpertCareerConsultantAuthor

2. ಕೆಮಿಕಲ್ ಎಂಜಿನಿಯರಿಂಗ್‌ನಲ್ಲಿ 2ನೇ ವರ್ಷ ಓದುತ್ತಿದ್ದೇನೆ. ನಾನು ಇಂಡಿಯನ್ ಎಂಜಿನಿಯರಿಂಗ್ ಸರ್ವಿಸ್ ಪರೀಕ್ಷೆ ಬರೆಯಬೇಕು. ಇದಕ್ಕೆ ಸಿದ್ಧತೆ ಹೇಗೆ? ಯಾವಾಗ ಬರೆಯಬಹುದು?

ಪೃಥ್ವಿ, ಊರು ತಿಳಿಸಿಲ್ಲ.

ಕೇಂದ್ರ ಲೋಕಸೇವಾ ಆಯೋಗ ನಡೆಸುವ ಇಂಡಿಯನ್ ಎಂಜಿನಿಯರಿಂಗ್ ಸರ್ವೀಸಸ್ (ಐಇಎಸ್) ಪರೀಕ್ಷೆ ಮೂರು ಹಂತಗಳಲ್ಲಿ ನಡೆಯುತ್ತದೆ. ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ/ಸಂದರ್ಶನ. ಎಂಜಿನಿಯರಿಂಗ್ ಕೋರ್ಸಿನ ಅಂತಿಮ ವರ್ಷದಲ್ಲಿರುವಾಗ ಅಂದಿನ ನಿಯಮಾವಳಿಗನ್ನು ಗಮನಿಸಿ, ಈ ಪರೀಕ್ಷೆಯನ್ನು ಬರೆಯಬಹುದು.

ಐಎಎಸ್ ಪರೀಕ್ಷೆಯಂತೆ ಇದೂ ಕೂಡ ಕಠಿಣ. ನೇಮಕಾತಿಗೆ ನೀವು ಆರಿಸಿಕೊಳ್ಳುವ ವಿಭಾಗಕ್ಕೆ (ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯೂನಿಕೇಷನ್) ಅನ್ವಯಿಸುವ ಪಠ್ಯಕ್ರಮ ಅರ್ಥಮಾಡಿಕೊಂಡು, ಈ ಸಲಹೆಗಳನ್ನು ಗಮನಿಸಿ ತಯಾರಾಗಬಹುದು:

- ಅಗತ್ಯ ಪುಸ್ತಕಗಳನ್ನು ಖರೀದಿಸಿ, ಖುದ್ದಾಗಿ ಅಥವಾ ಕೋಚಿಂಗ್ ಮುಖಾಂತರ ತಯಾರಿ ಮಾಡಬಹುದು. ನಿಗದಿತ ವೇಳಾಪಟ್ಟಿಯಂತೆ ಸಮಗ್ರ ಮತ್ತು ಆಳವಾದ ಓದುವಿಕೆ, ಪುನರಾವರ್ತನೆ ಮತ್ತು ಬರವಣಿಗೆ ಇರಬೇಕು. ಸಮಯದ ನಿರ್ವಹಣೆ ಅತ್ಯಗತ್ಯ.
- ಹೆಚ್ಚಿನ ಮಾಹಿತಿಗಾಗಿ ಗಮನಿಸಿ: https://www.shiksha.com/exams/ies-exam

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಲಡೂಮಾ ದಮೆಚಾ ಯುವಾ ಸ್ಕಾಲರ್‌ಶಿಪ್ ಪ್ರೋಗ್ರಾಂ 2022

ಆರ್ಥಿಕ ದುರ್ಬಲ ಕುಟುಂಬಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಮುಂದುವರಿಸಲು ಆರ್ಥಿಕ ನೆರವು ನೀಡುವುದು ಈ ಸ್ಕಾಲರ್‌ಶಿಪ್ ಉದ್ದೇಶವಾಗಿದೆ.

ಅರ್ಹತೆ: 10 /12 ನೇ ತರಗತಿ ಪರೀಕ್ಷೆಯಲ್ಲಿ ಶೇ 85 ಅಂಕಗಳೊಂದಿಗೆ ಉತ್ತೀರ್ಣರಾದ ಅಹಮದಾಬಾದ್, ಮುಂಬೈ, ಬೆಂಗಳೂರು ಮತ್ತು ದೆಹಲಿ ಎನ್‌ಸಿಆರ್ ವಿದ್ಯಾರ್ಥಿಗಳು ಈ ಸ್ಕಾಲರ್‌ಶಿಪ್ ಪಡೆಯಲು ಅರ್ಹರು. ಅರ್ಜಿದಾರರು ಜೆಇಇ/ನೀಟ್ ಕೋಚಿಂಗ್ ಪಡೆಯುತ್ತಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ ₹3ಲಕ್ಷ ಮೀರಿರಬಾರದು.

ಆರ್ಥಿಕ ನೆರವು: ವಾರ್ಷಿಕ ₹ 50,000, **ಅರ್ಜಿ ಸಲ್ಲಿಕೆಗೆ ಕೊನೆ ದಿನ:** 30-11-2022, **ಅರ್ಜಿ ಸಲ್ಲಿಕೆ ವಿಧಾನ:** ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ., **ಹೆಚ್ಚಿನ ಮಾಹಿತಿಗೆ:** www.b4s.in/praja/YUUS1

ಕೋಟಕ್ ಕನ್ಯಾ ಸ್ಕಾಲರ್‌ಶಿಪ್ 2022

ಕೋಟಕ್ ಮಹೀಂದ್ರಾ ಗ್ರೂಪ್ ಸಿಎಸ್‌ಆರ್ ಯೋಜನೆಯಡಿ, ಕೋಟಕ್ ಎಜುಕೇಶನ್ ಫೌಂಡೇಶನ್ 12 ನೇ ತರಗತಿಯಲ್ಲಿ ಉತ್ತೀರ್ಣ ರಾದ ವಿದ್ಯಾರ್ಥಿನಿಯರಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಹಿಂದುಳಿದ ವರ್ಗಗಳ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ವೃತ್ತಿಪರ ಪದವಿ ಕೋರ್ಸ್‌ಗಳನ್ನು ಮುಂದುವರಿಸಲು ನೆರವಾಗುವ ಗುರಿ ಈ ಕಾರ್ಯಕ್ರಮದ್ದು.

ಅರ್ಹತೆ: ಎನ್‌ಎಎಸಿ/ಎನ್‌ಐಆರ್‌ಎಫ್ ಮಾನ್ಯತೆ ಪಡೆದ ವೃತ್ತಿಪರ ಕೋರ್ಸ್‌ಗಳಲ್ಲಿ 1 ನೇ ವರ್ಷದ ಪದವಿಗೆ ಪ್ರವೇಶ ಪಡೆದ ಪ್ರತಿಭಾವಂತ ವಿದ್ಯಾರ್ಥಿನಿಯರು ಅರ್ಜಿ ಸಲ್ಲಿಸಬಹುದು. ವೃತ್ತಿಪರ ಕೋರ್ಸ್‌ಗಳಲ್ಲಿ ಎಂಜಿನಿಯರಿಂಗ್, ಎಂಬಿಬಿಎಸ್, ಆರ್ಕಿಟೆಕ್ಚರ್, ಡಿಸೈನ್, ಇಂಟಿ ಗ್ರೆಟೆಡ್ ಎಲ್‌ಎಲ್‌ಬಿ ಇತ್ಯಾದಿ ವೃತ್ತಿಪರ ಪದವಿ ಕೋರ್ಸ್‌ಗಳು ಸೇರಿವೆ.

ಅರ್ಜಿದಾರರು 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ಶೇ 75ಕ್ಕಿಂತ ಹೆಚ್ಚು ಅಂಕ ಗಳಿಸಿರಬೇಕು. ಕುಟುಂಬದ ವಾರ್ಷಿಕ ಆದಾಯ ₹3.20 ಲಕ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು

ಆರ್ಥಿಕ ನೆರವು: ವಾರ್ಷಿಕ ₹1.5 ಲಕ್ಷದ ವರೆಗೆ
ಅರ್ಜಿ ಸಲ್ಲಿಕೆಗೆ ಕೊನೆ ದಿನ: 30-11-2022
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.
ಹೆಚ್ಚಿನ ಮಾಹಿತಿಗೆ: www.b4s.in/praja/KKGS12

ಮನೆಯಲ್ಲೊಂದು ಕಲಿಕಾ ಕಾರ್ನರ್

ಆರ್.ಬಿ.ಗುರುಬಸವರಾಜ

ಎಂಟು ವರ್ಷದ ಸುಮ ಅಂದವಾದ ರಂಗೋಲಿ ಬಿಡಿಸುತ್ತಾಳೆ. ಪ್ರತಿದಿನ ಅಕ್ಕಪಕ್ಕದ ನಾಲ್ಕಾರು ಮನೆಗಳ ಮುಂದೆ ಇವಳ ರಂಗೋಲಿಯೇ ಎಲ್ಲರನ್ನೂ ಸ್ವಾಗತಿಸುತ್ತದೆ. ಅವಳ ರಂಗೋಲಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದಾಗ ಸಂತಸದಿಂದ ಬೀಗುತ್ತಾಳೆ. ಇನ್ನಷ್ಟು ಹೊಸ ವಿನ್ಯಾಸದ ರಂಗೋಲಿ ಕಲಿಯಲು ಹಾತೊರೆಯುತ್ತಾಳೆ.

ಸುಮಳಂತೆ ಬಹುತೇಕ ಮಕ್ಕಳು ತಮ್ಮ ಕಲಿಕೆಯ ಪ್ರದರ್ಶನವನ್ನು ಇಷ್ಟಪಡುತ್ತಾರೆ. ಈ ಪ್ರದರ್ಶನಕ್ಕೆ ದೊಡ್ಡ ದೊಡ್ಡ ವೇದಿಕೆಗಳು ಬೇಕಾಗಿಲ್ಲ. ಮನೆಯ ಮೂಲೆಯೂ ಕೂಡಾ ಮಗುವಿನ ಕಲಿಕೆಯ ಷೋಕೇಸ್ ಆಗಬಹುದು. ಇದನ್ನೇ ಕಲಿಕಾ ಕಾರ್ನರ್ ಎನ್ನುವುದು.

ಏನಿದು ಕಲಿಕಾ ಕಾರ್ನರ್?

ಇದು ಮಕ್ಕಳ ಕಲಿಕೆಯನ್ನು ಪ್ರದರ್ಶಿಸುವ ಒಂದು ನಿಗದಿತ ಸ್ಥಳ. ಇದು ಸಂಪೂರ್ಣವಾಗಿ ಮಕ್ಕಳಿಂದಲೇ ರಚನೆಗೊಂಡ ಕಲಿಕೆಯ ಪ್ರದರ್ಶಿತ ವೇದಿಕೆ. ಅಲ್ಲಿ ಮಕ್ಕಳು ಬಿಡಿಸಿದ ಚಿತ್ರಗಳು, ಅವರೇ ತಯಾರಿಸಿದ ಆಕೃತಿಗಳು, ಮಾದರಿಗಳು, ಕೈಬರಹದ ತುಣುಕುಗಳು, ಮಕ್ಕಳು ರಚಿಸಿದ ಕಥೆ, ಕವನಗಳು ಇರುತ್ತವೆ. ಅಲ್ಲದೇ ಮಕ್ಕಳ ವಿನೂತನ ಕಲಿಕೆಗೆ ಅಗತ್ಯವಾದ ಪರಿಕರಗಳೆಲ್ಲವೂ ಅಲ್ಲಿ ಸ್ಥಾನ ಪಡೆದಿ ರುತ್ತವೆ. ವಿನೂತನ ಹಾಗೂ ವಿಶಿಷ್ಟ ವಸ್ತುಗಳನ್ನು ಷೋಕೇಸ್‌ನಲ್ಲಿ ಪ್ರದರ್ಶನಕ್ಕೆ ಇಟ್ಟಂತೆ ಮಕ್ಕಳ ಕಲಿಕೆಯನ್ನೂ ಪ್ರದರ್ಶನಕ್ಕಿಡಬಹುದು.

ಈ ಕಲಿಕಾ ಸ್ಥಳ ಮಕ್ಕಳ ಕಲಿಕೆಗೆ ಸ್ವಾತಂತ್ರ್ಯವನ್ನು ನೀಡುತ್ತದೆ ಮತ್ತು ಉತ್ತೇಜಿಸುತ್ತದೆ. ಕಲಿಕೆಗೆ ಸಂಬಂಧಿತ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರಲು ಸಹಾಯ ಮಾಡುತ್ತದೆ. ಪಾಲಕರ ಮೇಲ್ವಿಚಾರಣೆಯಲ್ಲಿ ತರಗತಿಯಲ್ಲಿನ ಕಲಿಕೆಯನ್ನು ಪೂರ್ಣಗೊಳಿಸಲು ಸಹಾಯವಾಗುತ್ತದೆ. ಮಕ್ಕಳು ಇಲ್ಲಿ ಖುಷಿಯಿಂದ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ.

ಮಗುವಿನ ಸರ್ವಾಂಗೀಣ ಬೆಳವಣಿಗೆಯನ್ನು ಬಯಸುವ ಪ್ರತಿಯೊಬ್ಬ ಪಾಲಕರೂ ಸಹ ಶಿಶುಕೇಂದ್ರಿತ ಕಲಿಕೆಯತ್ತ ಗಮನ ಹರಿಸುತ್ತಾರೆ. ಮಕ್ಕಳ ಕಲಿಕೆಯಲ್ಲಿ ಪರಿಣಾಮಕಾರಿ ಯಶಸ್ಸು ತರಬಯಸುವವರು ಮನೆಯ ವಾತಾವರಣವನ್ನು ಶಾಲೆಯಂತೆ ಬದಲಿಸಿಕೊಳ್ಳುತ್ತಾರೆ. ಅಲ್ಲಿ ಮಕ್ಕಳ ಕಲಿಕೆಗೆ ಮುಕ್ತ ಅವಕಾಶ ನೀಡುತ್ತಾರೆ. ತಮ್ಮಲ್ಲಿನ ಮಾಹಿತಿಯನ್ನು ಮಕ್ಕಳಿಗೆ ಜ್ಞಾನವಾಗಿ ಪರಿವರ್ತನೆ ಮಾಡಲು ಬೇಕಾದ ಸಕಲ ಅವಕಾಶಗಳನ್ನು ಸೃಷ್ಟಿಸುತ್ತಾರೆ

ಕಲಿಕಾ ಷೋಕೇಸ್ ಏಕೆ ಬೇಕು?: ಕಲಿಕೆ ಕೇವಲ ತರಗತಿ ಕೋಣೆಯಲ್ಲಿ ನಡೆಯುವ ಪ್ರಕ್ರಿಯೆ ಎಂಬುದು ಬಹುತೇಕ ಪಾಲಕರ ಅಭಿಮತ. ಆದರೆ ಕಲಿಕೆಗೆ ನಿಗದಿತ ಸ್ಥಳವಿಲ್ಲ. ಪ್ರದರ್ಶಿತಗೊಳ್ಳಲು ಸೂಕ್ತ ಸಮಯ ಬೇಕಾಗಿಲ್ಲ. ಏಕೆಂದರೆ ಕಲಿಕೆ ವಿಶಾಲ ವ್ಯಾಪ್ತಿ ಹೊಂದಿದ ಪ್ರಕ್ರಿಯೆ. ಮಗು ಶಾಲೆಗಿಂತ ಹೆಚ್ಚಿನ ಸಮಯವನ್ನು ಮನೆಯಲ್ಲಿ ಕಳೆಯುವುದರಿಂದ ಅಲ್ಲಿಯೇ, ಕಲಿಕಾ ಪೂರಕ ವಾತಾವರಣ ಸೃಷ್ಟಿಸಿದರೆ ಖಂಡಿತವಾಗಿಯೂ ಮನೆಯೇ ಶಾಲೆಯಾಗುತ್ತದೆ.

ಮನೆಯಲ್ಲಿ ಕಲಿಕಾ ಕಾರ್ನರ್ ನಿರ್ಮಾಣದಿಂದ ಮಕ್ಕಳಲ್ಲಿ ಅಶಿಸ್ತಿನ ಸಮಸ್ಯೆಗಳು ಕಡಿಮೆಯಾಗುತ್ತವೆ. ಏಕೆಂದರೆ ಮಗು ತನ್ನಿಷ್ಟದ ಚಟುವಟಿಕೆ ಆಯ್ಕೆಯಲ್ಲಿ ಸ್ವಾತಂತ್ರ್ಯವಿರುವುದರಿಂದ ಸಂತಸದಿಂದ ಕಲಿಕೆಯಲ್ಲಿ ತೊಡಗುತ್ತದೆ. ಹಾಗಾಗಿ ಅಶಿಸ್ತು ಮಾಯವಾಗುತ್ತದೆ. ಕಲಿಕಾ ಕಾರ್ನರ್‌ನಲ್ಲಿನ ವಸ್ತುಗಳು, ಆಟಿಕೆಗಳಿಂದ ಮಗು ಅನ್ವೇಷಿಸುತ್ತ ಕಲಿಯುತ್ತದೆ. ಆ ಮೂಲಕ ಅರಿವಿಲ್ಲದಂತೆ ಪ್ರಯೋಗ ಗಳಲ್ಲಿ ತೊಡಗಿಕೊಳ್ಳುತ್ತದೆ.



ಕಲಿಕಾ ಕಾರ್ನರ್ ಬಳಸುವ ಮಕ್ಕಳು ನಿಯಮಗಳನ್ನು ಸುಲಭವಾಗಿ ಪಾಲಿಸುತ್ತಾರೆ. ಕಲಿಕೆಯ ಉದ್ದೇಶಗಳನ್ನು ಅರ್ಥ ಮಾಡಿಕೊಂಡು ಕಲಿಕೆಯಲ್ಲಿ ಪಾಲ್ಗೊಳ್ಳುತ್ತಾರೆ. ಜೊತೆಗೆ ಮಕ್ಕಳು ತಮ್ಮ ಕಲಿಕಾ ಮಟ್ಟವನ್ನು ತಾವೇ ಗುರುತಿಸಿಕೊಂಡು ಅಭಿವೃದ್ಧಿ ಪಡಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ಕಲಿಕೆಯಲ್ಲಿ ಮುಕ್ತತೆ ಇರುವುದರಿಂದ ಭಯರಹಿತ ವಾತಾವರಣದಲ್ಲಿ ಮಗು ಬೆಳೆಯುತ್ತದೆ.

ಕಲಿಕಾ ಕಾರ್ನರ್‌ನಿಂದ ಮಕ್ಕಳು ತಮ್ಮ ಕಲಿಕೆಯ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ. ಅಂತೆಯೇ ಮನೆಯಲ್ಲಿನ ಇತರರ ಕಲಿಕೆಯನ್ನು ಗೌರವಿಸುತ್ತಾರೆ. ಕಲಿಕೆಯಲ್ಲಿ ಸೃಜಶೀಲತೆ ಗಳಿಸಿಕೊಳ್ಳುತ್ತಾ ಸಾಗುತ್ತಾರೆ. ಮಕ್ಕಳು ತಮ್ಮದೇ ವೇಗದಲ್ಲಿ ಕಲಿಯುವುದರಿಂದ ಒತ್ತಡ ಇರುವುದಿಲ್ಲ. ಅರ್ಥವಾಗದಿರುವುದನ್ನು ಪುನಃ ಪುನಃ ಕಲಿಯುವ ಅವಕಾಶ ಇರುತ್ತದೆ. ಪಠ್ಯದ ಹೊರಗಿನ ಕಲಿಕೆಯನ್ನು ತರಗತಿಯಲ್ಲಿ ಸಮೀಕರಿಸಲು ಕಲಿಕಾ ಕಾರ್ನರ್ ತುಂಬಾ ಅನುಕೂಲ. ಕಲಿಕಾ ಕಾರ್ನರ್ ನಿರ್ಮಾಣದಿಂದ ಮಗುವಿನ ಚಿಂತನೆ, ಭಾಷೆ ಮತ್ತು ಕೌಶಲಗಳು ಅಭಿವೃದ್ಧಿಯಾಗುತ್ತವೆ.

ಸುಲಭ ನಿರ್ಮಾಣ: ಕಲಿಕಾ ಕಾರ್ನರ್ ನಿರ್ಮಾಣ ಬಹಳ ಸುಲಭ. ಅದು ಮನೆಯಲ್ಲಿನ ಷೋಕೇಸ್ ಆಗಬಹುದು ಅಥವಾ ಒಂದೆಡೆ ಇಟ್ಟಿರುವ ಟೇಬಲ್ ಆಗಿರಬಹುದು. ಅಲ್ಲಿ ಮಗುವಿನ ಕಲಿಕೆಗೆ ಸಂಬಂಧಿಸಿದ ಎಲ್ಲಾ ಮಾದರಿಗಳು, ಚಟುವಟಿಕೆಗಳು, ಚಾರ್ಟ್‌ಗಳು, ನೈಜ ವಸ್ತುಗಳು, ಪ್ರಯೋಗ ಸಾಮಗ್ರಿಗಳು ಲಭ್ಯವಿರುವಂತೆ ವ್ಯವಸ್ಥೆ ಮಾಡಬೇಕು. ಮಕ್ಕಳು ಇಷ್ಟಪಡುವ ಆಟದ ಸಾಮಗ್ರಿಗಳೂ ಸಹ ಅಲ್ಲಿ ಸ್ಥಾನ ಪಡೆಯಲಿ. ಅವುಗಳ ಮೂಲಕವೂ ಕಲಿಯುವುದು ಬಹಳ ಇದೆ. ಸಾಧ್ಯವಾದರೆ ಮಕ್ಕಳ ಕೈಗೆ ಎಟುಕುವಂತೆ ಒಂದು ಭಾಗದ ಕೆಳಸ್ತರದ ಗೋಡೆಯನ್ನು ಬ್ಲಾಕ್‌ಬೋರ್ಡ್‌ನ್ನಾಗಿ ಪರಿವರ್ತಿಸಿ. ಇಲ್ಲವಾದರೆ ಗ್ರೀನ್ ಬೋರ್ಡ್, ವೈಟ್‌ಬೋರ್ಡ್ ವ್ಯವಸ್ಥೆಯನ್ನಾದರೂ ಮಾಡಬಹುದು. ಮಕ್ಕಳು ಕಲಿಕಾ ಅಭ್ಯಾಸದಲ್ಲಿ ತೊಡಗಲು ಇದು ಸಹಕಾರಿ.

ಮಕ್ಕಳ ಕಲಿಕಾ ಹಾಳೆಗಳನ್ನು ನೇತು ಹಾಕಲು ದಾರ ಅಥವಾ ಕ್ಲಿಪ್‌ಗಳಿರಲಿ. ಮಕ್ಕಳ ಕಲಿಕಾ ಹಾಳೆಗಳನ್ನು ನೇತುಹಾಕಿ ಮತ್ತು ಆಗಾಗ ಇವುಗಳನ್ನು ಬದಲಿಸಿ. ಮಕ್ಕಳ ತರಗತಿ, ಆಸಕ್ತಿ ಮತ್ತು ಅವರ ಕಲಿಕಾ ಮಟ್ಟಕ್ಕನುಗುಣವಾದ ವಸ್ತುಗಳಿರಲಿ. ಮಕ್ಕಳಿಗೆ ಅಪಾಯಕಾರಿ ಎನಿಸುವ ವಸ್ತುಗಳನ್ನು ಇಲ್ಲಿಡುವುದು ಬೇಡ. ಪ್ರಾರಂಭದಲ್ಲಿ ಒಂದಿಷ್ಟು ದಿನ ಮಕ್ಕಳು ಕಾರ್ನರ್‌ನಲ್ಲಿ ಕುಳಿತು ಕಲಿಯುವ ಅಭ್ಯಾಸ ಮಾಡಿಸಿದರೆ ನಿತ್ಯವೂ ಅದನ್ನೇ ಪಾಲಿಸುತ್ತಾರೆ.

ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಅಭಿಮತ

‘ಹಗರಣಗಳಿಂದಲೇ ಹಣದುಬ್ಬರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಲದಿಂದ ಕಾಲಕ್ಕೆ ಹಗರಣಗಳ ಮೊತ್ತ ಹೆಚ್ಚಾಗುತ್ತಿದೆ. ಇದು ದುರಾಸೆಯ ಫಲದ ಅಭಿವೃದ್ಧಿ. ಇಂತಹ ಸ್ಥಿತಿ ಅಳಿದು, ಮನುಷ್ಯತ್ವ, ತೃಪ್ತಿ ನೆಲೆಸಿದರಷ್ಟೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ’ ಎಂದು ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಪ್ರತಿಪಾದಿಸಿದರು.

ಮಿಥಿಕ್ ಸೊಸೈಟಿಯಲ್ಲಿ ಭಾನುವಾರ ನಡೆದ ಇತಿಹಾಸಕಾರ ಎಚ್.ಎಸ್. ಗೋಪಾಲರಾವ್ ಅವರ ಅಭಿನಂದನಾ ಕೃತಿ ‘ಬಹುಮುಖಿ’ ಬಿಡುಗಡೆ ಮಾಡಿ ಅವರು ಮಾತನಾಡಿದರು.

₹ 64 ಕೋಟಿಯ ಬೋಫೋರ್ಸ್, ₹ 70 ಸಾವಿರ ಕೋಟಿಯ ಕಾಮನ್‌ವೆಲ್ತ್ ಗೇಮ್ಸ್, ₹ 1,700 ಕೋಟಿಯ 2ಜಿ ಹಗರಣ, ₹ 1,800 ಕೋಟಿಯ ಕಲ್ಲಿದ್ದಲು, ₹ 2 ಲಕ್ಷ ಕೋಟಿಯ ರಫೇಲ್ ಹೀಗೆ ಕಾಲದಿಂದ ಕಾಲಕ್ಕೆ ಹಗರಣಗಳ ಮೊತ್ತ ಹೆಚ್ಚಾಗುತ್ತಿರುವುದನ್ನು ಅವರು ಉದಾಹರಿಸಿದರು. ಇಂತಹ ಹಗರಣಗಳಿಂದಲೇ ಹಣದುಬ್ಬರದ ಸಮಸ್ಯೆ ತಲೆದೋರುತ್ತದೆ ಎಂದು ಪ್ರತಿಪಾದಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಸಾಹಿತಿ ಹಂ.ಪ. ನಾಗರಾಜಯ್ಯ,‘ಇತಿಹಾಸದ ಬಗೆಗೆ ಅಸಕ್ತಿ ಇರುವ ಎಲ್ಲರೂ ಗೋಪಾಲರಾವ್ ಅವರ ಸ್ನೇಹಿತರು. ಶ್ರೀವಿಜಯನ ಕುರಿತ ಅವರ ಸಂಶೋಧನೆಯ ವ್ಯಾಪ್ತಿ ದೊಡ್ಡದು’ ಎಂದು ಬಣ್ಣಿಸಿದರು.

ಇತಿಹಾಸಕಾರ ಆರ್.ಶೇಷಶಾಸ್ತ್ರಿ, 'ಮಣ್ಣೆಯ ಕುರಿತು ಅವರ ಸಂಶೋಧನೆ ತುಂಬಾ ಮಹತ್ವದ್ದು. ಅದನ್ನು ತೆಲಂಗಾಣದ ಸಂಶೋಧಕ ಸ್ನೇಹಿತರಿಗೆ ತಿಳಿಸಿ, ಅಂತಹ ಮಾದರಿಯನ್ನು ಇಟ್ಟುಕೊಳ್ಳುವಂತೆ ಸೂಚಿಸಿರುವೆ' ಎಂದು ಗೋಪಾಲ ರಾವ್ ಅವರ ಜತೆಗಿನ ಗುರು, ಶಿಷ್ಯ, ಸ್ನೇಹ ಮೂರೂ ಸಂಬಂಧಗಳನ್ನು ಸ್ಮರಿಸಿದರು.



ನಗರದದಲ್ಲಿ ಭಾನುವಾರ ಡಾ.ಎಚ್.ಎಸ್. ಗೋಪಾಲ್ ರಾವ್ ಅವರ ಅಭಿನಂದನಾ ಗ್ರಂಥ ‘ಬಹುಮುಖಿ’ಯನ್ನು ನಿವೃತ್ತ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಬಿಡುಗಡೆ ಮಾಡಿದರು. ಡಿ.ವಿ. ಪರಶಿವಮೂರ್ತಿ, ಹಂ.ಪ.ನಾಗರಾಜಯ್ಯ,ಎಚ್.ಎಸ್. ಗೋಪಾಲ್ ರಾವ್, ಎಂ.ಎನ್. ಸೀತಾ ಲಕ್ಷ್ಮಿ, ಎಂ.ವಿ.ನಾಗರಾಜ್, ವಿ. ನಾಗರಾಜ್ ಆರ್.ಶೇಷಶಾಸ್ತ್ರಿ ಇದ್ದರು ಪ್ರಜಾವಾಣಿ ಚಿತ್ರ.

'ಶ್ರೀವಿಜಯ ಮಣ್ಣೆಯವನೇ ಇರಬೇಕು ಎಂಬ ತಮ್ಮ ಸಂಶೋಧನಾತ್ಮಕ ಊಹೆಯನ್ನು ಸಮ್ಮತಿಸುವ ಕೆಲವು ಹೊಳಹುಗಳನ್ನು ಎಂ.ಎಂ.ಕಲಬುರ್ಗಿ ನೀಡಿದ್ದರು. ತಮ್ಮ ಜೀವಿತದ ಕಾಲದಲ್ಲೇ ಅ ಊಹೆ ನಿಜ ಎಂದು ರುಜುವಾತಾದರೆ ಬದುಕು ಸಾರ್ಥಕ. ಸಂಶೋಧನೆಯ ಜತೆಗೆ ಸೃಜನಾತ್ಮಕ ಕೃತಿಗಳನ್ನೂ ಬರೆಯುವ ಕಸುವು ಇನ್ನಷ್ಟು ಇದೆ’ ಎಂದು ಗೋಪಾಲರಾವ್ ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಇತಿಹಾಸಕಾರ ಎಂ.ಜಿ. ನಾಗರಾಜ್, 'ಜಲಗಾರನ ದಿಬ್ಬದ ಶಾಸನ ಹಲ್ಮಿಡಿ ಶಾಸನಕ್ಕಿಂತ ಹಳೆಯದು ಎಂಬ ಗೋಪಾಲರಾವ್ ಅವರ ವಾದವನ್ನೂ, ಕೋಲಾರದ ಇನ್ನೊಂದು ಶಾಸನ ಕೂಡ ಹಲ್ಮಿಡಿಗಿಂತ ಹಳೆಯದು ಎಂಬ ಹಂ.ಪ.ನಾ ಅವರ ವಾದವನ್ನೂ ಸ್ಮರಿಸಿದರು, ಸಂಶೋಧನಾ ಚರ್ಚೆಗಳು ಜೀವಂತವಾಗಿರಲು ಇಂತಹ ವಾದಗಳು ಅಗತ್ಯ' ಎಂದರು.

> **ಶ್ರೀವಿಜಯನ ಕುರಿತ ಗೋಪಾಲರಾವ್ ಅವರ ಸಂಶೋಧನೆಯ ವ್ಯಾಪ್ತಿ ದೊಡ್ಡದು.**
> **ಹಂ.ಪ. ನಾಗರಾಜಯ್ಯ,** ಸಾಹಿತಿ

ಅಭಿನಂದನಾ ಕೃತಿಯ ಸಂಪಾದಕ ಡಿ.ವಿ. ಪರಶಿವಮೂರ್ತಿ, ಮಿಥಿಕ್ ಸೊಸೈಟಿಯ ಕಾರ್ಯದರ್ಶಿ ವಿ. ನಾಗರಾಜ ಮಾತನಾಡಿದರು. ಗೋಪಾಲರಾವ್ ಹಾಗೂ ಅವರ ಪತ್ನಿ ಸೀತಾ ಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು.



ನಗರದಲ್ಲಿ ಯಕ್ಷ ಸಾಹಿತ್ಯ ವೇದಿಕೆ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರವಿ ಮಡೋಡಿ ಅವರ ‘ನಮ್ಮಲ್ಲೇ ಮೊದಲು’ ಮತ್ತು ಪೂರ್ಣಿಮಾ ಹೆಗಡೆ ಅವರ ‘ಅಂತರ್ವೀಕ್ಷಣೆ’ ಪುಸ್ತಕಗಳನ್ನು ಬಿಡುಗಡೆ ಮಾಡಲಾಯಿತು. ಭಾರತಿ ಹೆಗಡೆ, ಗಿರೀಶ್ ಹತ್ವಾರ್ ಜೋಗಿ, ಬಿ.ಆರ್. ಲಕ್ಷ್ಮಣರಾವ್ , ಆನಂದರಾಮ ಉಪಾಧ್ಯ ಇದ್ದರು –ಪ್ರಜಾವಾಣಿ ಚಿತ್ರ

ಬೈಕ್‌ನಿಂದ ಬಿದ್ದು ಅತ್ತೆ ಸಾವು, ಸೊಸೆಗೆ ಗಾಯ

ಕುಣಿಗಲ್: ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ 75ರ ಮಾಗಡಿಪಾಳ್ಯ ಬಳಿ ಭಾನುವಾರ ನಾಯಿ ಅಡ್ಡ ಬಂದ ಕಾರಣ ದ್ವಿಚಕ್ರ ವಾಹನ ಆಯತಪ್ಪಿ ಬಿದ್ದು ಹಿಂಬದಿಯಲ್ಲಿ ಕುಳಿತಿದ್ದ ಬೆಂಗಳೂರಿನ ಹನುಮಗಿರಿ ನಗರದ ನಿವಾಸಿ ಪದ್ಮ ಎಂಬುವರು ಮೃತಪಟ್ಟಿದ್ದಾರೆ.

ಬೆಂಗಳೂರಿನಿಂದ ಸೊಸೆ ಶ್ರುತಿ ಜತೆ ಬೈಕ್‌ನಲ್ಲಿ ಸ್ವಗ್ರಾಮ ವೈ.ಹಂಪಾಪುರಕ್ಕೆ ತೆರಳುತ್ತಿದ್ದಾಗ ಈ ಅವಘಡ ನಡೆದಿದೆ. ಅತ್ತೆ ಪದ್ಮ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಸೊಸೆ ಶ್ರುತಿ ಗಾಯಗೊಂಡಿದ್ದಾರೆ.

ನಾಡಿನ ಪರಂಪರೆ ಸಂಸ್ಕೃತಿ ಉಳಿಸಿ, ಬೆಳೆಸಲು ಸಚಿವರ ಸಲಹೆ

ಅಪಾರ್ಟ್‌ಮೆಂಟ್‌ನಲ್ಲಿ ರಾಜ್ಯೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಅನ್ಯ ರಾಜ್ಯಗಳಿಂದ ಉದ್ಯೋಗ ಹಾಗೂ ಉನ್ನತ ಶಿಕ್ಷಣಕ್ಕಾಗಿ ನಗರಕ್ಕೆ ಬಂದು ನೆಲೆಸಿರುವ ಪ್ರತಿಯೊಬ್ಬರೂ ಕನ್ನಡ ಭಾಷೆ ಕಲಿತು ಕನ್ನಡ ನಾಡಿನ ಪರಂಪರೆ ಸಂಸ್ಕೃತಿಯನ್ನು ಉಳಿಸಿ ಬೆಳೆಸಬೇಕು’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ತಿಳಿಸಿದರು.

ಕೆ.ಆರ್.ಪುರ ಸಮೀಪದ ಭಟ್ಟರಹಳ್ಳಿಯ ಪಶ್ಮಿನಾ ವಾಟರ್ ಫ್ರಂಟ್ ಅಪಾರ್ಟ್‌ಮೆಂಟ್ ವೆಲ್ಫೇರ್ ಅಸೋಸಿಯೇಷನ್ ವತಿಯಿಂದ ಭಾನುವಾರ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪ ನಮನ ಹಾಗೂ ಕನ್ನಡ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

‘ಬೆಂಗಳೂರು ನಗರ ಹಲವು ಭಾಷಿಕರು ಒಳಗೊಂಡ ನಗರವಾಗಿದ್ದರೂ ಇಲ್ಲಿನ ಸಾಂಸ್ಕೃತಿಕ ಹಿನ್ನೆಲೆ ಕನ್ನಡವಾಗಿದೆ. ಕನ್ನಡ ಪ್ರತಿಯೊಬ್ಬರೂ ಕಲಿಯಬಹುದಾದ ಭಾಷೆಯಾಗಿದೆ. ಕನ್ನಡದ ಬಗ್ಗೆ ಹೆಚ್ಚು ಮಾಹಿತಿಗಳನ್ನು ತಿಳಿದುಕೊಂಡು ಕನ್ನಡ ಬಾರದ ಇತರರಿಗೂ ತಿಳಿಸುವ ಪ್ರಯತ್ನ ನಡೆಯಬೇಕು. ಪಶ್ಮಿನಾ ಅಪಾರ್ಟ್‌ಮೆಂಟ್ ನಿವಾಸಿಗಳು ಕನ್ನಡ ರಾಜ್ಯೋತ್ಸವ ಹಮ್ಮಿಕೊಂಡು ಕನ್ನಡದ ಬಗ್ಗೆ ಅಭಿಮಾನ ಹೊಂದಿರುವುದು ಖುಷಿ ನೀಡಿದೆ’ ಎಂದರು.

ರಾಜ್ಯೋತ್ಸವ ಅಂಗವಾಗಿ ಶಿಶು ಮಂದಿರದ ಮಕ್ಕಳು ಕಂಸಾಳೆ, ಡೊಳ್ಳು ಕುಣಿತದ ಕಾರ್ಯಕ್ರಮ ನಡೆಸಿಕೊಟ್ಟರು. ಕೊಳಲು ವಾದನ, ಕನ್ನಡ ಚಿತ್ರಗೀತೆಗಳ ಹಾಡು, ವಿಂದ್ಯಾ ಅಕಾಡೆಮಿಯಿಂದ ಶಾಸ್ತ್ರೀಯ ಸಂಗೀತ, ಪಾಶ್ಚಿಮಾತ್ಯ ನೃತ್ಯ, ಗೀಟಾರ್ ವಾದನ ನಡೆಯಿತು. ಅಪಾರ್ಟ್‌ಮೆಂಟ್ ನಿವಾಸಿಗಳು ಕೆಂಪು ಹಳದಿ ಬಣ್ಣದ ವಸ್ತ್ರ ಧರಿಸಿದ್ದು ವಿಶೇಷ ಗಮನ ಸೆಳೆಯಿತು.

ಪಾಲಿಕೆ ಮಾಜಿ ಸದಸ್ಯ ಪಿ.ಜೆ. ಅಂತೋಣಿಸ್ವಾಮಿ, ಮುಖಂಡರಾದ ಭಟ್ಟರಹಳ್ಳಿ ಮಂಜು, ಮೇಡಹಳ್ಳಿ ಕೃಷ್ಣಮೂರ್ತಿ, ಮಲ್ಲೇಶ್, ಕೋದಂಡರಾಮಯ್ಯ, ಪಶ್ಮಿನಾ ಅಸೋಸಿಯೇಷನ್ ಅಧ್ಯಕ್ಷ ಶ್ರೀಧರ್, ಕನ್ನಡ ರಾಜ್ಯೋತ್ಸವ ಸಮಿತಿಯ ಸದಸ್ಯರಾದ ಸುಬ್ರಹ್ಮಣ್ಯಂ ಕೃಷ್ಣಮೂರ್ತಿ (ಮಣಿ), ಸುಧಾಕರ್ ಕಟಕಮ್, ಡಾ. ಆಶ್ವಿನಿ ಪಾಟೀಲ್, ಹೇಮಾ ಹೆಗ್ಡೆ, ಶ್ರೀನಿವಾಸ್ ಕಟ್ಕಂ, ಅಶೀಸ್ ರಾಮದೇವ್, ಬಿಜುಲಾಲ್, ಅಶಿತೋಷ್, ದೀಪಾ, ನವ್ಯಶ್ರೀ ಸುಬ್ರಹ್ಮಣ್ಯಂ ಇದ್ದರು.



ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಕನ್ನಡ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಕನ್ನಡ ಧ್ವಜಾರೋಹಣ ನೆರವೇರಿಸಿದರು.

ಮಕ್ಕಳ ಆರೋಗ್ಯದ ಜಾಗೃತಿಗೆ ವಾಕಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಕ್ಕಳ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ರೈನ್‌ಬೋ ಆಸ್ಪತ್ರೆಯು ಕಂಠೀರವ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ವಾಕಥಾನ್‌ಗೆ ಸಂಸದ ಪಿ.ಸಿ. ಮೋಹನ್, ನಟಿ ಸಪ್ತಮಿ ಗೌಡ ಮತ್ತು ಸಂಚಾರ ಪೂರ್ವ ವಿಭಾಗದ ಡಿಸಿಪಿ ಕಲಾ ಕೃಷ್ಣಮೂರ್ತಿ ಭಾನುವಾರ ಚಾಲನೆ ನೀಡಿದರು.

ನಟಿ ಸಪ್ತಮಿ ಗೌಡ ಮಾತನಾಡಿ, ‘ಕೋವಿಡ್ ಪಿಡುಗಿನ ಸಂದರ್ಭದಲ್ಲಿ ಅತ್ಯಂತದ ಕಷ್ಟದ ದಿನಗಳನ್ನು ಎದುರಿಸಬೇಕಾಯಿತು. ಈಗ ಎಲ್ಲ ಕ್ಷೇತ್ರಗಳು ಚೇತರಿಸಿಕೊಂಡಿವೆ. ಮಕ್ಕಳ ಆರೋಗ್ಯ ಬಹಳ ಮುಖ್ಯ. ಈ ನಿಟ್ಟಿನಲ್ಲಿ ರೇನ್‌ಬೋ ಆಸ್ಪತ್ರೆ ಮಹತ್ತರ ಪಾತ್ರ ನಿರ್ವಹಿಸುತ್ತಿದೆ’ ಎಂದರು.

ಡಿಸಿಪಿ ಕಲಾ ಕೃಷ್ಣಮೂರ್ತಿ ಮಾತನಾಡಿ, ‘ಪ್ರತಿಯೊಬ್ಬರು ಸದೃಢವಾಗಿರುವುದು ಮುಖ್ಯ. ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ವಾಕಥಾನ್ ಆಯೋಜಿಸಲಾಗಿದೆ. ಪ್ರತಿಯೊಬ್ಬರು ಆರೋಗ್ಯದ ಬಗ್ಗೆ ಕಾಳಜಿವಹಿಸಬೇಕು’ ಎಂದರು.

ಕ್ಲಿನಿಕಲ್ ಡೈರೆಕ್ಟರ್ ಡಾ. ಅರವಿಂದ ಶೆಣೈ ಮಾತನಾಡಿ, ‘ಎಲ್ಲರ ಮಾನಸಿಕ ಆರೋಗ್ಯದ ಮೇಲೆ ಕೋವಿಡ್ ಪರಿಣಾಮ ಬೀರಿದೆ. ಮಕ್ಕಳನ್ನು ಅವರ ಹಿಂದಿನ ಜೀವನ ಶೈಲಿಗೆ ತರುವ ಸಮಯ ಇದಾಗಿದೆ. ಈ ವಾಕಥಾನ್ ಮೂಲಕ ಮಕ್ಕಳು ಮತ್ತು ವಯಸ್ಕರ ಜೀವನದಲ್ಲಿ ಬದಲಾವಣೆಯಾಗಬೇಕು. ಆರೋಗ್ಯಕರ ಜೀವನಕ್ಕೆ ಪ್ರತಿದಿನ ಹೆಜ್ಜೆ ಹಾಕಬೇಕು’ ಎಂದು ಸಲಹೆ ನೀಡಿದರು.

ರೈನ್ ಬೋ ಆಸ್ಪತ್ರೆಯ ಉಪಾಧ್ಯಕ್ಷ ಪಿ.ನಿತ್ಯಾನಂದ, ಮಕ್ಕಳ ತೀವ್ರ ನಿಗಾ ಸೇವೆಗಳ ಮುಖ್ಯಸ್ಥ ಡಾ. ರಕ್ಷಯ್ ಶೆಟ್ಟಿ, ಡಾ.ಎಂ. ಎಸ್. ಶ್ರೀಧರ್, ರತೀಫ್ ಕೆ.ಎಂ., ವಿಕ್ರಂ ವಿ. ಇದ್ದರು.



ನಗರದಲ್ಲಿ ಭಾನುವಾರ ನಡೆದ ವಾಕಥಾನ್‌ಗೆ ನಟಿ ಸಪ್ತಮಿ ಗೌಡ, ಸಂಚಾರ ಪೂರ್ವ ವಿಭಾಗದ ಡಿಸಿಪಿ ಕಲಾ ಕೃಷ್ಣಮೂರ್ತಿ ಚಾಲನೆ ನೀಡಿದರು.

ರೈಲ್ವೆ: ಸಮನ್ವಯ ಸಮಿತಿ ರಚನೆಗೆ ನಿರ್ಧಾರ

ಬೆಂಗಳೂರು: ರಾಜ್ಯದಲ್ಲಿ ರೈಲ್ವೆ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ರೈಲ್ವೆ ಇಲಾಖೆ ಮತ್ತು ರಾಜ್ಯ ಸರ್ಕಾರದ ಹಿರಿಯ ಅಧಿಕಾರಿಗಳನ್ನು ಒಳಗೊಂಡ ಸಮನ್ವಯ ಸಮಿತಿ ರಚಿಸಲು ನಿರ್ಧರಿಸಲಾಗಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಮಾಡಿದ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು, ಕರ್ನಾಟಕದಲ್ಲಿನ ರೈಲ್ವೆ ಯೋಜನೆಗಳ ಅನುಷ್ಠಾನ ಕುರಿತು ಚರ್ಚಿಸಿದರು. ಶೇಕಡ 50:50ರ ವೆಚ್ಚ ಹಂಚಿಕೆ ಆಧಾರದಲ್ಲಿ ಕೈಗೆತ್ತಿಕೊಂಡಿರುವ ಒಂಬತ್ತು ಹೊಸ ಯೋಜನೆಗಳ ಪ್ರಗತಿ ಪರಿಶೀಲಿಸಿದರು. ಭೂಸ್ವಾಧೀನ, ಅನುದಾನ ಬಿಡುಗಡೆ, ಕಾಮಗಾರಿಗೆ ವೇಗ ನೀಡುವುದರಲ್ಲಿ ಸಮನ್ವಯ ಸಾಧಿಸಲು ಸಮಿತಿ ರಚಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು.

‘ಭೂಸ್ವಾಧೀನ ಪ್ರಕ್ರಿಯೆಗೆ ವೇಗ ನೀಡುವುದು ಮತ್ತು ರೈಲ್ವೆ ಯೋಜನೆಗಳ ಅನುಷ್ಠಾನಕ್ಕೆ ಎದುರಾಗುವ ತೊಡಕು ನಿವಾರಿಸಲು ಸಮನ್ವಯ ಸಮಿತಿ ರಚಿಸಲಾಗುವುದು’ ಎಂದು ಬೊಮ್ಮಾಯಿ ತಿಳಿಸಿದರು.

ಹುಬ್ಬಳ್ಳಿಗೆ ವಂದೇ ಭಾರತ್: 2023ರ ಮಾರ್ಚ್‌ನಿಂದ ಹುಬ್ಬಳ್ಳಿ– ಬೆಂಗಳೂರು ಮಾರ್ಗದಲ್ಲಿ ವಂದೇ ಭಾರತ್ ರೈಲು ಓಡಿಸಲು ನಿರ್ಧರಿಸಲಾಗಿದೆ. ಇದೇ ವೇಳೆ ಈ ಮಾರ್ಗದ ವಿದ್ಯುದ್ದೀಕರಣ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚಿಸಲಾಯಿತು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದ ಎಸ್. ಮುನಿಸ್ವಾಮಿ, ಹಣಕಾಸು ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ, ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ್, ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಸಂಜೀವ್ ಕಿಶೋರ್ ಸಭೆಯಲ್ಲಿ ಪಾಲ್ಗೊಂಡಿದ್ದರು.

ನಗರದಲ್ಲಿ ಇಂದು

‘ಆರ್.ವಿ. ಲಾ ಜರ್ನಲ್’ ಬಿಡುಗಡೆ: ಶ್ರೀನಿವಾಸ್ ಹರೀಶ್ ಕುಮಾರ್, ಸಿ.ಎಸ್. ಪಾಟೀಲ, ಸಾಯಿರಾಂ ಭಟ್, ಅಧ್ಯಕ್ಷತೆ: ಎಂ.ಪಿ. ಶ್ಯಾಮ್, ಆಯೋಜನೆ ಮತ್ತು ಸ್ಥಳ: ಆರ್.ವಿ. ಇನ್‌ಸ್ಟಿಟ್ಯೂಟ್ ಆಫ್ ಲೀಗಲ್ ಸ್ಟಡೀಸ್, 3ನೇ ಬ್ಲಾಕ್ ಜಯನಗರ, ಬೆಳಿಗ್ಗೆ 9

ಉನ್ನತ ಶಿಕ್ಷಣದ ಗುಣಮಟ್ಟದ ಮೇಲೆ ರಾಷ್ಟ್ರೀಯ ಶಿಕ್ಷಣ ನೀತಿ–2020ರ ಪ್ರಭಾವ ಕುರಿತು ರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ಬಿ. ತಿಮ್ಮೇಗೌಡ, ಎಂ.ಎಸ್. ಶ್ಯಾಮ ಸುಂದರ್, ಶಂಕರ ಡಿ. ನವಲೆ, ಆರ್.ಕೆ. ಚಂದ್ರನಾಥ್, ಎಂ. ಜಯಪ್ಪ, ಪಾರ್ವತಿ, ಅಧ್ಯಕ್ಷತೆ: ಮದನ್ ದೌಲತರಾಮ್, ಆಯೋಜನೆ: ಸಿಂಧಿ ಕಾಲೇಜು, ಹೆಬ್ಬಾಳ, ಕೆಂಪಾಪುರ, ಬೆಳಿಗ್ಗೆ 10

ಲಕ್ಷ ದೀಪೋತ್ಸವ: ಬೆಳಿಗ್ಗೆ 6ಕ್ಕೆ ಅಭಿಷೇಕ, 9ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12ಕ್ಕೆ ಅನ್ನದಾನ, ಸಂಜೆ 6.30ಕ್ಕೆ ಲಕ್ಷ ದೀಪೋತ್ಸವ ಹಾಗೂ ರಾಜಬೀದಿಗಳಲ್ಲಿ ಮೆರವಣಿಗೆ, ಆಯೋಜನೆ: ಕಾಶಿವಿಶ್ವೇಶ್ವರಸ್ವಾಮಿ ಹಾಗೂ ಅನ್ನಪೂರ್ಣೇಶ್ವರಿ ದೇವಸ್ಥಾನ, ಬಳೇಪೇಟೆ ವೃತ್ತ

ನೋಬೆಲ್ ಒಳನೋಟ ಉಪನ್ಯಾಸಗಳು: ಅತಿಥಿಗಳು: ಎ.ಆರ್. ಉಷಾದೇವಿ, ಆಯೋಜನೆ ಮತ್ತು ಸ್ಥಳ: ಮೈಸೂರು ಎಜ್ಯುಕೇಷನ್ ಸೊಸೈಟಿ, ಮಲ್ಲೇಶ್ವರ, ಬೆಳಿಗ್ಗೆ 11

ಮ್ಯಾಗ್ನಿಫ್ಲೆಕ್ಸ್ ಇಂಡಿಯಾದ ಮಳಿಗೆ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಎನ್ರಿಕೊ ಸೆನ್ನಿ, ಆನಂದ ನಿಚಾನಿ, ಸ್ಥಳ: 36 ಸಿ ಕ್ರಾಸ್, 9ನೇ ಮುಖ್ಯ ರಸ್ತೆ ವಿ ಬ್ಲಾಕ್, ಜಯನಗರ, ಸಂಜೆ 4

ಕನ್ನಡ ರಾಜ್ಯೋತ್ಸವ: ಉದ್ಘಾಟನೆ: ನಾ.ಸೋಮೇಶ್ವರ, ಉಪಸ್ಥಿತಿ: ರಾಧಾ ಎಸ್. ಗುಂಡಳ್ಳಿ, ಪ್ರಶಸ್ತಿ ಪ್ರದಾನ: ವೀರಕಪುತ್ರ ಶ್ರೀನಿವಾಸ್, ಅತಿಥಿಗಳು: ವ.ಚ.ಚನ್ನೇಗೌಡ, ರಘು ಎಸ್.ಪಿ., ಅಧ್ಯಕ್ಷತೆ: ಸಂತೋಷ ಮಡೇನೂರು, ಆಯೋಜನೆ: ಸಸ್ಯಯಜ್ಞ ತಂಡ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ನಯನ ಸಭಾಂಗಣ, ರವೀಂದ್ರ ಕಲಾಕ್ಷೇತ್ರ, ಸಂಜೆ 5.30

ಸಾಹಿತ್ಯ ರತ್ನ ಅನ್ನದಾನಯ್ಯ ಪುರಾಣಿಕ ಸ್ಮಾರಕ ದತ್ತಿ ಉಪನ್ಯಾಸ: ವಿಷಯ: ಗಾಂಧೀಜಿಯವರ ಸಮನ್ವಯ ದೃಷ್ಟಿ, ಉಪನ್ಯಾಸ: ಡಿ. ಆಂಜಿನಪ್ಪ ಚಳ್ಳಕೆರೆ, ಆಶಯ ನುಡಿ: ಜೀರಿಗೆ ಲೋಕೇಶ್, ವಿಶೇಷ ಆಹ್ವಾನಿತರು: ಮಲ್ಲೇಪುರಂ ಜಿ.ವೆಂಕಟೇಶ, ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, ಉಪಸ್ಥಿತಿ: ಚಂದ್ರಿಕಾ ಪುರಾಣಿಕ, ಎಚ್.ಎಸ್. ರಾಘವೇಂದ್ರ ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಗಾಂಧಿ ಪ್ರತಿಷ್ಠಾನ ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಶೇಷಾದ್ರಿಪುರ ಸಂಜೆ ಕಾಲೇಜು, ಸ್ಥಳ: ಶೇಷಾದ್ರಿಪುರ ಶಿಕ್ಷಣ ದತ್ತಿಯ ಸಭಾಂಗಣ, ಶೇಷಾದ್ರಿಪುರ, ಸಂಜೆ 6

ಮಂಜುನಾಥ್ ಹೊನ್ನಾಪುರ ಅವರ ಚಿತ್ರಗಳ ಪ್ರದರ್ಶನದ ಉದ್ಘಾಟನೆ: ಚಿ.ಸು. ಕೃಷ್ಣ ಸೆಟ್ಟಿ, ಅತಿಥಿಗಳು: ಮುನಿರಾಜು ಡಿ., ಪ್ರಭು ಅಕ್ಷಿಂತಲಾ, ಎಸ್. ನಟರಾಜ್ ಬೂದಾಳ, ಪ್ರಭು ಹಸೂರ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಸಂಜೆ 6

ಕಡಲೆಕಾಯಿ ಪರಿಷೆ ಮತ್ತು ಕೆಂಪಾಂಬುಧಿ ಕೆರೆಯಲ್ಲಿ ತೆಪ್ಪೋತ್ಸವ. ಸ್ಥಳ:ಬುಲ್ ಟೆಂಪಲ್ ರಸ್ತೆ, ಬಸವನಗುಡಿ, ಸಂಜೆ 6

ಆರ್ಯವೈಶ್ಯ ಮಹಾಸಭಾ ಪ್ರತಿಭೋತ್ಸವದಲ್ಲಿ ಅಶ್ವತ್ಥನಾರಾಯಣ ಅಭಿಮತ

‘ಶೈಕ್ಷಣಿಕ ಪ್ರಗತಿಯತ್ತ ಗಮನಹರಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಸಮುದಾಯ ಜನಸಂಖ್ಯೆಯನ್ನೇ ನಂಬಿಕೊಳ್ಳದೆ ಶೈಕ್ಷಣಿಕ ಪ್ರಗತಿಯತ್ತ ಗಮನ ಹರಿಸಿದರೆ ಮಾತ್ರ 21ನೇ ಶತಮಾನದಲ್ಲಿ ಪ್ರಭಾವಿಯಾಗಲಿದೆ’ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಹೇಳಿದರು.

ಕರ್ನಾಟಕ ಆರ್ಯವೈಶ್ಯ ಮಹಾಸಭಾ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಜಾಗತೀಕರಣದ ಯುಗದಲ್ಲಿ ಶೈಕ್ಷಣಿಕ ಉನ್ನತಿ ಸಾಧಿಸುವವರು ಮಾತ್ರ ಉಜ್ವಲ ಅವಕಾಶ ಪಡೆಯುತ್ತಾರೆ. ಸ್ಪರ್ಧಾತ್ಮಕ ಯುಗದಲ್ಲಿ ಗುಣಮಟ್ಟ ಮತ್ತು ಉತ್ಕೃಷ್ಟತೆ ನಿಜವಾದ ಶಕ್ತಿಗಳಾಗಿವೆ’ ಎಂದು ಬಣ್ಣಿಸಿದರು.

‘ಸಮಾಜದ ಎಲ್ಲಾ ಸಮುದಾಯಗಳ ಸಮಾನ ಅಭಿವೃದ್ಧಿ ಸಾಧ್ಯವಾಗಬೇಕೆಂಬ ಗುರಿಯೊಂದಿಗೆ ಪ್ರಧಾನಿ ನರೇಂದ್ರ ಮೋದಿ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಿದ್ದಾರೆ. ಇದರ ಅನುಷ್ಠಾನದಲ್ಲಿ ಕರ್ನಾಟಕವು ಮೊದಲ ಸ್ಥಾನದಲ್ಲಿ ಇದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಆರ್ಥಿಕವಾಗಿ ಹಿಂದುಳಿದಿರುವವರಿಗೆ ಶೇ 10ರಷ್ಟು ಮೀಸಲಾತಿ ನೀತಿ ಘೋಷಿಸಿದ್ದಾರೆ. ಸುಪ್ರೀಂಕೋರ್ಟ್ ಮೀಸಲಾತಿ ಎತ್ತಿ ಹಿಡಿದಿದೆ. ಅನುಷ್ಠಾನ ಪ್ರಕ್ರಿಯೆಗಳೂ ಆರಂಭವಾಗಿವೆ ಎಂದರು.

ವಾಸವಿಪೀಠದ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ಮಾಜಿ ಸಭಾಪತಿ ಡಿ.ಎಚ್.ಶಂಕರ ಮೂರ್ತಿ, ಸಂಸದ ಪಿ.ಸಿ.ಮೋಹನ್, ವಕೀಲ ಕೆ.ಆರ್. ಪ್ರದೀಪ್, ಜೈನ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಚೆನ್‌ರಾಜ್ ರಾಯ್‌ಚಂದ್, ರಾಜ್ಯ ಗೊಲ್ಲ ಯಾದವ ಸಂಘದ ಅಧ್ಯಕ್ಷ ಡಿ.ಟಿ. ಶ್ರೀನಿವಾಸ್, ಕರ್ನಾಟಕ ಆರ್ಯವೈಶ್ಯ ಮಹಾಸಭಾ ಅಧ್ಯಕ್ಷ ಆರ್.ಪಿ.ರವಿಶಂಕರ್, ಶಾಸಕ ಎಚ್.ಪಿ. ಮಂಜುನಾಥ್ ಉಪಸ್ಥಿತರಿದ್ದರು.



ನಗರದಲ್ಲಿ ನಡೆದ ಪ್ರತಿಭೋತ್ಸವ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ಸಿ.ಎನ್. ಅಶ್ವತ್ಥ ನಾರಾಯಣ, ಡಿ.ಎಚ್.ಶಂಕರಮೂರ್ತಿ, ಸಂಸದ ಪಿ.ಸಿ.ಮೋಹನ್, ಕೆ.ಆರ್. ಪ್ರದೀಪ್, ಚೆನ್‌ರಾಜ್ ರಾಯ್‌ಚಂದ್, ಡಿ.ಟಿ. ಶ್ರೀನಿವಾಸ್, ಆರ್.ಪಿ.ರವಿಶಂಕರ್ ಇದ್ದಾರೆ

ಕೆಎಫ್‌ಸಿಸಿ ಚುನಾವಣೆ ರದ್ದು ಕೋರಿದ್ದ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ (ಕೆಎಫ್‌ಸಿಸಿ) 2022–2023ರ ಸಾಲಿನ ಚುನಾವಣೆಯಲ್ಲಿ ಅಕ್ರಮ ನಡೆದಿದ್ದು ಆಯ್ಕೆ ಕಾನೂನು ಬಾಹಿರ’ ಎಂದು ಘೋಷಿಸುವಂತೆ ಕೋರಿದ್ದ ರಿಟ್ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ಕೆಎಫ್‌ಸಿಸಿ ಮಾಜಿ ಅಧ್ಯಕ್ಷ ಸಾ.ರಾ. ಗೋವಿಂದು, ಬಿ.ಕೆ.ಜಯಸಿಂಹ ಮುಸರಿ ಮತ್ತು ಕೆ.ಎಂ. ವೀರೇಶ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ನಿಮ್ಮ ಅಹವಾಲನ್ನು ಸಿವಿಲ್ ಕೋರ್ಟ್ ಮುಂದೆ ಕೊಂಡೊಯ್ದು ಪರಿಹಾರ ಪಡೆಯಿರಿ’ ಎಂದು ಅರ್ಜಿದಾರರಿಗೆ ನಿರ್ದೇಶಿಸಿದೆ.

ವಿಚಾರಣೆ ವೇಳೆ ಹಾಲಿ ಅಧ್ಯಕ್ಷ ಬಾ.ಮ.ಹರೀಶ್ ಪರ ವಕೀಲ ಕೆ.ವಿ.ಧನಂಜಯ ಅವರು, ‘ಅರ್ಜಿದಾರು ಈ ಪ್ರಕರಣದಲ್ಲಿ ನ್ಯಾಯ ಪಡೆಯಲು ಚುನಾವಣಾ ಅರ್ಜಿಯನ್ನು ಸಲ್ಲಿಸಬೇಕಿತ್ತೇ ಹೊರತು ರಿಟ್ ಅರ್ಜಿಯನ್ನಲ್ಲ’ ಎಂದು ಆಕ್ಷೇಪಿಸಿದ್ದರು.

ವಿಚಾರಣೆ ಆಲಿಸಿದ್ದ ನ್ಯಾಯಪೀಠ, ‘ಚುನಾವಣೆ ನಡೆಸುವುದು ಅಥವಾ ಚುನಾಯಿತ ಅಭ್ಯರ್ಥಿಗಳ ಘೋಷಣೆ ಮಾಡುವುದು ಅಥವಾ ಹೊಸ ಚುನಾವಣೆ ನಡೆಸುವ ನಿರ್ದೇಶನ ನೀಡಲು ಸಿವಿಲ್ ನ್ಯಾಯಾಲಯ ಸಮರ್ಥವಾಗಿದೆ. ಹಾಗಾಗಿ ಅರ್ಜಿದಾರರು ಈ ಸಂಬಂಧ ಸಕ್ಷಮ ಪ್ರಾಧಿಕಾರವಾದ ಸಿವಿಲ್ ಕೋರ್ಟ್‌ನಲ್ಲಿಯೇ ಸೂಕ್ತ ಪರಿಹಾರ ಪಡೆಯಬಹುದು‘ ಎಂದು ಆದೇಶಿಸಿ ಅರ್ಜಿ ವಜಾಗೊಳಿಸಿದೆ.

ಪ್ರಕರಣದಲ್ಲಿ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಜಿಲ್ಲಾ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್, ಚುನಾವಣಾಧಿಕಾರಿ ಥಾಮಸ್ ಡಿಸೋಜಾ, ಕೆಎಫ್‌ಸಿಸಿ ವ್ಯವಸ್ಥಾಪಕ, ಮಂಡಳಿಯ ಅಧ್ಯಕ್ಷ ಬಾ.ಮ. ಹರೀಶ್, ಉಪಾಧ್ಯಕ್ಷ ಜೈಜಗದೀಶ್ ಸೇರಿದಂತೆ ಒಟ್ಟು 12 ಜನರನ್ನು ಪ್ರತಿವಾದಿಗಳನ್ನಾಗಿ ಹೆಸರಿಸಲಾಗಿತ್ತು.

ಪ್ರಕರಣವೇನು?: ಕೆಎಫ್‌ಸಿಸಿಯ 2022–23ನೇ ಸಾಲಿನ 64ನೇ ವರ್ಷದ ವಾರ್ಷಿಕ ಚುನಾವಣೆ 2022ರ ಮೇ 28ರಂದು ಜರುಗಿತ್ತು. ಅಧ್ಯಕ್ಷರಾಗಿ ನಿರ್ಮಾಪಕ ಬಾ.ಮ.ಹರೀಶ್ ಬಣ ಗೆಲುವು ಸಾಧಿಸಿತ್ತು. ಪರಾಜಿತ ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಸಾ.ರಾ.ಗೋವಿಂದು, ‘ಈ ಚುನಾವಣೆ ಅನುಚಿತವಾಗಿದ್ದು ಕಾನೂನು ಬಾಹಿರವಾಗಿದೆ. ಚುನಾವಣೆಯಲ್ಲಿ ಚುನಾವಣಾಧಿಕಾರಿ ವಂಚಿಸಿದ್ದಾರೆ’ ಎಂದು ಆರೋಪಿಸಿ ಜಿಲ್ಲಾ ಸಹಕಾರ ಸಂಘಗಳ ಡೆಪ್ಯೂಟಿ ರಿಜಿಸ್ಟ್ರಾರ್ ಅವರಿಗೆ ದೂರು ನೀಡಿದ್ದರು. ಡೆಪ್ಯೂಟಿ ರಿಜಿಸ್ಟ್ರಾರ್ ಈ ದೂರನ್ನು ತಿರಸ್ಕರಿಸಿದ್ದರು. ಇದನ್ನು ಪ್ರಶ್ನಿಸಿ ಗೋವಿಂದು ಹೈಕೋರ್ಟ್ ಮೆಟ್ಟಿಲೇರಿದ್ದರು.



ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನ ವತಿಯಿಂದ ‘ಸಂಸ್ಕೃತಿ ಸಿರಿ’–2022 ಪ್ರಶಸ್ತಿಗೆ ಭಾಜನರಾದ ಗಾಯಕಿ ಕಸ್ತೂರಿ ಶಂಕರ್, ವಾಗ್ಮಿ ಸುಧಾ ಬರಗೂರು, ಲೇಖಕ ನಾಗೇಶ್ ಹೆಗಡೆ, ಕನ್ನಡಪರ ಹೋರಾಟಗಾರ ರಾಮಣ್ಣ ಕೋಡಿಹೊಸಳ್ಳಿ, ಸಾಹಿತಿ ಕೋಟಗಾನಹಳ್ಳಿ ರಾಮಯ್ಯ, ಕಾಡುಮಲ್ಲೇಶ್ವರ ಗೆಳೆಯರ ಬಳಗದ ಸಂಸ್ಥಾಪಕ ಅಧ್ಯಕ್ಷ ಬಿ.ಕೆ. ಶಿವರಾಂ, ನೃತ್ಯ ಗುರು ಸುಪರ್ಣ ವೆಂಕಟೇಶ್, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದ ಕಡಿದಾಳ್ ಪ್ರಕಾಶ್ ಅವರೊಂದಿಗೆ ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣಸ್ವಾಮಿ, ಗೌರವ ಅಧ್ಯಕ್ಷ ಹಿ.ಜಿ. ಬೋರಲಿಂಗಯ್ಯ, ಪ್ರಧಾನ ಕಾರ್ಯದರ್ಶಿ ಆನಂದ ಮಾದಲಗೆರೆ, ಉಪ ಲೋಕಾಯುಕ್ತ ಕೆ.ಎನ್. ಫಣೀಂದ್ರ, ನಿವೃತ್ತ ಪ್ರಧಾನ ಕಾರ್ಯದರ್ಶಿ ಐ.ಎಂ. ವಿಠ್ಠಲಮೂರ್ತಿ ಉಪಸ್ಥಿತರಿದ್ದರು

‘ಸಂಸ್ಕೃತಿ ಸಿರಿ’ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನದಲ್ಲಿ ಸಾಹಿತ್ಯ, ಸಂಸ್ಕೃತಿ ಮುಖ್ಯ. ಸಾಹಿತಿಗಳ ಸಂದೇಶಗಳನ್ನು ಅರಿತು, ಅರ್ಥೈಸಿಕೊಂಡು, ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು’ ಎಂದು ಉಪ ಲೋಕಾಯುಕ್ತ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಸಲಹೆ ನೀಡಿದರು.

ಡಾ. ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ‘ಸಂಸ್ಕೃತಿ ಸಿರಿ–2022’ ಪ್ರಶಸ್ತಿ ಪ್ರದಾನ ಮಾಡಿ ಅವರು ಭಾನುವಾರ ಮಾತನಾಡಿದರು.

‘ಒಂದು ವ್ಯಕ್ತಿಯಿಂದ ಒಂದು ವಿಷಯ, ವಿಚಾರವನ್ನು ಕೇಳಿದಾಗ ಅದನ್ನು ತಿಳಿದುಕೊಳ್ಳಬೇಕು. ಮಿದುಳಿಗೆ ತೆಗೆದುಕೊಂಡು ಅರ್ಥ ಮಾಡಿಕೊಳ್ಳಬೇಕು. ಒಳ್ಳೆಯ ವಿಷಯಗಳನ್ನು ನಮ್ಮ ಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳಬೇಕು ಎಂಬುದನ್ನು ಯೋಚಿಸಬೇಕು’ ಎಂದು ಅವರು ಹೇಳಿದರು.

ನಿವೃತ್ತ ಐಎಎಸ್ ಅಧಿಕಾರಿ ಐ.ಎಂ. ವಿಠ್ಠಲಮೂರ್ತಿ ಮಾತನಾಡಿ, ‘ಈಗಿನ ದಿನಗಳಲ್ಲಿ ಸರ್ಕಾರಕ್ಕೂ ಅರ್ಜಿ ಹಾಕಿ ಪ್ರಶಸ್ತಿಗಳನ್ನು ಪಡೆಯಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಸಂಸ್ಥೆಗಳನ್ನು ಕಟ್ಟಿದವರನ್ನು, ಸಂಸ್ಕೃತಿ ಬೆಳೆಸಿದವರು ಸೇರಿದಂತೆ ಎಲ್ಲ ಕ್ಷೇತ್ರಕ್ಕೆ ಸೇರಿದವರಿಗೆ ಪ್ರಶಸ್ತಿ ನೀಡಿರುವುದು ಅಭಿನಂದನೀಯ’ ಎಂದು ಹೇಳಿದರು.

‘ಸಂಸ್ಕೃತಿ ಸಿರಿ’–2022 ಪ್ರಶಸ್ತಿಯನ್ನು ಭಾಜನರಾದ ಗಾಯಕಿ ಕಸ್ತೂರಿ ಶಂಕರ್, ವಾಗ್ಮಿ ಸುಧಾ ಬರಗೂರು, ಪರಿಸರ ತಜ್ಞ- ಲೇಖಕ ನಾಗೇಶ್ ಹೆಗಡೆ, ಕನ್ನಡಪರ ಹೋರಾಟಗಾರ ರಾಮಣ್ಣ ಕೋಡಿಹೊಸಳ್ಳಿ, ಸಾಹಿತಿ ಕೋಟಗಾನಹಳ್ಳಿ ರಾಮಯ್ಯ, ಕಾಡುಮಲೇಶ್ವರ ಗೆಳೆಯರ ಬಳಗದ ಸಂಸ್ಥಾಪಕ ಅಧ್ಯಕ್ಷ ಬಿ.ಕೆ. ಶಿವರಾಂ, ನೃತ್ಯ ಗುರು ಸುಪರ್ಣ ವೆಂಕಟೇಶ್, ರಾಷ್ಟ್ರ ಕವಿ ಕುವೆಂಪು ಪ್ರತಿಷ್ಠಾನದ ಕಡಿದಾಳ್ ಪ್ರಕಾಶ್ ಅವರಿಗೆ ನೀಡಲಾಯಿತು. ₹25 ಸಾವಿರ ನಗದು, ಫಲಕ ಮತ್ತು ಪ್ರಶಸ್ತಿ ಪತ್ರವನ್ನು ವಿತರಿಸಲಾಯಿತು.

ಪ್ರತಿಷ್ಠಾನದ ಅಧ್ಯಕ್ಷ ವೇಮಗಲ್ ನಾರಾಯಣಸ್ವಾಮಿ, ಗೌರವ ಅಧ್ಯಕ್ಷ ಹಿ.ಜಿ. ಬೋರಲಿಂಗಯ್ಯ, ಪ್ರಧಾನ ಕಾರ್ಯದರ್ಶಿ ಆನಂದ ಮಾದಲಗೆರೆ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ವೃದ್ಧೆಗೆ ಮೋಸ: ಆರೋಪಿ ಬಂಧನ

ಬೆಂಗಳೂರು: ‘ಸರ್ಕಾರದ ಸೌಲಭ್ಯಗಳನ್ನು ಕೊಡಿಸುತ್ತೇನೆ’ ಎಂದು ವೃದ್ಧೆಗೆ ನಂಬಿಸಿ ಚಿನ್ನಾಭರಣ ಬಿಚ್ಚಿಸಿಕೊಂಡು ಪರಾರಿಯಾಗಿದ್ದ ತಿಲಕ್ ನಗರದ ಅಬ್ದುಲ್ ಎಂಬಾತನನ್ನು ಕೋಣನಕುಂಟೆ ಪೊಲೀಸರು ಬಂಧಿಸಿದ್ದಾರೆ.

ಆಧಾರ್ ಕಾರ್ಡ್, ಪಿಂಚಣಿ ಮಾಡಿಸಿಕೊಡುತ್ತೇನೆ ಎಂದು ನಂಬಿಸಿದ್ದ. ಇದೇ ರೀತಿ ಹಲವು ಮಹಿಳೆಯರಿಗೆ ನಂಬಿಸಿ ವಂಚಿಸಿದ್ದ. ಅಧಿಕಾರಿಗಳಿಗೆ ಹಣ ಕೊಡಬೇಕು. ಹಣ ನೀಡುವಂತೆ ಹೇಳುತ್ತಿದ್ದ. ಹಣ ಇಲ್ಲದಿದ್ದರೆ ಚಿನ್ನಾಭರಣ ನೀಡಿದರೆ ಅವುಗಳನ್ನು ಗಿರವಿ ಇಟ್ಟು ಹಣ ತರುವುದಾಗಿ ನಂಬಿಸಿ ಆಭರಣ ಪಡೆದು ಪರಾರಿ ಆಗುತ್ತಿದ್ದ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಈತನ ವಿರುದ್ಧ 12ಕ್ಕೂ ಹೆಚ್ಚು ಅಪರಾಧ ಪ್ರಕರಣ ದಾಖಲಾಗಿದ್ದು, ವಂಚನೆಯ ಪ್ರಕರಣಗಳಲ್ಲಿ ಮೂರು ಬಾರಿ ಜೈಲಿಗೆ ಹೋಗಿ ಜಾಮೀನಿನ ಬಿಡುಗಡೆಗೊಂಡಿದ್ದ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾದಕ ವಸ್ತು ಸಾಗಣೆ ಆರೋಪಿ ಬಂಧನ

ಬೆಂಗಳೂರು: ರಟ್ಟಿನ ಪೆಟ್ಟಿಗೆಯಲ್ಲಿ ಹೆರಾಯಿನ್ ಸಾಗಿಸುತ್ತಿದ್ದ ವ್ಯಕ್ತಿಯನ್ನು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

ಆರೋಪಿ 2 ಕೆ.ಜಿಯಷ್ಟು ಮಾದಕ ವಸ್ತುಗಳನ್ನು ಹೊರ ರಾಜ್ಯದಿಂದ ಬೆಂಗಳೂರಿಗೆ ತರುತ್ತಿದ್ದ. ಆತ ವಿಮಾನ ಇಳಿದು ಹೊರಬರುವಾಗ ಅನುಮಾನಗೊಂಡು ತಪಾಸಣೆಗೆ ಒಳಪಡಿಸಿದಾಗ ಮಾದಕ ವಸ್ತು ಸಾಗಣೆ ಮಾಡುತ್ತಿರುವುದು ಪತ್ತೆಯಾಗಿದೆ. ಬೆಂಗಳೂರಿನಲ್ಲಿ ಈತ ಮಾದಕ ವಸ್ತು ಪೂರೈಕೆ ಮಾಡುತ್ತಿದ್ದ ಎಂಬುದು ವಿಚಾರಣೆ ವೇಳೆ ಗೊತ್ತಾಗಿದೆ.

ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೆಆರ್‌ಎಸ್ ಪಕ್ಷ: ₹ 100 ಕೋಟಿ ದೇಣಿಗೆಗೆ ಪಾದಯಾತ್ರೆ

ಬೆಂಗಳೂರು: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷವು (ಕೆಆರ್‌ಎಸ್) ಮುಂಬರುವ ವಿಧಾನಸಭೆ ಚುನಾವಣಾ ವೆಚ್ಚ ಭರಿಸಲು ಇದೇ 21ರಿಂದ ‘ಮಹಾಭಿಕ್ಷಾ’ ಹೆಸರಲ್ಲಿ ಪಾದಯಾತ್ರೆ ಹಮ್ಮಿಕೊಂಡಿದೆ.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಎಸ್.ಎಚ್. ಲಿಂಗೇಗೌಡ, ‘ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕಿನ ಕುರುಡುಮಲೆಯಲ್ಲಿ ಪಾದಯಾತ್ರೆಗೆ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ಚಾಲನೆ ನೀಡಲಿದ್ದಾರೆ. ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ತಲಾ ಮೂರು ದಿನಗಳು, ಬೆಂಗಳೂರು ನಗರದಲ್ಲಿ 15 ದಿನಗಳು ಪಾದಯಾತ್ರೆ ನಡೆಯಲಿದೆ’ ಎಂದರು.

‘ಇತ್ತೀಚೆಗೆ ಚುನಾವಣೆಗಳು ಕೇವಲ ಹಣ ಬಲ ಮತ್ತು ಜಾತಿ ಬಲದಿಂದ ನಡೆಯುತ್ತಿವೆ ಎಂಬ ನಂಬಿಕೆ ಬಹುತೇಕರಲ್ಲಿ ಬೇರೂರಿದೆ. ಪ್ರಾಮಾಣಿಕರು ಮತ್ತು ಸಾಮಾನ್ಯರು ಚುನಾವಣೆಯಲ್ಲಿ ಸ್ಪರ್ಧಿಸಲು ಯೋಚಿಸುವಂತಹ ವಾತಾವರಣವಿದೆ. ಪ್ರಾಮಾಣಿಕವಾಗಿ ಚುನಾವಣೆ ಎದುರಿಸಲೂ ಒಂದಷ್ಟು ಹಣದ ಅವಶ್ಯಕತೆಯಿದೆ. ಮುಂಬರುವ ಚುನಾವಣೆಗೆ ಈಗಾಗಲೇ 60ಕ್ಕೂ ಹೆಚ್ಚು ಕ್ಷೇತ್ರಗಳಿಗೆ ಸಂಭಾವ್ಯ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ವಿಧಾನಸಭೆ ಚುನಾವಣೆಯನ್ನು ಉತ್ತಮ ರೀತಿಯಲ್ಲಿ ಎದುರಿಸಲು ₹ 100 ಕೋಟಿ ಅಗತ್ಯವಿದೆ’ ಎಂದು ತಿಳಿಸಿದರು.

‘ಈ ಪಾದಯಾತ್ರೆಯನ್ನು ರಾಜ್ಯದ ಎಲ್ಲೆಡೆ ನಡೆಸಲಾಗುತ್ತದೆ. ರೈತರು, ಕಾರ್ಮಿಕರು, ಕೈಗಾರಿಕೋದ್ಯಮಿಗಳು ಸೇರಿ ಎಲ್ಲ ಕ್ಷೇತ್ರದವರಿಂದಲೂ ದೇಣಿಗೆ ಕೇಳಲಾಗುತ್ತದೆ. ಪ್ರಮುಖ ಪಕ್ಷಗಳು ಕ್ಷೇತ್ರವೊಂದಕ್ಕೆ ಖರ್ಚು ಮಾಡುವ ಹಣವನ್ನು ನಾವು 224 ವಿಧಾನಸಭೆ ಕ್ಷೇತ್ರದಲ್ಲಿ ಖರ್ಚು ಮಾಡಲು ಕೇಳುತ್ತಿದ್ದೇವೆ’ ಎಂದು ಹೇಳಿದರು.

ಮಹಿಳೆ ದೇಹ 6 ತುಂಡುಗಳಾಗಿ ಕತ್ತರಿಸಿದ ಮಾಜಿ ಪ್ರೇಮಿ

ಅಜಂಗಡ, ಉತ್ತರಪ್ರದೇಶ (ಪಿಟಿಐ): ಮಾಜಿ ಪ್ರೇಯಸಿಯ ದೇಹವನ್ನು ಆರು ತುಂಡುಗಳಾಗಿ ಕತ್ತರಿಸಿ ಬಾವಿಗೆ ಎಸೆದಿದ್ದ ಆರೋಪಿಯನ್ನು ಇಲ್ಲಿನ ಪೊಲೀಸರು ಬಂಧಿಸಿದ್ದಾರೆ.

‘ಪ್ರಿನ್ಸ್ ಯಾದವ್ ಬಂಧಿತ. ಮಹಿಳೆಯ ರುಂಡದ ಪತ್ತೆಗಾಗಿ ಆರೋಪಿಯನ್ನು ಭಾನುವಾರ ಘಟನಾ ಸ್ಥಳಕ್ಕೆ ಕರೆದೊಯ್ಯಲಾಗಿತ್ತು. ಈ ವೇಳೆ ಆತ ಸ್ಥಳದಲ್ಲಿ ಬಚ್ಚಿಟ್ಟಿದ್ದ ನಾಡ ಪಿಸ್ತೂಲ್‌ನಿಂದ ಪೊಲೀಸರ ಮೇಲೆ ಗುಂಡು ಹಾರಿಸಿ ಪರಾರಿಯಾಗಲು ಯತ್ನಿಸಿದ್ದ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಅನುರಾಗ್ ಆರ್ಯ ಹೇಳಿದ್ದಾರೆ.

‘ಪಶ್ಚಿಮಿ ಗ್ರಾಮದ ಹೊರ ಭಾಗದಲ್ಲಿರುವ ಬಾವಿಯಲ್ಲಿ ಇದೇ 15ರಂದು ಮೃತದೇಹ ಪತ್ತೆಯಾಗಿತ್ತು. ಮೃತಳನ್ನು ಆರಾಧನಾ ಎಂದು ಗುರುತಿಸಲಾಗಿದೆ. ಆರೋಪಿ, ಆಕೆಯೊಂದಿಗೆ ಸಂಬಂಧ ಹೊಂದಿದ್ದ. ಆಕೆ ಬೇರೊಬ್ಬರನ್ನು ವಿವಾಹವಾಗಿದ್ದರಿಂದ ಕೆರಳಿದ್ದ ಆತ, ತನ್ನ ಪೋಷಕರು ಹಾಗೂ ಸೋದರ ಸಂಬಂಧಿಯ ನೆರವಿನೊಂದಿಗೆ ಹತ್ಯೆ ಮಾಡಿದ್ದ’ ಎಂದಿದ್ದಾರೆ.

‘ಇದೇ 9ರಂದು ಆರೋಪಿ ತನ್ನ ಬೈಕಿನಲ್ಲಿ ಮಹಿಳೆಯನ್ನು ದೇವಸ್ಥಾನಕ್ಕೆ ಕರೆದುಕೊಂಡು ಹೋಗಿದ್ದ. ದೇವಸ್ಥಾನ ತಲುಪಿದ ಬಳಿಕ ಸಂಬಂಧಿ ಸರ್ವೇಶ್ ಜೊತೆಗೂಡಿ ಮಹಿಳೆಯನ್ನು ಕಬ್ಬಿನ ಗದ್ದೆಗೆ ಎಳೆದೊಯ್ದಿದ್ದ. ಅಲ್ಲಿ ಆಕೆಯ ದೇಹವನ್ನು ಆರು ತುಂಡುಗಳಾಗಿ ಕತ್ತರಿಸಿ ಪಾಲಿಥಿನ್ ಚೀಲದಲ್ಲಿ ತುಂಬಿದ್ದರು. ಅದನ್ನು ಬಾವಿಗೆ ಎಸೆದಿದ್ದರು. ರುಂಡವನ್ನು ಕೆರೆಯೊಂದರಲ್ಲಿ ಬಿಸಾಡಿದ್ದರು’ ಎಂದು ಮಾಹಿತಿ ನೀಡಿದ್ದಾರೆ.

ಹೈದರಾಬಾದ್ ರೇಸ್

ಮಕ್ತೂಬ್ ಗೆಲ್ಲುವ ನಿರೀಕ್ಷೆ

ಶ್ಯಾಮ್‌ಲಾಲ್ ಗುಪ್ತ ಮೆಮೋರಿಯಲ್ ಕಪ್‌ನ ಮೊದಲನೇ ಡಿವಿಜನ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮಕ್ತೂಬ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 12.40ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಲಾ ಮಿರೇಜ್ 1, ಕ್ಲೆಫೇರಿ 4, ಇವಾನೊ 3
2ನೇ ರೇಸ್: ಬ್ಲೂ ಡಾಲಿ 1, ಲಕಿ ನೈನ್ 3, ವೊಯಾಗರ್ 4
3ನೇ ರೇಸ್: ಮೈ ವೇ ಆರ್ ಹೈವೇ 4, ಸಿಲ್ವರ್ ಲೈನಿಂಗ್ 6, ಚೈನಾ ಟೌನ್ 7
4ನೇ ರೇಸ್: ಮಿರಾನ 1, ರಾಯಲ್ ಗ್ರೇಸ್ 2, ಫೋರ್ ಒನ್ ಫೋರ್ 6
5ನೇ ರೇಸ್: ಎನ್‌ಆರ್‌ಐ ಸನ್ 3, ಕ್ಯಾಂಪೇನಿಯಾ 7, ಅಶ್ವ ರಾಡಿ 2
6ನೇ ರೇಸ್: ಡೂ ಎ ಡೀರ್ 2, ಬೆಲ್ಲಾಗಿಯೊ 3, ದಿ ಥಂಡರ್ 4
7ನೇ ರೇಸ್: ಕ್ರಿಮ್‌ಸನ್ ರೋಸ್ 3, ಹೈ ರಿವಾರ್ಡ್ 8, ಮಿಸ್ಟರ್ ಪರ್ಫೆಕ್ಟ್ 4
8ನೇ ರೇಸ್: ಮಕ್ತೂಬ್ 3, ಚಕಿಟ್ 1, ನೈಟ್‌ಮೇರ್ 6
9ನೇ ರೇಸ್: ಮಿಸ್ ಸಾಲಿಟೇರ್ 5, ಪ್ರೊಟೊಕಾಲ್ 4, ಅವಾನ್ಸಿಯಾ 2

ಉತ್ತಮ ಬೆಟ್: ಲಾ ಮಿರೇಜ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ಚಳಿಗಾಲದ ಅಧಿವೇಶನಕ್ಕೂ ಮುನ್ನ ಎರಡು ಪ್ರತ್ಯೇಕ ಸಮಾವೇಶ ನಡೆಸಲು ನಿರ್ಧಾರ

ಕಾಂಗ್ರೆಸ್‌ನಿಂದಲೂ ಎಸ್‌.ಸಿ, ಎಸ್‌.ಟಿ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಸೆಂಬರ್ ತಿಂಗಳಿನಲ್ಲಿ ವಿಧಾನಮಂಡಲದ ಚಳಿಗಾಲದ ಅಧಿವೇಶನಕ್ಕೂ ಮುನ್ನ ಪರಿಶಿಷ್ಟ ಜಾತಿ (ಎಸ್‌.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್‌.ಟಿ) ಎರಡು ಸಮಾವೇಶಗಳನ್ನು ಆಯೋಜಿಸಲು ಭಾನುವಾರ ನಡೆದ ಕಾಂಗ್ರೆಸ್ ನಾಯಕರ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮತಗಳನ್ನು ಸೆಳೆಯಲು ತಮ್ಮ ಪಕ್ಷವೂ ಬೃಹತ್ ಸಮಾವೇಶ ಆಯೋಜಿಸಬೇಕು ಎಂಬ ಪ್ರಸ್ತಾವನ್ನು ಶಾಸಕ ಜಿ. ಪರಮೇಶ್ವರ ಅವರು ಕಾಂಗ್ರೆಸ್ ನಾಯಕರ ಮುಂದಿಟ್ಟಿದ್ದರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ, ಮುಖಂಡರಾದ ಕೆ.ಎಚ್. ಮುನಿಯಪ್ಪ ಮತ್ತು ಡಾ.ಎಚ್.ಸಿ. ಮಹದೇವಪ್ಪ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

'ದಲಿತ ವಿರೋಧಿ ಬಿಜೆಪಿ'

'ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಜನರಿಗೆ ಅವರ ಜನಸಂಖ್ಯೆಗೆ ಅನುಗುಣವಾಗಿ ಬಜೆಟ್‌ನಲ್ಲಿ ಹಣ ಮೀಸಲಿಡುವ ಕ್ರಾಂತಿಕಾರಿ ಕಾಯ್ದೆ ಜಾರಿಗೊಳಿಸಿದ್ದು ಕಾಂಗ್ರೆಸ್ ಸರ್ಕಾರದ ಬದ್ಧತೆ. ದಲಿತರ ವಿಚಾರದಲ್ಲಿ ಬಿಜೆಪಿಯ ಬದ್ಧತೆ ಭಾಷಣಗಳ ಸಮಾವೇಶಕ್ಕೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ಬಿಜೆಪಿ ಬಳ್ಳಾರಿಯಲ್ಲಿ ಭಾನುವಾರ ಆಯೋಜಿಸಿದ್ದ ಎಸ್‌.ಟಿ ಸಮಾವೇಶ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, 'ಎಸ್‌.ಸಿ ಮತ್ತು ಎಸ್‌.ಟಿ ಅಭಿವೃದ್ಧಿಗೆ ಕಾಂಗ್ರೆಸ್ ಸರ್ಕಾರ ಐದು ವರ್ಷಗಳ ಅವಧಿಯಲ್ಲಿ ₹ 88,395 ಕೋಟಿ ಅನುದಾನ ನೀಡಿತ್ತು. ಐದು ವರ್ಷಗಳ ಅವಧಿಯಲ್ಲಿ ಬಿಜೆಪಿ ಸರ್ಕಾರ ನೀಡಿರುವುದು ₹ 22,261 ಕೋಟಿ ಮಾತ್ರ. ದಲಿತ ವಿರೋಧಿ ಬಿಜೆಪಿ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಎಸ್‌.ಸಿ ಮತ್ತು ಎಸ್‌.ಟಿ ಎರಡೂ ಸಮುದಾಯಗಳನ್ನು ಸೇರಿಸಿ 'ಐಕ್ಯತಾ ಸಮಾವೇಶ'ದ ಹೆಸರಿನಲ್ಲಿ ಕಾರ್ಯಕ್ರಮ ಆಯೋಜಿಸಲು ನಿರ್ಧರಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಜ್ಯದ ಪ್ರಮುಖ ನಾಯಕರಿಗೆ ಆಹ್ವಾನ ನೀಡುವ ನಿರ್ಣಯವನ್ನೂ ಕೈಗೊಳ್ಳಲಾಗಿದೆ' ಎಂದು ಕಾಂಗ್ರೆಸ್ ನಾಯಕರೊಬ್ಬರು ಮಾಹಿತಿ ನೀಡಿದರು. ದಕ್ಷಿಣ ಕರ್ನಾಟಕದಲ್ಲಿ ಒಂದು ಹಾಗೂ ಉತ್ತರ ಕರ್ನಾಟಕದಲ್ಲಿ ಒಂದು ಸಮಾವೇಶ ನಡೆಸಲು ನಿರ್ಧರಿಸಲಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಚಿತ್ರದುರ್ಗ, ಬೆಂಗಳೂರು ಮತ್ತು ತುಮಕೂರು ಜಿಲ್ಲೆಗಳ ಪೈಕಿ ಒಂದು ಕಡೆ ಸಮಾವೇಶ ಆಯೋಜಿಸಲು ಯೋಚಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಕಲಬುರಗಿ ಅಥವಾ ರಾಯಚೂರಿನಲ್ಲಿ ಸಮಾವೇಶ ನಡೆಸುವ ಚಿಂತನೆ ನಡೆದಿದೆ ಎಂದು ಹೇಳಿದರು.

ಪರಿಶಿಷ್ಟ ಜಾತಿಯ ಮತದಾರರಲ್ಲಿ 'ಎಡಗೈ' ಸಮುದಾಯಗಳ ಜನರು ಬಿಜೆಪಿಯತ್ತ ಹೆಚ್ಚು ವಾಲುತ್ತಿರುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮತದಾರರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕಾಂಗ್ರೆಸ್‌ನತ್ತ ಸೆಳೆಯುವುದು ಸಮಾವೇಶ ಆಯೋಜಿಸುವ ಉದ್ದೇಶ. ಪೂರಕವಾಗಿ ಸಿದ್ಧತೆ ನಡೆಸುವಂತೆ ಸೂಚಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯದಲ್ಲಿ 51 ಮೀಸಲು ವಿಧಾನಸಭಾ ಕ್ಷೇತ್ರಗಳಿವೆ. 36 ಕ್ಷೇತ್ರಗಳು ಪರಿಶಿಷ್ಟ ಜಾತಿಗೆ ಮೀಸಲಾಗಿದ್ದರೆ, 15 ಕ್ಷೇತ್ರಗಳು ಪರಿಶಿಷ್ಟ ಪಂಗಡಗಳಿಗೆ ಮೀಸಲಾಗಿವೆ. ಈ ಕ್ಷೇತ್ರಗಳಲ್ಲಿ ಪ್ರಾಬಲ್ಯ ಸಾಧಿಸುವುದಕ್ಕೆ ಪೂರಕವಾಗಿ ಸಮಾವೇಶಗಳನ್ನು ಬಳಸಿಕೊಳ್ಳಲು ಕಾಂಗ್ರೆಸ್ ನಾಯಕರು ಚರ್ಚಿಸಿದ್ದಾರೆ.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಎಚ್.ಸಿ.ಮಹದೇವಪ್ಪ, 'ಬಿಜೆಪಿಗೆ ಸಾಮಾಜಿಕ ನ್ಯಾಯ, ಮೀಸಲಾತಿ ಮತ್ತು ಸಂವಿಧಾನದಲ್ಲಿ ನಂಬಿಕೆ ಇಲ್ಲ. ರಾಜಕೀಯ ಲಾಭಕ್ಕಾಗಿ ಶೋಷಿತ ಸಮುದಾಯಗಳ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆ. ಕಾಂಗ್ರೆಸ್ ಪಕ್ಷ ಮಾತ್ರ ಸಂವಿಧಾನದ ಆಶಯಗಳನ್ನು ಈಡೇರಿಸುತ್ತದೆ' ಎಂದು ಹೇಳಿದರು.

ಸಿದ್ದರಾಮಯ್ಯ ಸ್ಪರ್ಧೆ ಕುರಿತು ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಮತ್ತೆ ಅಧಿಕಾರಕ್ಕೆ ಬರಬೇಕು ಎಂಬುದು ಜನರ ಬಯಕೆ. ಅವರು ಯಾವುದೇ ಕ್ಷೇತ್ರದಲ್ಲಿ ಸ್ಪರ್ಧಿಸಿದರೂ ಗೆಲ್ಲುತ್ತಾರೆ. ಸಿದ್ದರಾಮಯ್ಯ ಜನಬೆಂಬಲ ಇರುವ ನಾಯಕ ಎಂಬುದನ್ನು ಅರಿತುಕೊಂಡು ಬಿಜೆಪಿ ಮತ್ತು ಜೆಡಿಎಸ್ ಅವರನ್ನು ವಿರೋಧಿಸುತ್ತಿವೆ' ಎಂದು ಹೇಳಿದರು.

'ಹೆಬ್ಬೆಟ್ಟು ಆಯೋಗ' ಆಗೋದು ಬೇಡ'

ಮತದಾರರ ದತ್ತಾಂಶಕ್ಕೆ ಕನ್ನ ದೊಡ್ಡ ಹಗರಣ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: 'ಮತದಾರರ ದತ್ತಾಂಶ ಕಳವು ದೊಡ್ಡ ಹಗರಣದಂತೆ ಕಾಣುತ್ತಿದೆ. ಚುನಾವಣಾ ಆಯೋಗ ಕಠಿಣ ಕ್ರಮ ಕೈಗೊಳ್ಳಲಿ. ಅದು ಹೆಬ್ಬೆಟ್ಟು ಆಯೋಗ ಆಗುವುದು ಬೇಡ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಭಾನುವಾರ ಒತ್ತಾಯಿಸಿದರು.

ಜೆಡಿಎಸ್ ಪಂಚರತ್ನ ರಥಯಾತ್ರೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬಿಜೆಪಿಗೆ ಮತ ಹಾಕಲ್ಲ ಎಂದು ಮತದಾರರ ಹೆಸರನ್ನೇ ಪಟ್ಟಿಯಿಂದ ಕೈ ಬಿಟ್ಟಿರುವುದು ಗಂಭೀರ ವಿಚಾರ' ಎಂದರು.

'ಸರ್ಕಾರವೇ ನೇರವಾಗಿ ಭಾಗಿಯಾಗಿದೆ. ಪೊಲೀಸ್ ತನಿಖೆಯಿಂದ ಸತ್ಯ ಹೊರಬರಲು ಸಾಧ್ಯವಿಲ್ಲ. ಚುನಾವಣಾ ಆಯೋಗ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

'ಕಾಂಗ್ರೆಸ್‌ನವರೇನು ತನಿಖಾಧಿಕಾರಿಗಳೇ?'

ರಾಮನಗರ: 'ಖಾಸಗಿ ಏಜೆನ್ಸಿ ಚಿಲುಮೆಯು ಮತದಾರರ ಮಾಹಿತಿ ಕಲೆ ಹಾಕಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಮುಕ್ತವಾಗಿ ತನಿಖೆ ನಡೆಸುತ್ತಿದ್ದಾರೆ. ಕಾಂಗ್ರೆಸ್‌ನವರು ತಾವೇ ತನಿಖಾಧಿಕಾರಿಗಳಂತೆ ವರ್ತಿಸಬಾರದು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅಸಮಾಧಾನ ವ್ಯಕ್ತಪಡಿಸಿದರು.

ಮಾಗಡಿಯಲ್ಲಿ ಭಾನುವಾರ ಪತ್ರಕರ್ತರ ಜತೆ ಮಾತನಾಡಿದ ಅವರು, ಕಾಂಗ್ರೆಸ್‌ನವರು ತಾವೇ ಪ್ರಕರಣದ ತನಿಖೆ ಮಾಡುತ್ತಿರುವ ರೀತಿ ದಿನಕ್ಕೊಂದು ಮಾಹಿತಿ ನೀಡುತ್ತಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಅಹಿಂದ ವರ್ಗ ಟಾರ್ಗೆಟ್: ಸಿದ್ದರಾಮಯ್ಯ

ಕೊಪ್ಪಳ: 'ಯಾರು ತಮಗೆ ಮತ ಹಾಕುವುದಿಲ್ಲವೋ ಅಂಥ ಮತದಾರರನ್ನು ಮತದಾರರ ಪಟ್ಟಿಯಿಂದ ಕೈ ಬಿಡುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ. ಅದರಲ್ಲಿಯೂ ಅಹಿಂದ ವರ್ಗದವರನ್ನು ಟಾರ್ಗೆಟ್ ಮಾಡಲಾಗುತ್ತಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆರೋಪಿಸಿದರು.

ವನಬಳ್ಳಾರಿ ಗ್ರಾಮದಲ್ಲಿ ಭಾನುವಾರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸಬೇಕು ಎಂದರು.

ಇಲ್ಲಿ 'ಇಕ್ಬಾಲ್ ಅನ್ಸಾರಿ ಅವರನ್ನು ಗೆಲ್ಲಿಸಿ ವಿಧಾನಸೌಧಕ್ಕೆ ಕಳುಹಿಸಬೇಕು' ಎನ್ನುವ ಮೂಲಕ ಅನ್ಸಾರಿಗೇ ಟಿಕೆಟ್ ಎನ್ನುವುದನ್ನು ಖಚಿತಪಡಿಸಿದರು.

ರಂಗಾಯಣದ ಸುತ್ತಲೂ 250ಕ್ಕೂ ಹೆಚ್ಚು ಪೊಲೀಸರ ನಿಯೋಜನೆ

ಭದ್ರತೆಯಲ್ಲಿ 'ಟಿಪ್ಪು ನಿಜಕನಸುಗಳು' ಪ್ರದರ್ಶನ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ರಂಗಾಯಣದ ಭೂಮಿಗೀತದಲ್ಲಿ 'ಟಿಪ್ಪು ನಿಜಕನಸುಗಳು' ನಾಟಕದ ಮೊದಲ ಪ್ರದರ್ಶನವು 250ಕ್ಕೂ ಹೆಚ್ಚು ಪೊಲೀಸರ ಬಿಗಿ ಭದ್ರತೆಯಲ್ಲಿ ಭಾನುವಾರ ಪ್ರದರ್ಶನಗೊಂಡಿತು.

ರಂಗಾಯಣದ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ ರಚನೆ ಹಾಗೂ ನಿರ್ದೇಶನದ ಈ ನಾಟಕವನ್ನು ರೆಪರ್ಟರಿ ಕಲಾವಿದರು ಅಭಿನಯಿಸಿದರು. ಕಾದಂಬರಿಕಾರ ಎಸ್‌.ಎಲ್‌.ಭೈರಪ್ಪ, ಲೇಖಕ ಡಾ.ಪ್ರಧಾನ ಗುರುದತ್ತ, ಶಾಸಕ ಕೆ.ಜಿ. ಬೋಪಯ್ಯ, ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ.ವಸಂತಕುಮಾರ, ಸಂಸದ ಪ್ರತಾಪ ಸಿಂಹ ಪತ್ನಿ ಅರ್ಪಿತಾ ಸಿಂಹ ವೀಕ್ಷಿಸಿದರು.

ಫೋಟೊ, ವಿಡಿಯೊಗೆ ನಿಷೇಧ: ಆವರಣದ ಸುತ್ತಲೂ ಪೊಲೀಸ್ ವಾಹನಗಳೇ ಹೆಚ್ಚಿದ್ದವು. ಟಿಕೆಟ್ ಇದ್ದವರಿಗೆ ಮಾತ್ರವೇ ಪ್ರವೇಶ ನೀಡಲಾಯಿತು. ಪ್ರದರ್ಶನಕ್ಕೆ ಕೆಲವೇ ನಿಮಿಷಗಳಿದ್ದಾಗ ಪತ್ರಕರ್ತರು ಹಾಗೂ ಛಾಯಾಗ್ರಾಹಕರಿಗೆ ಅವಕಾಶ ಕೊಡಲಾಯಿತು. ಫೋಟೊ ಹಾಗೂ ವಿಡಿಯೊ ಮಾಡಲು ನಿಷೇಧ ಹೇರಲಾಗಿತ್ತು. 'ಭೂಮಿಗೀತ'ದ 209 ಸೀಟುಗಳೂ ಭರ್ತಿಯಾಗಿದ್ದವು.



ಮೈಸೂರಿನ ರಂಗಾಯಣದ 'ಭೂಮಿಗೀತ'ದಲ್ಲಿ ಭಾನುವಾರ ಪ್ರದರ್ಶನಗೊಂಡ 'ಟಿಪ್ಪು ನಿಜಕನಸುಗಳು' ನಾಟಕದ ದೃಶ್ಯ

ಬಿಗಿಭದ್ರತೆ: ಡಿಸಿಪಿಗಳಾದ ಪ್ರದೀಪ್ ಗುಂಟಿ ಹಾಗೂ ಎಂ.ಎಸ್.ಗೀತಾ ಪ್ರಸನ್ನ ನೇತೃತ್ವದಲ್ಲಿ ಮೀಸಲು ಪಡೆಯ 250ಕ್ಕೂ ಹೆಚ್ಚು ಪೊಲೀಸರನ್ನು ರಂಗಾಯಣ ಹಾಗೂ ಕಲಾಮಂದಿರದ ಸುತ್ತ ನಿಯೋಜಿಸಲಾಗಿತ್ತು. ಹುಣಸೂರು ರಸ್ತೆ, ಕುಕ್ಕರಹಳ್ಳಿ ಕೆರೆ ರಸ್ತೆಯಲ್ಲೂ ಪೊಲೀಸರಿದ್ದರು.

ಬಸವಲಿಂಗಯ್ಯ ಆಕ್ರೋಶ: ಟಿಕೆಟ್ ಇದ್ದರೂ ಪ್ರವೇಶ ನೀಡದ ಪೊಲೀಸರೊಂದಿಗೆ ರಂಗಕರ್ಮಿ ಸಿ.ಬಸವಲಿಂಗಯ್ಯ ಹಾಗೂ ಪತ್ರಕರ್ತ ಟಿ.ಗುರುರಾಜ್ ಮಾತಿನ ಚಕಮಕಿ ನಡೆಸಿದರು. ದ್ವಾರದಲ್ಲೇ ಧರಣಿ ಕುಳಿತ ಅವರು, 'ಅನುಮಾನವಿದ್ದರೆ ನಮ್ಮೊಂದಿಗೆ ಪೊಲೀಸರೂ ಬರಲಿ' ಎಂದು ಮನವರಿಕೆ ಮಾಡಿದ ನಂತರ ಪ್ರವೇಶ ಕೊಡಲಾಯಿತು.

ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಪ್ರವೇಶ ದ್ವಾರದ ಬಳಿ ಎಲ್ಲರನ್ನೂ ಸ್ವಾಗತಿಸಿದರು.

'ನಾಟಕ ಪ್ರದರ್ಶನಕ್ಕೆ ತಡೆಯಾಜ್ಞೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಪರಿಗಣಿಸದಂತೆ ರಂಗಾಯಣ ಅರ್ಜಿ ಸಲ್ಲಿಸಿತ್ತು. 200ಕ್ಕೂ ಹೆಚ್ಚು ಟಿಕೆಟ್‌ಗಳು ಆನ್‌ಲೈನ್ ಮೂಲಕ ಮಾರಾಟವಾಗಿವೆ. ಸೋಮವಾರವೂ ಪ್ರದರ್ಶನ ಇದೆ' ಎಂದು ಕಾರ್ಯಪ್ಪ ತಿಳಿಸಿದರು.

ಇನ್‌ಸ್ಪೆಕ್ಟರ್ ಸಹಿತ 4 ಪೊಲೀಸರ ಅಮಾನತು

ಚಿಕ್ಕಮಗಳೂರು: ವರ್ತಕನಿಗೆ ಬೆದರಿಕೆ ಹಾಕಿ ಸುಲಿಗೆ ಮಾಡಿರುವ ಆರೋಪ ಎದುರಿಸುತ್ತಿರುವ ಅಜ್ಜಂಪುರ ಠಾಣೆಯ ಇನ್‌ಸ್ಪೆಕ್ಟರ್ ಲಿಂಗರಾಜು, ಕಾನ್‌ಸ್ಟೆಬಲ್‌ಗಳಾದ ಸಖರಾಯಪಟ್ಟಣ ಠಾಣೆಯ ಧನಪಾಲ್ ನಾಯ್ಕ್, ಕುದುರೆಮುಖ ಠಾಣೆಯ ಓಂಕಾರಮೂರ್ತಿ, ಲಿಂಗದಹಳ್ಳಿ ಠಾಣೆಯ ಶರತ್‌ರಾಜ್ ಅವರನ್ನು ಅಮಾನತುಗೊಳಿಸಲಾಗಿದೆ.

ನಾಲ್ವರ ವಿರುದ್ಧ ಅಜ್ಜಂಪುರ ಠಾಣೆಯಲ್ಲಿ ಐಪಿಸಿ 392 (ಸುಲಿಗೆ), 34ರ ಅಡಿ (ಅಪರಾಧ ಸಂಚು) ಪ್ರಕರಣ ದಾಖಲಾಗಿದೆ. ದಾವಣಗೆರೆಯ ಆಭರಣ ವ್ಯಾಪಾರಿ ಭಗವಾನ್ ಸಂಕ್ಲ ಅವರು ಇದೇ 17ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದ್ದರು.

ದೂರಿನಲ್ಲಿ ಏನಿದೆ?: ಮೇ 11ರಂದು ಚಿಕ್ಕಮಗಳೂರು, ಬೇಲೂರಿನ ಅಂಗಡಿಗಳಿಗೆ ಆಭರಣ ತಲುಪಿಸಲು ದಾವಣಗರೆಯಿಂದ ಕಾರಿನಲ್ಲಿ ಸಾಗುತ್ತಿದ್ದಾಗ ಬುಕ್ಕಾಂಬುಧಿ ಬಳಿಯ ಟೋಲ್ ಗೇಟ್ ಸನಿಹ ಇಬ್ಬರು ತಡೆದರು. ಇನ್‌ಸ್ಪೆಕ್ಟರ್ ಜೀಪ್ ಇದ್ದಲ್ಲಿಗೆ ಕರೆದೊಯ್ದರು. ಇನ್‌ಸ್ಪೆಕ್ಟರ್ ಲಿಂಗರಾಜು ಕಾರಿನೊಳಗೆ ಕುಳಿತರು. ಮೊಬೈಲ್ ಫೋನ್ ಕಿತ್ತುಕೊಂಡರು, ಕಾರಿನಲ್ಲಿ ಏನಿದೆ ವಿಚಾರಿಸಿದರು.

'ಚಿನ್ನದ ಆಭರಣ ಇದೆ. ಬೇಲೂರು, ಚಿಕ್ಕಮಗಳೂರು ಅಂಗಡಿಗಳಿಗೆ ತಲುಪಿಸಲು ಒಯ್ಯುತ್ತಿರುವುದಾಗಿ' ತಿಳಿಸಿ, ಜಿಎಸ್‌ಟಿ ಬಿಲ್‌ಗಳನ್ನು ಪೊಲೀಸರಿಗೆ ನೀಡಿದೆ. ಆದರೂ ಪೊಲೀಸರು ಬಂಗಾರ ಅಕ್ರಮ ಸಾಗಾಣಿಕೆ ಕೇಸು ದಾಖಲಿಸುವುದಾಗಿ ಬೆದರಿಸಿದರು. ಮೊದಲು ₹10 ಲಕ್ಷಕ್ಕೆ ಬೇಡಿಕೆ ಇಟ್ಟು, ಕೊನೆಗೆ ಐದು ಲಕ್ಷಕ್ಕೆ ಒಪ್ಪಿಕೊಂಡರು.

ಇಬ್ಬರು ಕಾನ್‌ಸ್ಟೆಬಲ್‌ಗಳು ಕಾರು ಹಿಂಬಾಲಿಸಿದರು. ಅಜ್ಜಂಪುರದ ಪೆಟ್ರೋಲ್ ಬಂಕ್ ಬಳಿ ಐದು ಲಕ್ಷ ಹಣವನ್ನು ನನ್ನಿಂದ ಪಡೆದುಕೊಂಡರು. ವಿಷಯ ಬಾಯಿಬಿಟ್ಟರೆ ವ್ಯಾಪಾರಕ್ಕೆ ತೊಂದರೆ ಮಾಡುವುದಾಗಿ ಬೆದರಿಕೆ ಹಾಕಿದ್ದರು' ಎಂದು ಭಗವಾನ್ ಸಂಕ್ಲ ದೂರಿನಲ್ಲಿ ತಿಳಿಸಿದ್ದಾರೆ.

ಅಕ್ರಮಕ್ಕೆ ಅಧಿಕಾರಿಗಳ ನೆರವು

ಒಂದನೇ ಪುಟದಿಂದ...

ದೂರು ನೀಡದಂತೆ ಪ್ರಭಾವಿ ವ್ಯಕ್ತಿಯೊಬ್ಬರು ಸೂಚಿಸಿದ್ದರು ಎಂದು ಮೂಲಗಳು ತಿಳಿಸಿವೆ. ಬಂಧಿತ ಆರೋಪಿಗಳಾದ ರೇಣುಕಾ ಪ್ರಸಾದ್ ಹಾಗೂ ಧರ್ಮೇಶ್ ಅವರು ಬಿಬಿಎಂಪಿ ಅಧಿಕಾರಿಗಳ ಪಾತ್ರದ ಬಗ್ಗೆ ಬಾಯ್ಬಿಟ್ಟಿದ್ದಾರೆ. ಕಂದಾಯ ಅಧಿಕಾರಿ ಚಂದ್ರಶೇಖರ್ ಹಾಗೂ ಸಿಬ್ಬಂದಿಯನ್ನು ಪೊಲೀಸರು ವಿಚಾರಣೆ ನಡೆಸಿದ್ದಾರೆ.

'ಉಳಿದ ವಲಯಗಳ ಆರ್‌ಒ ಗಳಿಗೆ ನೋಟಿಸ್ ಜಾರಿ ಮಾಡಿ ವಿಚಾರಣೆ ನಡೆಸಲು ಪೊಲೀಸರು ಮುಂದಾಗಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಆ್ಯಪ್ ರೂಪಿಸಿದ್ದ ವ್ಯಕ್ತಿ ವಶ': 'ಚಿಲುಮೆ' ಸಂಸ್ಥೆಗೆ 'ಸಮೀಕ್ಷಾ ಆ್ಯಪ್' ಅಭಿವೃದ್ಧಿ ಪಡಿಸಿದ್ದ ಸಂಜೀವ್ ಶೆಟ್ಟಿ ಎಂಬಾತನನ್ನು ಪೊಲೀಸರು ಭಾನುವಾರ ವಶಕ್ಕೆ ಪಡೆದು ವಿಚಾರಣೆ ನಡೆಸಿದರು. ಈ ಆ್ಯಪ್‌ಗೆ ಚಿಲುಮೆಯ ಸಮೀಕ್ಷಾ ಸಿಬ್ಬಂದಿ ಮನೆಮನೆಗೆ ತೆರಳಿ ಮತದಾರರ ಗುರುತಿನ ಚೀಟಿ ಹಾಗೂ ಆಧಾರ್ ಸಂಖ್ಯೆ ಜೋಡಿಸುತ್ತಿದ್ದರು. 'ಆ್ಯಪ್ ರೂಪಿಸಿಕೊಟ್ಟ ಉದ್ದೇಶ, ಅದಕ್ಕೆ ಪಡೆದ ಹಣ, ಸಮೀಕ್ಷಾ ಆ್ಯಪ್ ರೂಪಿಸಲು ಕೋರಿದ್ದವರು ಯಾರು?' ಎಂಬ ಮಾಹಿತಿಯನ್ನು ಸಂಜೀವ್ ಅವರಿಂದ ತನಿಖಾ ತಂಡ ಪಡೆದುಕೊಂಡಿದೆ.

ಕೆಂಪೇಗೌಡ ಬಂಧನದ ಬಳಿಕ ವಶಕ್ಕೆ ಪಡೆದಿದ್ದ ಅವರ ಪೋಷಕರು ಹಾಗೂ ಪತ್ನಿಯನ್ನು ಮನೆಗೆ ಕಳುಹಿಸಿದ್ದು, ಮತ್ತೆ ವಿಚಾರಣೆಗೆ ಕರೆದರೆ ಬರುವಂತೆ ಸೂಚಿಸಲಾಗಿದೆ. ಇದುವರೆಗೆ 15 ಮಂದಿಯ ವಿಚಾರಣೆ ನಡೆಸಲಾಗಿದೆ ಎಂದು ಮೂಲಗಳು ತಿಳಿಸಿವೆ.

2013ರಿಂದಲೂ ತನಿಖೆಗೆ ಆದೇಶ: ಸಿಎಂ

ಬೆಂಗಳೂರು: ಚಿಲುಮೆ ಸಂಸ್ಥೆಯು ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಭಾಗಿಯಾಗಿ, ಅಕ್ರಮ ಎಸಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ 2013 ರಿಂದಲೂ ತನಿಖೆ ನಡೆಸಲು ಆದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜತೆ ಭಾನುವಾರ ಮಾತನಾಡಿದ ಅವರು, '2013ರಿಂದ ಈಚೆಗೆ ಚಿಲುಮೆ ಟ್ರಸ್ಟ್‌ಗೆ ಮತದಾರರ ಜಾಗೃತಿ, ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಪಾಲ್ಗೊಳ್ಳಲು ನೀಡಿದ ಆದೇಶಗಳು, ಯಾವ ಉದ್ದೇಶಕ್ಕಾಗಿ ಅಂತಹ ಆದೇಶ ನೀಡಲಾಗಿತ್ತು? ಯಾರೆಲ್ಲಾ ಆದೇಶ ನೀಡಿದ್ದರು? ಎಂಬುದರ ಕುರಿತು ತನಿಖೆ ನಡೆಸುವಂತೆ ನಿರ್ದೇಶಿಸಲಾಗಿದೆ. ತನಿಖೆ ನಡೆದು, ಸತ್ಯಾಂಶ ಹೊರಬರಲಿ' ಎಂದರು.

'ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷವು ಆಧಾರ ರಹಿತ ಆರೋಪ ಮಾಡುತ್ತಿದೆ. ನಮ್ಮ ಸರ್ಕಾರ ನೀಡಿದ ಆದೇಶಕ್ಕೂ, ಅವರ ಸರ್ಕಾರದ ಅವಧಿಯಲ್ಲಿ ನೀಡಿದ್ದ ಆದೇಶಕ್ಕೂ ಸಾಕಷ್ಟು ವ್ಯತ್ಯಾಸಗಳಿವೆ. ಮತದಾರರ ಜಾಗೃತಿ ಕಾರ್ಯಕ್ರಮಕ್ಕೆ ಸೀಮಿತವಾಗಿ ನಮ್ಮ ಅವಧಿಯಲ್ಲಿ ಆದೇಶ ನೀಡಲಾಗಿತ್ತು. ರಾಜಕೀಯ ಪಕ್ಷಗಳ ಜತೆ ಸಂಬಂಧ ಇರಿಸಿಕೊಳ್ಳಬಾರದು ಎಂಬ ಷರತ್ತನ್ನೂ ವಿಧಿಸಲಾಗಿತ್ತು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆಗೆ ಚಿಲುಮೆ ಸಂಸ್ಥೆಗೆ ಅವಕಾಶ ನೀಡಿದ್ದರು. ಚುನಾವಣಾ ಆಯೋಗ ಮಾಡಬೇಕಿದ್ದ ಕೆಲಸವನ್ನು ಚಿಲುಮೆ ಸಂಸ್ಥೆಗೆ ವಹಿಸಿದ್ದು ದೊಡ್ಡ ಅಪರಾಧ' ಎಂದು ಹೇಳಿದರು.

ಮತದಾರರ ಪಟ್ಟಿ ಪರಿಷ್ಕರಣೆ ಮತ್ತು ಮತಗಟ್ಟೆ ಹಂತದ ಅಧಿಕಾರಿಗಳ (ಬಿಎಲ್‌ಒ) ನೇಮಕಕ್ಕೆ ಚಿಲುಮೆ ಸಂಸ್ಥೆಗೆ ಅನುಮತಿ ನೀಡಿ ಕೆ.ಆರ್.ಪುರ ತಹಶೀಲ್ದಾರ್ 2017ರ ಸೆಪ್ಟೆಂಬರ್‌ನಲ್ಲಿ ಆದೇಶಿಸಿದ್ದರು. ಆಯೋಗದ ನಿಯಮಗಳು ಹಾಗೂ ಪ್ರಜಾಪ್ರತಿನಿಧಿ ಕಾಯ್ದೆ ಉಲ್ಲಂಘಿಸಿ ಆದೇಶ ನೀಡಲಾಗಿತ್ತು ಎಂದರು.

ಮತದಾರರ ಪಟ್ಟಿಯಿಂದ ಹೆಸರು ಕೈಬಿಡುವುದಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರ ಆರೋಪಗಳಲ್ಲಿ ಹುರುಳಿಲ್ಲ. ಯಾವುದೇ ವ್ಯಕ್ತಿಯ ಹೆಸರನ್ನು ಮತದಾರರ ಪಟ್ಟಿಗೆ ಸೇರಿಸುವ ಅಥವಾ ಕೈಬಿಡುವ ಕೆಲಸವನ್ನು ಕೇಂದ್ರ ಚುನಾವಣಾ ಆಯೋಗ ಮಾಡುತ್ತದೆ.

ಒಂದೇ ಹೆಸರು ಎರಡು ಕಡೆ ಇದ್ದಂತಹ ಪ್ರಕರಣಗಳಲ್ಲಿ ಹೆಸರು ಕೈಬಿಡಲಾಗಿದೆ. ನಕಲಿ ಮತದಾರರನ್ನು ಕೈಬಿಟ್ಟಿರುವುದು ಕಾಂಗ್ರೆಸ್ ಕೋಪಕ್ಕೆ ಕಾರಣ. ನಕಲಿ ಮತದಾರರನ್ನು ಬಳಸಿಕೊಳ್ಳಲು ಆ ಪಕ್ಷ ಯೋಚಿಸಿತ್ತು ಎಂದು ಹೇಳಿದರು.

2ಎ ಮೀಸಲಾತಿಗಾಗಿ ಪಾದಯಾತ್ರೆ

ಕೈವಾರದಿಂದ ವಿಧಾನಸೌಧ ಚಲೋ ನಡೆಸಲು ಸಮಗ್ರ ಬಲಿಜ ವೇದಿಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಿಜ ಸಮುದಾಯಕ್ಕೆ ಪೂರ್ಣ ಪ್ರಮಾಣದಲ್ಲಿ 2ಎ ಮೀಸಲಾತಿ ಕಲ್ಪಿಸಲು ಒತ್ತಾಯಿಸಿ ಚಿಕ್ಕಬಳ್ಳಾಪುರ ಜಿಲ್ಲೆಯ ಕೈವಾರದಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಲು ಕರ್ನಾಟಕ ಸಮಗ್ರ ಬಲಿಜ ವೇದಿಕೆ ನಿರ್ಧರಿಸಿದೆ.

ಮೀಸಲಾತಿಗಾಗಿ ಹೋರಾಟ ರೂಪಿಸುವ ಸಂಬಂಧ ಭಾನುವಾರ ನಡೆದ ಚಿಂತನಾ ಸಭೆಯಲ್ಲಿ ವಿಧಾನಸೌಧ ಚಲೋ ನಡೆಸುವ ನಿರ್ಧಾರ ಕೈಗೊಳ್ಳಲಾಯಿತು.

ಬಲಿಜ ಹಾಗೂ ಅದರ ಉಪಜಾತಿಗಳು ಆರ್ಥಿಕ ಮತ್ತು ಸಾಮಾಜಿಕವಾಗಿ ಅತ್ಯಂತ ಹಿಂದುಳಿದ ಸಮುದಾಯಗಳಾಗಿವೆ. ಸದ್ಯ ಶಿಕ್ಷಣಕ್ಕೆ 2ಎ ಮೀಸಲಾತಿ ಕಲ್ಪಿಸಲಾಗಿದೆ. ಉದ್ಯೋಗದ ವಿಷಯದಲ್ಲಿ 3ಎ ಪಟ್ಟಿಯಲ್ಲಿ ಉಳಿಸಲಾಗಿದೆ. ರಾಜಕೀಯ ಮೀಸಲಾತಿಯೂ ಇಲ್ಲವಾಗಿದೆ ಎಂದು ಸಮುದಾಯದ ಮುಖಂಡ ಎಸ್. ರಮೇಶ್ (ಕೆಸಿಪಿ) ಹೇಳಿದರು.

ಬಲಿಜ ಸಮುದಾಯದ ಬಹುತೇಕರು ಅರಿಸಿನ-ಕುಂಕುಮ, ಬಳೆ, ಹೂವು, ಎಲೆ-ಅಡಿಕೆ ಮಾರಾಟ ರೀತಿಯ ಬೀದಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. 2ಎ ಮೀಸಲಾತಿ ನೀಡುವ ಮೂಲಕ ಉದ್ಯೋಗ ಮತ್ತು ರಾಜಕೀಯದಲ್ಲಿ ಮೀಸಲಾತಿ ಸಿಗುವಂತೆ ಮಾಡಬೇಕು. ಈ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಕರ್ನಾಟಕ ಬಲಿಜ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಸಮುದಾಯದ ಮುಖಂಡರನ್ನೇ ನಿಗಮಕ್ಕೆ ಅಧ್ಯಕ್ಷರನ್ನಾಗಿ ನೇಮಿಸಬೇಕು ಎಂದು ಒತ್ತಾಯಿಸಿದರು.

ಈ ಎಲ್ಲಾ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆಸಲು ನಿರ್ಧರಿಸಲಾಗಿದೆ. ಬಲಿಜ ಸಮುದಾಯದ ಕುಲದೇವರಾದ ಕೈವಾರ ತಾತಯ್ಯ ಅವರ ಸನ್ನಿಧಿಯಿಂದ ಪಾದಯಾತ್ರೆ ಆರಂಭಿಸಲು ನಿರ್ಧರಿಸಲಾಯಿತು ಎಂದರು.

ಮುಖಂಡರಾದ ಎನ್. ಮುನಿಕೃಷ್ಣ ದಾಸರಹಳ್ಳಿ, ಪಾವಗಡ ಕೊಂಡಪ್ಪ, ಸೂರ್ಯನಾರಾಯಣ ಚಿತ್ರದುರ್ಗ, ಮಂಡ್ಯ ನಾಗರಾಜು, ಹಾಸನ ಗೌತಮ್ ಮತ್ತು ಎಲ್ಲಾ ಜಿಲ್ಲೆಗಳ ಸಂಘದ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.



ಬಲಿಜ ವೇದಿಕೆ ಆಯೋಜಿಸಿದ್ದ ಚಿಂತನಾ ಕಾರ್ಯಕ್ರಮದಲ್ಲಿ ಮುಖಂಡರಾದ ಎನ್‌. ಮುನಿಕೃಷ್ಣ ದಾಸರಹಳ್ಳಿ, ಪಾವಗಡ ಕೊಂಡಪ್ಪ, ಸೂರ್ಯನಾರಾಯಣ ಚಿತ್ರದುರ್ಗ, ಮಂಡ್ಯ ನಾಗರಾಜು, ಹಾಸನದ ಗೌತಮ್ ಪಾಲ್ಗೊಂಡಿದ್ದರು



ಸುಭಾಷಿತ

ಜನರಿಗೆ ತಮ್ಮ ಹಕ್ಕಿನ ಹೊಣೆಗಾರಿಕೆಯ ಅರಿವು ಇಲ್ಲದೇ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು.

–ಗೋಪಾಲಕೃಷ್ಣ ಅಡಿಗ

ಜಾಗತಿಕ ಜನಸಂಖ್ಯೆ: ಸಂಪನ್ಮೂಲ ಹಂಚಿಕೆ ನ್ಯಾಯಸಮ್ಮತವಾಗಿರಲಿ

ವಿಶ್ವದ ಒಟ್ಟು ಜನಸಂಖ್ಯೆಯು 800 ಕೋಟಿಯ ಗಡಿಯನ್ನು ದಾಟಿದೆ ಎಂದು ವಿಶ್ವಸಂಸ್ಥೆಯು ಕಳೆದ ವಾರ ಘೋಷಿಸಿತು. ವಿಶ್ವದ ಜನಸಂಖ್ಯೆಯ ಬೆಳವಣಿಗೆಯ ಮೇಲೆ ಒಂದು ಕಣ್ಣು ಇರಿಸಿರುವವರಿಗೆ ಈ ಘೋಷಣೆಯು ಅಚ್ಚರಿಯನ್ನೇನೂ ಮೂಡಿಸಿಲ್ಲ. ಮಾನವ ಜನಾಂಗದ ಬೆಳವಣಿಗೆಯ ದೃಷ್ಟಿಯಿಂದ ನೋಡಿದರೆ, ಜನಸಂಖ್ಯೆ ಈ ಗಡಿಯನ್ನು ದಾಟುವುದು ಮಹತ್ವದ್ದು. ಜನಸಂಖ್ಯೆಯು ಹಿಂದಿನಿಂದಲೂ ಹೆಚ್ಚುತ್ತಲೇ ಇದೆ. ಅದು ದೊಡ್ಡ ಪ್ರಮಾಣದಲ್ಲಿ ಕಡಿಮೆ ಆದ ನಿದರ್ಶನ ಸಿಗುವುದಿಲ್ಲ. ಆದರೆ, ಈಗ ಜನಸಂಖ್ಯೆಯ ಬೆಳವಣಿಗೆಯ ವೇಗ ತಗ್ಗಿದೆ. ಜನಸಂಖ್ಯೆಯು 700 ಕೋಟಿ ಇದ್ದದ್ದು, 800 ಕೋಟಿಗೆ ತಲುಪಲು (ಅಂದರೆ, 100 ಕೋಟಿಯಷ್ಟು ಹೆಚ್ಚಾಗಲು) 11 ವರ್ಷಗಳು ಬೇಕಾದವು. ಆದರೆ, ಜನಸಂಖ್ಯೆಯು ಇನ್ನೂ 100 ಕೋಟಿ ಹೆಚ್ಚಾಗಲು 15 ವರ್ಷಗಳು ಬೇಕಾಗಬಹುದು ಎಂದು ಅಂದಾಜು ಮಾಡಲಾಗಿದೆ. ಜಾಗತಿಕ ಮಟ್ಟದಲ್ಲಿ ಈಗ ಜನಸಂಖ್ಯೆಯ ಹೆಚ್ಚಳ ಪ್ರಮಾಣವು ಶೇಕಡ 1ಕ್ಕಿಂತ ಕಡಿಮೆ ಇದೆ. ಹಿಂದಿನ ಒಂದು ದಶಕದಲ್ಲಿ ಜನಸಂಖ್ಯೆಯಲ್ಲಿ ಆಗಿರುವ ಹೆಚ್ಚಳಕ್ಕೆ ಜಾಸ್ತಿ ಕೊಡುಗೆ ಇದ್ದಿದ್ದು ಭಾರತದ್ದು. ಒಂದು ದಶಕದಲ್ಲಿ ಭಾರತದಲ್ಲಿ ಅಂದಾಜು 18 ಕೋಟಿ ಜನ ಜನಿಸಿದ್ದಾರೆ. ಒಂದು ದಶಕದಲ್ಲಿ ಜನಿಸಿದವರಲ್ಲಿ ಏಷ್ಯನ್ನರ ಸಂಖ್ಯೆ ಅಂದಾಜು 70 ಕೋಟಿ. ಭಾರತವು ಮುಂದಿನ ವರ್ಷದಲ್ಲಿ 'ವಿಶ್ವದ ಅತ್ಯಂತ ಹೆಚ್ಚಿನ ಜನಸಂಖ್ಯೆಯುಳ್ಳ ದೇಶ' ಎಂಬ ಹಣೆಪಟ್ಟಿ ಹೊತ್ತುಕೊಳ್ಳಲಿದೆ, ಚೀನಾವನ್ನು ಜನಸಂಖ್ಯೆ ವಿಚಾರದಲ್ಲಿ ಹಿಂದಿಕ್ಕಲಿದೆ. ವಿಶ್ವದ ಜನಸಂಖ್ಯೆಯು 2080ರ ಸುಮಾರಿಗೆ ಅಂದಾಜು ಒಂದು ಸಾವಿರ ಕೋಟಿಗೆ ತಲುಪಲಿದ್ದು, ಜನಸಂಖ್ಯೆಯು ಆ ಮಟ್ಟದಿಂದ ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇಲ್ಲ ಎಂದು ವಿಶ್ವಸಂಸ್ಥೆಯ ವರದಿಯು ಹೇಳಿದೆ. 2100ರವರೆಗೂ ಜನಸಂಖ್ಯೆಯು ಒಂದು ಸಾವಿರ ಕೋಟಿಯಲ್ಲಿ ಸ್ಥಿರವಾಗಿರಲಿದೆ.



ಲಭ್ಯ ಸಂಪನ್ಮೂಲಗಳನ್ನು ಯಾರೂ ಅತಿಯಾಗಿ ಬಳಕೆ ಮಾಡಿಕೊಳ್ಳದಂತೆ ಹಾಗೂ ಪೋಲು ಮಾಡದಂತೆ ನಿಗಾ ವಹಿಸಬೇಕು

ಮುಂದಿನ ದಶಕಗಳಲ್ಲಿ ಜನಸಂಖ್ಯೆ ಹೆಚ್ಚಳಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಚರ್ಚೆಗಳು, ಆದ್ಯತೆಗಳು ಆಫ್ರಿಕಾ ಖಂಡದಲ್ಲಿ ಕೇಂದ್ರೀಕೃತವಾಗಲಿವೆ. ಏಕೆಂದರೆ, ಜನಸಂಖ್ಯೆ ಹೆಚ್ಚಳವು ಆ ಭಾಗದಲ್ಲಿ ಜಾಸ್ತಿ ಇರಲಿದೆ. ಅಲ್ಲಿನ ಜನರಿಗೆ ಉತ್ತಮ ಶಿಕ್ಷಣ, ಆಹಾರ, ಶುದ್ಧ ಗಾಳಿ, ನೀರು ಮತ್ತು ಆರೋಗ್ಯಸೇವೆಗಳ ಲಭ್ಯತೆ ಇಲ್ಲದಿರುವುದು ಕಳವಳಕ್ಕೆ ಕಾರಣವಾಗಲಿದೆ. ಸಹಾರಾ ಮರುಭೂಮಿಯ ದಕ್ಷಿಣಕ್ಕೆ ಇರುವ ಹಲವು ದೇಶಗಳಲ್ಲಿ ಆಹಾರದ ಕೊರತೆ ಈಗಾಗಲೇ ಇದೆ. ಅಲ್ಲಿನ ಜನಸಂಖ್ಯೆಯು ಮುಂದಿನ ಮೂರು ದಶಕಗಳಲ್ಲಿ ಎರಡು ಪಟ್ಟು ಹೆಚ್ಚಾಗಲಿದೆ. ಆದರೆ ಅದೇ ಪ್ರಮಾಣದಲ್ಲಿ ಅಲ್ಲಿನ ಸಂಪನ್ಮೂಲಗಳಲ್ಲಿ ಹೆಚ್ಚಳ ಆಗುವುದಿಲ್ಲ. ಜನಸಂಖ್ಯೆ ಏರಿಕೆ ಕಂಡಮಾತ್ರಕ್ಕೇ ಅದು ಸಮಸ್ಯೆ ಆಗುವುದಿಲ್ಲ. ಆದರೆ ಜನಸಂಖ್ಯೆಯ ಹೆಚ್ಚಳಕ್ಕೆ ಅನುಗುಣವಾಗಿ ಸಂಪನ್ಮೂಲಗಳು ಲಭ್ಯವಾಗದಿದ್ದರೆ ಸಮಸ್ಯೆ ತಲೆದೋರುತ್ತದೆ. ಅಭಿವೃದ್ಧಿ ಹೊಂದಿರುವ ಬಹುತೇಕ ದೇಶಗಳಲ್ಲಿ ಜನಸಂಖ್ಯೆ ಕಡಿಮೆ ಆಗುತ್ತಿದೆ. ಹಲವು ದೇಶಗಳು ತಮ್ಮಲ್ಲಿನ ಜನಸಂಖ್ಯೆಯ ಹೆಚ್ಚಳಕ್ಕೆ ಪ್ರಯತ್ನ ನಡೆಸಿವೆಯಾದರೂ, ಜಗತ್ತಿನ ಸಂಪನ್ಮೂಲಗಳನ್ನು ನ್ಯಾಯಸಮ್ಮತವಾಗಿ, ಸಮಾನವಾಗಿ ಮರುಹಂಚಿಕೆ ಮಾಡುವ ವಿಚಾರದಲ್ಲಿ ಪ್ರಾಮಾಣಿಕ ಪ್ರಯತ್ನ ಎಲ್ಲಿಯೂ ನಡೆದಿಲ್ಲ. ಜಾರಿಯಲ್ಲಿರುವ ಕೆಲವು ಯೋಜನೆಗಳು ಸಮಸ್ಯೆಯನ್ನು ತೃಣಮಾತ್ರವೂ ಬಗೆಹರಿಸುವುದಿಲ್ಲ.

ಈಗ ಇರುವ 800 ಕೋಟಿ ಜನರನ್ನು ಹಾಗೂ ಮುಂದೆ ಜನಿಸಬಹುದಾದ 200 ಕೋಟಿ ಜನರನ್ನು ಸಲಹಲು ಅಗತ್ಯವಿರುವಷ್ಟು ಸಂಪನ್ಮೂಲವು ಭೂಮಿಯ ಮೇಲೆ ಇದೆ. ಆದರೆ ಆ ಸಂಪನ್ಮೂಲದ ಮರುಹಂಚಿಕೆ ಆಗಬೇಕಿದೆ. ಈಗ ಸಂಪನ್ಮೂಲಗಳನ್ನು ಕೆಲವರು ಮಾತ್ರ ಬಳಸುತ್ತಿದ್ದಾರೆ. ಇದು ಮುಂದಿನ ವರ್ಷಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಸಂಘರ್ಷಗಳಿಗೆ ಕಾರಣವಾಗಬಹುದು. ಸಮಾನ ಅಭಿವೃದ್ಧಿ ಸಾಧ್ಯವಾಗದಿದ್ದರೆ ದೇಶಗಳ ಒಳಗೂ ಅಸಮಾನ ಜನಸಂಖ್ಯಾ ಬೆಳವಣಿಗೆ ಆಗಬಹುದು. ಇದಕ್ಕೆ ಬಹುದೊಡ್ಡ ನಿದರ್ಶನ ಭಾರತದಲ್ಲಿ ಇದೆ. ಭಾರತದ ಕೆಲವು ರಾಜ್ಯಗಳಲ್ಲಿ ಮರಣ ಪ್ರಮಾಣವು ಜನನ ಪ್ರಮಾಣಕ್ಕಿಂತ ಹೆಚ್ಚಿದೆ. ಉತ್ತರ ಪ್ರದೇಶದಂತಹ ರಾಜ್ಯಗಳಲ್ಲಿ ಜನನ ಪ್ರಮಾಣವು ಮರಣ ಪ್ರಮಾಣಕ್ಕಿಂತ ಹೆಚ್ಚಿದೆ. ಅಭಿವೃದ್ಧಿಯ ಅಸ್ತ್ರದಿಂದ ಮಾತ್ರ ಜನಸಂಖ್ಯೆಯ ಹೆಚ್ಚಳವನ್ನು ನಿಯಂತ್ರಿಸಲು ಸಾಧ್ಯ. ಜನಸಂಖ್ಯೆಯ ನಿಯಂತ್ರಣಕ್ಕೆ ಚೀನಾದಲ್ಲಿ ಜಾರಿಯಲ್ಲಿದ್ದ ಕ್ರಮಗಳು ಒಳಿತಿಗಿಂತ ಹೆಚ್ಚು ಕೆಡುಕನ್ನು ಉಂಟುಮಾಡುತ್ತವೆ. ಇದೇ ವೇಳೆ, ಲಭ್ಯ ಸಂಪನ್ಮೂಲಗಳನ್ನು ಯಾರೂ ಅತಿಯಾಗಿ ಬಳಕೆ ಮಾಡಿಕೊಳ್ಳದಂತೆ ಹಾಗೂ ಸಂಪನ್ಮೂಲಗಳನ್ನು ದುರ್ಬಳಕೆ, ಪೋಲು ಮಾಡದಂತೆ ನಿಗಾ ವಹಿಸಬೇಕು.

ದಿನದ ಟ್ವೀಟ್


ಎಂದಿಗೆ ಬದಲಾಗುವುದು?



ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ? - ನಮ್ಮ ಹಳ್ಳಿಗಳು ಜಾತಿಯ ಕೊಚ್ಚೆಯಲ್ಲಿ ಬಿದ್ದು ಹೊರಳಾಡುತ್ತಿವೆ. ಯಾವ ಟೆಕ್ನಾಲಜಿ, ಸೈನ್ಸ್ ಬಂದರೂ ಮಾನವೀಯತೆ ದೊಡ್ಡದು ಅನ್ನುವ ಯೋಚನೆ ಹಬ್ಬುತ್ತಿಲ್ಲ. ಅದೇ ಹಳತಿನ ಹೆಸರಿನಲ್ಲಿರುವ ಕಂದರಗಳಲ್ಲೇ ಬಿದ್ದು ಸಾಯುತ್ತೇವೆ ಅನ್ನುವ ಮನಃಸ್ಥಿತಿ. ಇವೆಲ್ಲ ಎಂದಿಗೆ ಬದಲಾಗುತ್ತವೆ?

ವಸಂತ ಶೆಟ್ಟಿ, ಬರಹಗಾರ

ಕಿಡಿನುಡಿ



ಇಂದು ಎರಡು ಸುದ್ದಿಗಳು: ಚಾಮರಾಜನಗರ ಜಿಲ್ಲೆಯ ಹಳ್ಳಿಯಲ್ಲಿ ಪರಿಶಿಷ್ಟ ಮಹಿಳೆ ನೀರು ಕುಡಿದ ಟ್ಯಾಂಕನ್ನು ಗೋಮೂತ್ರದಿಂದ ಶುದ್ಧೀಕರಿಸಲಾಗಿದೆ. ಬಳ್ಳಾರಿಯಲ್ಲಿ ಮಂತ್ರಿ ಮಹೋದಯರಿಂದ ಪರಿಶಿಷ್ಟರ 'ನವಶಕ್ತಿ' ಸಮಾವೇಶ. ನಮ್ಮ ವ್ಯವಸ್ಥೆಯ ವಿರೋಧಾಭಾಸ. ಇನ್ನೂ ಎಷ್ಟು ಕಾಲ ಈ ಅಸ್ಪೃಶ್ಯತೆಯ ಆಚರಣೆ? ನಾಚಿಕೆಗೇಡು!

ನಾಗತಿಹಳ್ಳಿ ಚಂದ್ರಶೇಖರ, ಚಲನಚಿತ್ರ ನಿರ್ದೇಶಕ

25 ವರ್ಷಗಳ ಹಿಂದೆ

ಶುಕ್ರವಾರ, 21-11-1997

• ಡಿಎಂಕೆ ಸಚಿವರನ್ನು ಕೈಬಿಡಿ: ಪ್ರಧಾನಿಗೆ ಕಾಂಗ್ರೆಸ್ ಪತ್ರ

ನವದೆಹಲಿ, ನವೆಂಬರ್ 20– ಜೈನ್ ಆಯೋಗದ ವರದಿಯನ್ನು ಸಂಸತ್‌ನಲ್ಲಿ ಮಂಡಿಸಿದ ಹಿನ್ನೆಲೆಯಲ್ಲಿ, ಮಾಜಿ ಪ್ರಧಾನಿ ರಾಜೀವ್ ಗಾಂಧಿ ಅವರ ಹತ್ಯೆಯ ಸಂಚಿನಲ್ಲಿ ದೋಷಾರೋಪಕ್ಕೆ ಒಳಗಾಗಿರುವ ಡಿಎಂಕೆಯ ವಿರುದ್ಧ ಕ್ರಮದ ಮೊದಲ ಹೆಜ್ಜೆಯಾಗಿ ಆ ಪಕ್ಷದ ಸಚಿವರನ್ನು ತಕ್ಷಣವೇ ಕೈ ಬಿಡಬೇಕು, ಇಲ್ಲವಾದರೆ ಬೆಂಬಲ ಮುಂದುವರಿಸುವುದು ಕಷ್ಟ ಎಂದು ಪ್ರಧಾನಿಯವರಿಗೆ ಕಾಂಗ್ರೆಸ್ ಪಕ್ಷ ಇಂದು ರಾತ್ರಿ ಸ್ಪಷ್ಟಪಡಿಸಿದೆ.

ಕಾಂಗ್ರೆಸ್ ಕಾರ್ಯಕಾರಿಣಿಯು ಇಂದು ರಾತ್ರಿ ತಮಗೆ ನೀಡಿದ ಅಧಿಕಾರದ ಹಿನ್ನೆಲೆಯಲ್ಲಿ ಕೂಡಲೇ ಕಾರ್ಯೋನ್ಮುಖ-ರಾದ ಪಕ್ಷದ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಪ್ರಧಾನಿ ಗುಜ್ರಾಲ್ ಅವರಿಗೆ ಪತ್ರ ಬರೆದಿದ್ದಾರೆ. ಕಾಂಗ್ರೆಸ್ ಪಕ್ಷದ ಈ ನಿರ್ಧಾರದಿಂದಾಗಿ ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗ ಸರ್ಕಾರದ ಭವಿಷ್ಯ ಡೋಲಾಯಮಾನವಾಗಿದೆ.

• ವಿ.ಪಿ. ಸಿಂಗ್ ವಿರುದ್ಧ ಆರೋಪಕ್ಕೆ ಸರ್ಕಾರದ ತಿರಸ್ಕಾರ

ನವದೆಹಲಿ, ನವೆಂಬರ್ 20– ರಾಜೀವ್ ಗಾಂಧಿ ಅವರಿಗೆ ನೀಡಲಾಗಿದ್ದ ವಿಶೇಷ ಭದ್ರತಾ ವ್ಯವಸ್ಥೆಯನ್ನು ವಿ.ಪಿ. ಸಿಂಗ್ ಸರ್ಕಾರವು ದುರುದ್ದೇಶಪೂರಿತವಾಗಿ ಹಿಂತೆಗೆದುಕೊಂಡಿತು ಎಂಬ ಜೈನ್ ಆಯೋಗದ ತೀರ್ಮಾನದ ಬಗ್ಗೆ ಸರ್ಕಾರದ ಸಹಮತವಿಲ್ಲದ ಕಾರಣ, ಸಂಸತ್ತಿನಲ್ಲಿ ಮಂಡಿಸಲಾದ ಕ್ರಮ ಕೈಗೊಂಡ ವರದಿಯಲ್ಲಿ (ಎಟಿಆರ್) ಅದನ್ನು ತಿರಸ್ಕರಿಸಲಾಗಿದೆ.

50 ವರ್ಷಗಳ ಹಿಂದೆ

ಮಂಗಳವಾರ, 21-11-1972

• ಯಕ್ಷಗಾನ ಕಲಾವಿದ ಕುರಿಯ ವಿಠ್ಠಲಶಾಸ್ತ್ರಿ ಇನ್ನಿಲ್ಲ

ಮಂಗಳೂರು, ನವೆಂಬರ್ 20– ಮೂರು ದಶಕಗಳಿಗೂ ಹೆಚ್ಚು ಕಾಲ ಯಕ್ಷಗಾನ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ದಕ್ಷಿಣ ಕನ್ನಡದ ಹಿರಿಯ ಯಕ್ಷಗಾನ ಕಲಾವಿದ ಕುರಿಯ ವಿಠ್ಠಲಶಾಸ್ತ್ರಿ ಅವರು ನಿನ್ನೆ ರಾತ್ರಿ ವಿಟ್ಲ ಬಳಿಯ ಕುರಿಯ ಗ್ರಾಮದಲ್ಲಿನ ಸ್ವಗೃಹದಲ್ಲಿ ನಿಧನರಾದರು.

ತೆಂಕುತಿಟ್ಟು ಯಕ್ಷಗಾನ ಕಲೆಗೆ ಖ್ಯಾತನಾಮರಾಗಿದ್ದ ಶಾಸ್ತ್ರಿಗಳಿಗೆ 60 ವರ್ಷ ವಯಸ್ಸಾಗಿತ್ತು. ಅವರು ಸಾಂಪ್ರದಾಯಿಕ ಯಕ್ಷಗಾನ ಕಲೆಯಲ್ಲಿ ಯಶಸ್ವೀ ಪ್ರಯೋಗಗಳನ್ನು ಮಾಡಿ ದಕ್ಷಿಣ ಕನ್ನಡದಲ್ಲಿ ಮನೆ ಮಾತಾಗಿದ್ದರು.

ಧರ್ಮಸ್ಥಳ ಯಕ್ಷಗಾನ ಮಂಡಳಿ ಖ್ಯಾತಿಗೆ ಕಾರಣವಾಗಿದ್ದ ಶಾಸ್ತ್ರಿಗಳು ಯಾವುದೇ ಪಾತ್ರವನ್ನು ಸರಾಗವಾಗಿ ನಿರ್ವಹಿಸುತ್ತಿದ್ದರು.

• ಬೀದಿ ದೀಪ: ಸರ್ಕಾರದ ಮಧ್ಯಪ್ರವೇಶ ಬಗ್ಗೆ ಹುಬ್ಬಳ್ಳಿ ಕಾರ್ಪೊರೇಟರ್‌ಗಳ ಆಕ್ರೋಶ

ಹುಬ್ಬಳ್ಳಿ, ನವೆಂಬರ್ 20– ಇಂದು ಸಂಜೆ ಇಲ್ಲಿ ಸೇರಿದ್ದ ಹುಬ್ಬಳ್ಳಿ-ಧಾರವಾಡ ಕಾರ್ಪೊರೇಷನ್ ಸಭೆಯಲ್ಲಿ, ಕಾರ್ಪೊರೇಷನ್ನಿನ ಮಾಮೂಲು ಕಾರ್ಯನಿರ್ವಹಣೆಯಲ್ಲಿ ರಾಜ್ಯ ಸರ್ಕಾರದ ಹಸ್ತಕ್ಷೇಪವಾಗಿದೆ ಎಂಬುದರ ಬಗೆಗಿನ ಚರ್ಚೆ ಕೋಲಾಹಲಕ್ಕೆ ಕಾರಣವಾಯಿತು.

ಕಾರ್ಪೊರೇಷನ್ ಪ್ರದೇಶದಲ್ಲಿ ಬೀದಿಗಳಿಗೆ ಮರ್ಕ್ಯುರಿ ದೀಪಗಳನ್ನು ಒದಗಿಸುವ ಬಗ್ಗೆ ಸ್ಥಾಯಿ ಸಮಿತಿ ಸರ್ವಾನುಮತದಿಂದ ಅಂಗೀಕರಿಸಿದ 25 ಲಕ್ಷ ರೂಪಾಯಿ ಯೋಜನೆ ಕಾರ್ಯಗತಕ್ಕೆ ರಾಜ್ಯ ಸರ್ಕಾರ ತಡೆ ಆಜ್ಞೆ ವಿಧಿಸಿರುವ ಔಚಿತ್ಯದ ಬಗ್ಗೆ ಸುಮಾರು 60 ನಿಮಿಷಗಳ ಕಾಲ ಬಿರುಸಿನ ಚರ್ಚೆ ನಡೆಯಿತು.

ಕೌಟುಂಬಿಕ ಹಾಗೂ ಸಾಮಾಜಿಕ ರಚನೆಗಳ ಮರುಕಟ್ಟುವಿಕೆಯಿಂದ ದೌರ್ಜನ್ಯಗಳೂ ಕೊನೆಗೊಳ್ಳುತ್ತವೆ

ಪ್ರಜ್ಞಾ ಜಾಗೃತಿ ಮತ್ತು ಹೊಣೆಗಾರಿಕೆ



ವಿಶ್ಲೇಷಣೆ

ಸಬಿತಾ ಬನ್ನಾಡಿ

ಮೂವತ್ತು ವರ್ಷಗಳ ಹಿಂದಿನ ಒಂದು ನೆನಪು: ಟಿ.ವಿ.ಯಲ್ಲಿ ಪ್ರಸಾರವಾಗುತ್ತಿದ್ದ ಸಿನಿಮಾವೊಂದರಲ್ಲಿ ಒಬ್ಬಾತ ಹೆಂಗಸೊಬ್ಬಳನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ. ಆಕೆಯ ಮುಖ ಭಯಭೀತವಾಗಿತ್ತು. ಅವನ ಮುಖ ಕ್ರೂರವಾಗಿತ್ತು. ಇದನ್ನು ನೋಡುತ್ತಿದ್ದಂತೆ ಪಕ್ಕದ ಮನೆಯ ಒಂದನೇ ತರಗತಿ ಓದುತ್ತಿದ್ದ ಗಂಡು ಮಗುವು 'ಗಂಡ, ಗಂಡ' ಅಂತ ಕಿರುಚಿಕೊಂಡಿತು. ನಾನು ಶಾಕ್‌ನಿಂದ ಮೂಕವಾಗಿ ಆ ಮಗುವನ್ನೇ ನೋಡಿದೆ. ಇದು ಪ್ರಬಲ ಜಾತಿಯ, ಎಂಜಿನಿಯರ್ ಅಪ್ಪ, ಪದವಿ ಓದಿ ಗೃಹಿಣಿಯಾಗಿರುವ ಅಮ್ಮ ಇರುವ ಆ ಮಗುವಿನ ವೈಯಕ್ತಿಕ ಅನುಭವವೇ? ಆತನ ಅಪ್ಪನ ವ್ಯಕ್ತಿತ್ವದ ಕೊರತೆಯೇ? ಅಮ್ಮನಿಗೆ ಒದಗಿದ ದುರದೃಷ್ಟ ಮಾತ್ರವೇ?

ದಿನ ದಿನದ ಮಾತೇ ಆಗಿರುವ ದೌರ್ಜನ್ಯಗಳಿಗೆ ನಾನಾ ರೀತಿಯ ಪ್ರತಿಕ್ರಿಯೆಗಳು ಬರುತ್ತವೆ. ಇವುಗಳಲ್ಲಿ ಶೇ 99ರಷ್ಟು ಪ್ರತಿಕ್ರಿಯೆಗಳು ಅಪರಾಧಿಯನ್ನು ಶಿಕ್ಷಿಸುವ ಮಾತಾಡುತ್ತವೆ. ಅವರ ಕಾಳಜಿಯ ಬಗೆಗೆ ಯಾವ ಸಂಶಯವೂ ಇಲ್ಲ. ಆದರೆ ಈ ಅಪರಾಧಗಳು ಯಾಕೆ ಮರುಕಳಿಸುತ್ತಿವೆ ಎಂಬ ಬಗ್ಗೆ ನಾವೆಲ್ಲರೂ ಜೊತೆಯಾಗಿ ಗಂಭೀರವಾಗಿ ಯೋಚನೆ ಮಾಡುತ್ತಿದ್ದೇವೆಯೇ? ನಮ್ಮದೊಂದು ಹೇಳಿಕೆ ದಾಖಲಿಸಿ 'ಏನೋ ನನ್ನಿಂದಾದದ್ದು ಮಾಡಿದೆ' ಎಂದು ನಿರಾಳವಾಗುತ್ತಿದ್ದೇವೆಯೇ? 'ನಾವು ಮಾಡಿದ ಕೆಲಸ ಬೇರೆಯವರು ಮಾಡುತ್ತಿಲ್ಲ' ಎಂದು ಆಕ್ರೋಶಕ್ಕೆ ಒಳಗಾಗುತ್ತಾ ಹೊಣೆಗಾರಿಕೆಯನ್ನು ಅನ್ಯರ ಮೇಲೆ ಹೇರುತ್ತಿದ್ದೇವೆಯೇ? ಎಲ್ಲಕ್ಕಿಂತ ಹೆಚ್ಚಾಗಿ ನಮಗೆ ಸಮಸ್ಯೆಯನ್ನು ನಿವಾರಿಸುವುದರ ಬಗೆಗೆ ನಂಬಿಕೆ, ಆಸಕ್ತಿ ಇದೆಯೇ? ಹಾಗಿದ್ದರೆ ಸಮಸ್ಯೆಯ ಮೂಲ ಹುಡುಕಬೇಕು ಅಲ್ಲವೇ?

ಒಬ್ಬ ಮಠಾಧಿಪತಿ ಸಮಾಜದಲ್ಲಿ ತನ್ನದೊಂದು ಬಿಂಬವನ್ನು ಬಲಿಷ್ಠವಾಗಿ ಕಟ್ಟಿಕೊಂಡು ಮಠದೊಳಗೆ ಊಹಾತೀತವಾಗಿ ಎಳೆಯ ಬಾಲೆಯರ ಮೇಲೆ ದೌರ್ಜನ್ಯ ಎಸಗುವುದಕ್ಕೂ, ಧಾರ್ಮಿಕತೆಯನ್ನು ಅಧಿಕಾರ ಕೇಂದ್ರವಾಗಿಸಿ, ಎಲ್ಲ ಭೋಗಗಳಿಗೆ ಅನುವು ಮಾಡಿಕೊಟ್ಟು, ಸರ್ಕಾರಿ ಶಾಲೆಗಳನ್ನು ಬಡವಾಗಿಸಿ, ಮಠಗಳಿಗೆ ಕೋಟಿ ಕೋಟಿ ಹಣ 'ಕೊಟ್ಟು' ಕೊಬ್ಬಿಸಿ, ಅದರ ಮೂಲಕ ಅವರು ಆಳುವ ವರ್ಗದ ಅಂಗಸಂಸ್ಥೆಗಳೆಲ್ಲದರ ಮೇಲೂ ಹಿಡಿತವುಳ್ಳವರು ಎಂಬ ಭಯವು ತನ್ನಿಂದ ತಾನೇ ಪಸರಿಸಿ ಪರ್ಯಾಯ ಸರ್ಕಾರಗಳೇ ಆಗಿ ಪ್ರಶ್ನಾತೀತರಾಗುವುದಕ್ಕೂ ಸಂಬಂಧ ಇದೆ ಎಂಬುದು ನಮಗೇಕೆ ಕಾಣಿಸುತ್ತಿಲ್ಲ? ಪ್ರೀತಿಸಿ ಮದುವೆಯಾದವ ಹೆಂಡತಿಯನ್ನು ಕೊಂದು ಕತ್ತರಿಸಿ ಎಸೆಯುವ ರಕ್ಕಸತನ ತೋರುವುದಕ್ಕೆ ಸಾಧ್ಯವಾಗುವುದು ಹೇಗೆ? ಅವನನ್ನು ಮದುವೆಯಾದದ್ದಕ್ಕೆ ತಕ್ಕ ಶಾಸ್ತಿಯಾಯಿತು ಎನ್ನುವುದರ ಮೂಲಕ ಆ ಹುಡುಗಿಯನ್ನು ಮತ್ತೊಮ್ಮೆ ಕತ್ತರಿಸಿ ಎಸೆಯುವವರ ಮನಃಸ್ಥಿತಿ ಯಾವ ರೀತಿಯದು? ಅದು ತಮ್ಮ ಮನದೊಳಗಣ ಬಯಕೆಗೆ ಒದಗಿದ ಸಾಕ್ಷಿಯಂತೆ ಸಂಭ್ರಮಿಸುವಾಗ, ಅದು ಅಂತಹ ಕೃತ್ಯಗಳಿಗೆ ತಾವು ಒದಗಿಸುತ್ತಿರುವ ಸಮ್ಮತಿ ಎಂಬುದು ಅವರಿಗೆ ಅರ್ಥವಾಗುತ್ತಿಲ್ಲವೇ? ಇವೆಲ್ಲದರ ಹಿಂದೆ ಈ 'ಗಂಡಸು' ಎಂಬುದೂ ಒಂದು ಸಂಸ್ಥೆಯಾಗಿರುವುದನ್ನು ನಾವೀಗ ಒಡೆದು ಕಾಣಬೇಕಾಗಿದೆ.

ಯಾವುದೇ ಒಂದು ಸತ್ತೆಯು ಇತರರ ಮೇಲೆ ಅಧಿಕಾರ ಸ್ಥಾಪಿಸಲು ಆರ್ಥಿಕತೆಗಳ ಮೇಲೆ ಹಿಡಿತ ಸಾಧಿಸುವಂತೆಯೇ, ಸಾಮಾಜೀಕರಣ, ಸಾಂಸ್ಕೃತೀಕರಣಗಳನ್ನೂ ಅದರ ಜೊತೆಗೆ ತಳುಕು ಹಾಕುತ್ತಾ ಇತರರು ಅದನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ. ಇದೆಲ್ಲದರ ಜೊತೆಗೆ ಜನರನ್ನು ಮಾನಸಿಕ ದಾಸ್ಯಕ್ಕೆ ಒಳಪಡಿಸಲು 'ಅಮಲ'ನ್ನು ಉದ್ದೀಪಿಸುತ್ತದೆ. ಇದಕ್ಕವರು ಯಾವ ಸುಂದರ ಹೆಸರನ್ನಾದರೂ ಕೊಡಬಹುದು. ಉದಾಹರಣೆಗೆ, ಅದನ್ನವರು ಸಂಸ್ಕೃತಿ ಎಂದು ಬೇಕಾದರೂ ಕರೆಯಬಹುದು. ಮೇಲೆ ಉಲ್ಲೇಖಿಸಿದ ಎರಡು ಪ್ರಸಂಗಗಳ ಮಿತಿಯಲ್ಲಿಯೇ ಇದನ್ನು ಅರಿತುಕೊಳ್ಳಬಹುದು. ಒಮ್ಮೆ ಮದುವೆಯಾಯಿತು ಎಂದಾದ ಮೇಲೆ ಹೆಂಡತಿಯು ಗಂಡನ ಅಂಕೆಗೆ ಒಳಪಡುವುದು 'ನಮ್ಮ ಸಂಸ್ಕೃತಿ' ಎಂದು ತುಂಬಿಸಿರುವ ಪಾಠಕ್ಕೂ ಆ ಹುಡುಗಿಯು ಕೊಲೆಯಾಗುವುದಕ್ಕೂ ನೇರ ಸಂಬಂಧ ಇದೆ. ವರದಿಗಳ ಪ್ರಕಾರ, ತನ್ನ ಜೀವಕ್ಕೆ ಅಪಾಯ ಇದೆ ಎಂದು ಆಕೆ ಗೆಳೆಯರಿಗೆ ಮೆಸೇಜ್ ಮಾಡಿದ್ದಾಳೆ. ಹಾಗಿದ್ದರೆ ಆಕೆ ಯಾಕೆ ಅದರಿಂದ ಹೊರಬರಲಿಲ್ಲ? ಆಕೆ ಬುದ್ಧಿವಂತೆ, ಪ್ರತಿಭಾವಂತೆ, ದುಡಿಯುವವಳು, ಮಹಾನಗರದಲ್ಲಿ ವಾಸಿಸುವವಳು, ಆಧುನಿಕಳು ಎಲ್ಲವೂ ಆಗಿದ್ದು ಅವಳನ್ನು ತಡೆದದ್ದು ಯಾವುದು?

ಮದುವೆಯನ್ನು ನಾವು ನಿರ್ವಚಿಸಿಕೊಂಡಿರುವುದರ ಸಮಸ್ಯೆ ಇಲ್ಲಿದೆ. ಬಾಲ್ಯದಿಂದಲೇ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಿಕ್ಕಿರುವ ತರಬೇತಿಯು ಗಂಡನನ್ನು ಸಹಿಸಿಕೊಳ್ಳುವ, ತಿದ್ದುವ, ನಂಬುವ ಮತ್ತು ಒಪ್ಪುವ ಸ್ಥಿತಿಗೆ ಹೆಣ್ಣನ್ನು ತಳ್ಳಿರುತ್ತದೆ. ಮದುವೆಯ ಮೂಲಕ ಹೆಣ್ಣನ್ನು ಗಂಡಿನ ಸ್ವಾಧೀನಕ್ಕೆ ಒಪ್ಪಿಸಲಾಗಿದೆ ಎಂಬ ರೀತಿಯಲ್ಲಿಯೇ ನಮ್ಮೆಲ್ಲಾ ಆಚರಣೆಗಳೂ ನಂಬಿಕೆಗಳೂ ಇದ್ದು ಅವನು ಅವಳೂ ನಂಬಿ ಅಸಹಾಯಕತೆ ಅನುಭವಿಸುತ್ತಾಳೆ. ಗಂಡು ಕೂಡಾ ಹೀಗೆ ಭಾವಿಸುವುದರಿಂದಲೇ ಮದುವೆಯ ನಂತರದ ಬದುಕಿನ ಸುಮಧುರ ಅನುಭವವನ್ನು ಕಳೆದುಕೊಳ್ಳುತ್ತಾನೆ. ಹೆಣ್ಣಿನ ಅಸಮ್ಮತಿ, ಪ್ರತಿಭಟನೆಗಳನ್ನು ತನ್ನ ಪ್ರತಿಷ್ಠೆಗೆ ಉಂಟಾದ ಧಕ್ಕೆ ಎಂದು ಭಾವಿಸುವಂತೆ ಒಟ್ಟು ಕೌಟುಂಬಿಕ ರಚನೆಯು ರೂಪುಗೊಂಡಿದೆ. ಮಹಿಳೆಯರು ಅಲ್ಪ ಸಂಖ್ಯಾತರಲ್ಲ. ಆದರೆ ಅವರೊಳಗಡೆಯೇ ವಿಭಜನೆಯನ್ನು ಸೃಷ್ಟಿಸಿ ಈ ರಚನೆಯನ್ನು ಕಾಪಿಡಲಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಪ್ರೀತಿ ಎಂದರೇನು ಎಂಬ ಬಗೆಗೆ ಇಂದಿಗೂ ಹರೆಯದ ಮಕ್ಕಳಿಗೆ ವೈಜ್ಞಾನಿಕವಾದ ತಿಳಿವಳಿಕೆಯನ್ನು ಕೊಡುವ ಆಸಕ್ತಿ, ನಂಬಿಕೆಗಳೇ ನಮ್ಮ ವ್ಯವಸ್ಥೆಯಲ್ಲಿ ಇಲ್ಲ. ಹಿರೀಕರಿಗೂ ಇದು ಗೊತ್ತಿಲ್ಲ. ಮದುವೆ ಮಾಡಿಕೊಳ್ಳುವುದು ಮತ್ತು ಅದನ್ನು ಉಳಿಸಿಕೊಳ್ಳುವುದು ತಮಗಾಗಿಯೋ ಲೋಕಕ್ಕಾಗಿಯೋ ಎಂಬ ಬಗೆಗೆ ಹಿರಿಯರಿಗೂ ಖಚಿತತೆ ಇಲ್ಲ.




ಕುಟುಂಬವನ್ನು ಹೀಗೆ ತಾರತಮ್ಯ, ದೌರ್ಜನ್ಯ, ಅಟ್ಟಹಾಸದ ಕೇಂದ್ರವಾಗಿ ರೂಪಿಸಿರುವುದು ಒಟ್ಟು ಸಮಾಜದ ಆಳ್ವಿಕೆಯ ಸ್ವರೂಪದ ಮಿನಿಯೇಚರ್‌ನಂತೆ ಇದೆ. ಈಗ ಬದಲಾಗಬೇಕಿರುವುದು ಈ ಸ್ವರೂಪ. ಹೆಣ್ಣೊಬ್ಬಳನ್ನು ಗುರುತಿಸಬೇಕಾಗಿರುವುದು, ಗೌರವಿಸಬೇಕಾಗಿರುವುದು ಅವಳು ಮದುವೆಯಾದವಳೋ ಅಲ್ಲವೋ ವಿಚ್ಛೇದನ ಪಡೆದವಳೋ ವಿಧವೆಯೋ ಮಕ್ಕಳು ಇರುವವಳೋ ಅಲ್ಲವೋ ಲಿವ್ ಇನ್‌ನಲ್ಲಿ ಇದ್ದಾಳಾ ಯಾವುದರಿಂದಲೂ ಅಲ್ಲ. ವ್ಯಕ್ತಿತ್ವ, ಕೆಲಸ, ಕೊಡುಗೆಗಳಷ್ಟೇ ಅವಳ ಗುರುತುಗಳು. ಪರಾವಲಂಬಿತನವನ್ನೇ ಮೌಲ್ಯವಾಗಿಸಿ ಹೆಣ್ಣನ್ನು ದುರ್ಬಲಗೊಳಿಸುವುದಕ್ಕೂ ಅತ್ಯಾಚಾರಗಳಾಗುವುದಕ್ಕೂ ನೇರ ಸಂಬಂಧವಿದೆ.

ಮಠದೊಳಗಿನ ಮಕ್ಕಳು ತಮ್ಮ ಮೇಲಿನ ದೌರ್ಜನ್ಯಗಳನ್ನು ಸಹಿಸಿಕೊಳ್ಳುವುದರ ಹಿಂದೆಯೂ ಇಂತಹ ಪರಾವಲಂಬಿತನಗಳು ಇವೆ. ಒಂದೆಡೆ, ಹೆಣ್ಣೆಂಬುದೇ ಸಹಿಸುವಿಕೆಗೆ ಕಾರಣವಾದರೆ, ಇನ್ನೊಂದೆಡೆ, ಬಡತನವೂ ಸಹಿಸುವಿಕೆಗೆ ಕಾರಣವಾಗಿರುತ್ತದೆ. ಆಳುವ ಶಕ್ತಿಗಳು ಹೀಗೆ ತಮ್ಮ ಕೆಲಸ ಸಾಧಿಸಿಕೊಳ್ಳುತ್ತವೆ ಎಂಬುದನ್ನು ಅರಿಯುವ ಕಣ್ಣುಗಳಾಗಿಸಿಕೊಳ್ಳಬೇಕಿದೆ. ವರದಿಯೊಂದರ ಪ್ರಕಾರ, ಆ ಮಕ್ಕಳನ್ನು ಅಮಲಿನ ದಾಸರನ್ನಾಗಿಸಿ ಆಕ್ರಮಣ ಮಾಡಲಾಗಿದೆ. ಸಾಮಾಜೀಕರಣದಲ್ಲೂ ಕಣ್ಣಿಗೆ ಕಾಣದ ಇಂತಹ ಹಲವು ಅಮಲುಗಳನ್ನು ನೀಡಿ ನಿಯಂತ್ರಿಸಲಾಗುತ್ತದೆ. ಇದು ಗೋಚರಿಸಬೇಕೆಂದರೆ ಇಂತಹ ರಚನೆಗಳ ತಳಪಾಯವೇ ತಾರತಮ್ಯದಿಂದ ಕೂಡಿದೆ ಎಂಬುದು ತಿಳಿಯಬೇಕು. ಅದು ಮೊದಲುಗೊಳ್ಳುವುದೇ ಕುಟುಂಬದೊಳಗೆ ಹೆಣ್ಣನ್ನು ನಿಯಂತ್ರಿಸುವುದರ ಮೂಲಕ. ಸಮಾಜದ ಇನ್ನಿತರ ಎಲ್ಲ ತರತಮಗಳ ಮೂಲ ಇಲ್ಲೇ ಇದೆ. ಇಲ್ಲಿಂದ ಆಗುವ ಬದಲಾವಣೆಯು ಸಮುದಾಯ, ಸರ್ಕಾರಗಳು ನಾಯಕತ್ವವನ್ನು ವಿವರಿಸಿಕೊಳ್ಳುವ ಕ್ರಮವನ್ನೇ ಬದಲಾಯಿಸಬಲ್ಲುದು. ಯಾಕೆಂದರೆ ಇವ್ಯಾವುವೂ ಪ್ರತ್ಯೇಕ ಘಟಕಗಳಲ್ಲ.

ಹೆಣ್ಣು ಯಾರ ಸೊತ್ತೂ ಅಲ್ಲ ಎಂಬುದನ್ನು ಮೊದಲು ಸ್ಥಾಪಿಸಬೇಕು. ಅದರಂತೆ ಗಂಡು ಹೆಣ್ಣುಗಳು ನಡೆದುಕೊಳ್ಳುವುದನ್ನು ಜಾರಿಗೊಳಿಸಬೇಕು. ಇದಕ್ಕಾಗಿ ನಮ್ಮ ಒತ್ತಾಯ ಮುನ್ನೆಲೆಗೆ ಬರಬೇಕು. ಈ ಪ್ರಜ್ಞಾ ಜಾಗೃತಿಯೆಡೆಗೆ ಚಲಿಸದೆ ದೌರ್ಜನ್ಯವನ್ನೇ ಅಸ್ತ್ರವಾಗಿಸಿಕೊಂಡಿರುವ ಅಧಿಕಾರ ರಾಜಕಾರಣ, ಸೆಲೆಕ್ಟಿವ್ ಆಗಿ ವಾದ ಪ್ರತಿವಾದ ಮಂಡಿಸುತ್ತಾ ದೌರ್ಜನ್ಯದ ಮೂಲ ಬೇರುಗಳೆಡೆಗೆ ತಿರುಗಿಯೂ ನೋಡದಿರುವ ಸಮೂಹಗಳ ಭೋಳೇತನ, ಆಚರಣೆಗೆ ಇಳಿಸದೆ ಮಾತಿನಲ್ಲಿ ದೌರ್ಜನ್ಯಗಳನ್ನು ವಿರೋಧಿಸುವವರ ಟೊಳ್ಳುತನ- ಇವುಗಳಿಗೂ ಆ ಪುಟ್ಟ ಬಾಲಕನಿಗೆ ಕಂಡ 'ಗಂಡ'ನಿಗೂ ಯಾವ ವ್ಯತ್ಯಾಸವೂ ಇಲ್ಲ.

ಚುರುಮುರಿ



ಬೆಕ್ಕಣ್ಣನ ಟೆಕ್ ಸಮ್ಮಿಟ್

• ಸುಮಂಗಲಾ

ಬೆಕ್ಕಣ್ಣ 'ನಾ ಟೆಕ್ ಸಮ್ಮಿಟ್‌ಗೆ ಹೋಗತೀನಿ. ಅಶ್ವಥಂಕಲ್ಲಿನ ಹಂಗೆ ನಾನೂ ಸೂಟು, ಬೂಟು, ಕೋಟು ಹಾಕ್ಕಂಡು ಹೋಗತೀನಿ, ನನಗೂ ಕೊಡಿಸು' ಎಂದು ವಾರದಿಂದ ವರಾತ ಹಚ್ಚಿತ್ತು.

'ನೋಡಾಕೆ ಹೋಗವ್ರೆಲ್ಲ ಸೂಟು ಬೂಟು ಕೋಟು ಹಾಕ್ಕಂಡು ಹೋಗತಾರೇನು' ಎಂದು ಬೈದೆ.

'ನೋಡಾಕಲ್ಲ, ನಾನೇ ಕಂಡುಹಿಡಿದ ನಾಕಾರು ತಂತ್ರಜ್ಞಾನ ಪ್ರದರ್ಶನ ಮಾಡಾಕೆ ಹೊಂಟೀನಿ. ಇದು ನೋಡು... ಹೆಗ್ಗಣ ಹಿಡಿಯಾಕೆ ರೊಬಾಟ್. ನನ್ನ ಹಂಗೇ ಮ್ಯಾಂವ್ ಅಂತದ. ಹೆಗ್ಗಣ ಹಿಡಿದು ನಿಮ್ಮ ಕೈಯಾಗೆ ತಂದು ಇಡತೈತಿ. ಇದು ಇನ್‌ಸ್ಟಂಟ್ ರಸ್ತೆಗುಂಡಿ ಮುಚ್ಚೂ ಯಂತ್ರ. ಗುಂಡಿ ಎಲ್ಲಿ ಬಿದ್ದೈತಿ, ಆಳ ಎಷ್ಟೈತಿ ಅಂತ ಯಂತ್ರಕ್ಕೆ ಮಾಹಿತಿ ಫೀಡ್ ಮಾಡಿದರೆ, ಇದೇ ಹೋಗಿ ಐದೇ ನಿಮಿಷದಾಗೆ ಗುಂಡಿ ಮುಚ್ಚತೈತಿ. ಮತ್ತ ಇದೊಂದು ಭಾರೀ ಸ್ಪೆಶಲ್ ಯಂತ್ರ. ಮೋದಿ ಮಾಮ ಇಲ್ಲೀವರೆಗೆ ಯಾವ್ಯಾವ ಥರದ ರುಮಾಲು ಕಟ್ಯಾನ, ಟೋಪಿ ಹಾಕ್ಯಾನ ಅನ್ನೂದೆಲ್ಲ ಇದ್ರಾಗೆ ಫೀಡ್ ಆಗೈತಿ. ಇನ್ನು ಮುಂದೆ ಯಾವ ಕಾರ್ಯಕ್ರಮಕ್ಕೆ ಯಾವ ಥರದ ರುಮಾಲು ಕಟ್ಟಬೇಕು ಅಥವಾ ಟೋಪಿ ಹಾಕಬೇಕು ಅಂತ ಇದು ತೋರಿಸಿ, 3ಡಿ ಟೆಕ್ನಾಲಜಿವಳಗ ಅದನ್ನು ತಯಾರು ಮಾಡಿಕೊಡತೈತಿ'.

ಬೆಕ್ಕಣ್ಣ ಅಂತೂ ಬಾಡಿಗೆಗೆ ಸೂಟು, ಬೂಟು, ಕೋಟು ತೆಗೆದುಕೊಂಡು, ಲ್ಯಾಪ್‌ಟಾಪ್ ಚೀಲ ಬೆನ್ನಿಗೇರಿಸಿಕೊಂಡು, ಬೈಕ್ ಏರಿ ಹೊರಟೇಬಿಟ್ಟಿತು. ಅರ್ಧಗಂಟೆಯಲ್ಲೇ ಹ್ಯಾಪು ಮೋರೆ ಹಾಕಿಕೊಂಡು ವಾಪಸು ಬಂದಿತು.

'ಏನಲೇ... ಸೂಟು, ಬೂಟು, ಕೋಟು ಮಣ್ಣಾಗೈತಿ, ಎಲ್ಲಾರ ರಸ್ತೆಗುಂಡಿಗೆ ಬಿದ್ದೇನು?' ಗಾಬರಿಯಿಂದ ಕೇಳಿದೆ.

'ಬೆಂಗಳೂರು ಮಹಾಲಕ್ಷ್ಮಿ ನಗರಿಯಾಗಲೀ ಟೆಕ್ ನಗರಿಯಾಗಲೀ ಏನೇ ಆಗಲಿ, ಗುಂಡಿಗಳು ಶಾಶ್ವತ. ಗುಂಡಿ ಮುಚ್ಚೂ ಯಂತ್ರ ಕಂಡ್ ಹಿಡಿಲಾಕೆ ನೀ ಯಾಂವನಲೇ ಅಂತ ಬಿಬಿಎಂಪಿ ಮಂದಿ, ಗುತ್ತಿಗೇದಾರ್ರು ಎಲ್ಲ ಸೇರಿ ನನ್ನ ಗುಂಡಿಗೆ ದಬ್ಬಿದ್ರು' ಎಂದು ಅಳುಮುಖ ಮಾಡಿತು!

ಸಂಗತ

ಬಾರಿಸಲಿದೆ 'ವಾಟರ್ ಬೆಲ್'

ಶಾಲೆಗಳಲ್ಲಿ ನೀರಿನ ಬೆಲ್ ಬಾರಿಸಿ ನೀರು ಕುಡಿಯಲು ಮಕ್ಕಳಿಗೆ ಅನುವು ಮಾಡಿಕೊಡುವ ಪ್ರಯತ್ನವು ಅವರ ಆರೋಗ್ಯಕರ ಜೀವನಶೈಲಿಗೆ ಪೂರಕವಾಗಿದೆ

• ಸದಾಶಿವ್ ಸೊರಟೂರು

ಶಾಲೆಯಲ್ಲಿ ದಿನಕ್ಕೆ ಮೂರು ಬಾರಿ ಗಂಟೆ ಬಾರಿಸಿ ಮಕ್ಕಳಿಗೆ ನೀರು ಕುಡಿಯಲು ಅನುವು ಮಾಡಿಕೊಡಬೇಕು ಎಂದು ಶಿಕ್ಷಣ ಇಲಾಖೆ ಆದೇಶಿಸಿದಾಗ ಬಹುತೇಕರು ನಕ್ಕರು, ಕುಹಕವಾಡಿದರು. ನೀರು ಕುಡಿಯಲು ಕೂಡ ಒಂದು ಗಂಟೆ ಬಾರಿಸಬೇಕಾ ಎಂಬುದು ಅವರ ಪ್ರಶ್ನೆ. ಈ 'ವಾಟರ್ ಬೆಲ್' ಎಷ್ಟೊಂದು ಪರಿಣಾಮಕಾರಿಯಾದದ್ದು ಹಾಗೂ ಅವಶ್ಯವಾದದ್ದು ಎಂಬುದರ ಅರಿವು ಪೋಷಕರು ಮತ್ತು ಶಿಕ್ಷಕರಿಗೆ ಈಗ ಆಗಿದೆ. 2019ರಲ್ಲಿ ಈ ನಿಯಮ ಜಾರಿಯಾದಾಗ ಸಿಕ್ಕಿದ ಅದ್ಭುತ ಫಲಿತಾಂಶವು ಈಗ ಅದನ್ನು ಮರುಜಾರಿಗೊಳಿಸುವಂತೆ ಮಾಡಿದೆ.

ಮಕ್ಕಳಿಗೆ ಕುಡಿಯಲು ಇಟ್ಟ ನೀರು ಸ್ವಲ್ಪವೂ ಖರ್ಚಾಗದೆ ಉಳಿದಾಗ, ಸಂಜೆ ಮನೆಗೆ ಹೊರಟಾಗ ಅವರ ಬ್ಯಾಗಿನಲ್ಲಿ ಬೆಳಿಗ್ಗೆ ಮನೆಯಿಂದ ತಂದಿದ್ದ ಕುಡಿಯುವ ನೀರು ಬಾಟಲಿಗಳಲ್ಲಿ ಹಾಗೆಯೇ ಉಳಿದಾಗ ಮಗುವಿನ ಆರೋಗ್ಯದ ಬಗ್ಗೆ ಗಾಬರಿಯಾಗುವುದು ಸಹಜ. 'ನೀವು ನೀರು ಕುಡಿಯಬೇಕು' ಎಂದು ಎಷ್ಟೋ ಬಾರಿ ತಿಳಿ ಹೇಳಿದರೂ ಮಕ್ಕಳು ಅದನ್ನು ಪಾಲಿಸುತ್ತಿರಲಿಲ್ಲ. ಈಗ ನಿಶ್ಚಿತ ಸಮಯ ನೀಡಿರುವುದರಿಂದ ಶಿಕ್ಷಕರ ಎದುರಲ್ಲೇ ಅವರು ನೀರು ಕುಡಿಯಬೇಕಾಗುತ್ತದೆ. ಶಿಕ್ಷಕರು ಪ್ರತೀ ಮಗುವನ್ನೂ ಅವಲೋಕಿಸುತ್ತಾರೆ. ಎಲ್ಲ ಬಾರಿಯೂ ಶಿಕ್ಷಕರೇ ಮುಂದೆ ನಿಂತು ನೀರು ಕುಡಿಸಲು ಆಗುವುದೇ ಎಂಬ ಪ್ರಶ್ನೆ ಮೂಡಬಹುದು. ಇದು ಮಗುವಿಗೆ ಮಾಡಿಸುತ್ತಿರುವ ರೂಢಿ, ಆರೋಗ್ಯಕರ ಅಭ್ಯಾಸ. ಶಾಲೆ ಇರುವುದೇ ಆರೋಗ್ಯಕರ ಅಭ್ಯಾಸಗಳನ್ನು ರೂಢಿಸಲು ಅಲ್ಲವೇ?

ನೀರು ಕುಡಿಯದೇ ಇರುವುದರಿಂದ ಮಗು ಎದುರಿಸುವ ಆರೋಗ್ಯದ ಸಮಸ್ಯೆಗಳ ಅರಿವು ಶಿಕ್ಷಕರಿಗೆ ಆಗಿದೆ. ಸದಾ ತಲೆನೋವು ಮತ್ತು ಹೊಟ್ಟೆನೋವಿನಿಂದ ಬಳಲುತ್ತಿದ್ದ ಆರನೇ ತರಗತಿಯ ಬಾಲಕಿಯೊಬ್ಬಳನ್ನು ವೈದ್ಯರ ಬಳಿ ತೋರಿಸಿದಾಗ, ಅವರು ಮಗುವಿನ ದೇಹ ನೀರಿನ ಅಭಾವದಿಂದ ಬಳಲಿದೆ ಎಂದಿದ್ದರು. ಮಗುವಿನ ಬ್ಯಾಗಿನಲ್ಲಿ ನೀರು ಇರುತ್ತದೆ, ಶಾಲೆಯಲ್ಲೂ ಕುಡಿಯಲು ನೀರು ಇರುತ್ತದೆ. ಆದರೆ ಮಗು ಕುಡಿಯುವುದಿಲ್ಲ. ಓದಿನ ಕಡೆ, ಆಟದ ಕಡೆ, ಸ್ನೇಹಿತರ ಜೊತೆಗಿನ ಹರಟೆಯ ಕಡೆ ಗಮನಕೊಟ್ಟು ನೀರು ಕುಡಿಯುವುದನ್ನು ಅದು ಮರೆಯುತ್ತದೆ.

ನಿರ್ಜಲೀಕರಣವು ತಲೆನೋವು, ತಲೆತಿರುಗುವಿಕೆ, ಬಾಯಿ ದುರ್ವಾಸನೆ, ಮೆದುಳಿನಲ್ಲಿ ಅರಿವಿನ ಸಮಸ್ಯೆ, ಸ್ನಾಯು ಸೆಳೆತ, ದಣಿವು, ಗೊಂದಲ ಮತ್ತು ದುರ್ಬಲ ಮೂತ್ರಪಿಂಡದ ಕಾರ್ಯನಿರ್ವಹಣೆಗೆ ಕಾರಣವಾಗುತ್ತದೆ ಮತ್ತು ಕೆಲವು ವಿಪರೀತ ಸಂದರ್ಭಗಳಲ್ಲಿ ಇದು ಸಾವಿಗೂ ಕಾರಣವಾಗಬಹುದು ಎಂದು ವೈದ್ಯರು ಅಭಿಪ್ರಾಯಪಡುತ್ತಾರೆ. ಹೀಗಾಗಿ ಮಗು ಸರಿಯಾಗಿ ನೀರು ಕುಡಿಯದೇ ಇರುವುದು ಎಷ್ಟೊಂದು ಗಂಭೀರವಾದ ಸಮಸ್ಯೆ ಎಂಬುದು ನಮಗೆ ಅರ್ಥವಾಗಬೇಕು.

ಯುರೋಪಿಯನ್ ಫುಡ್ ಸೇಫ್ಟಿ ಅಥಾರಿಟಿಯು (ಇಎಫ್‌ಎಸ್‌ಎ) 4ರಿಂದ 13 ವರ್ಷ ವಯಸ್ಸಿನ ಮಕ್ಕಳು ದಿನಕ್ಕೆ ಸರಿಸುಮಾರು 6-8 ಗ್ಲಾಸ್ ನೀರನ್ನು ಕುಡಿಯುವುದು ತೀರಾ ಅಗತ್ಯ ಎಂದು ಹೇಳುತ್ತದೆ. ವಿಶ್ವಸಂಸ್ಥೆಯ ಮಾರ್ಗಸೂಚಿಯು ಪ್ರತೀ ಮಗುವಿಗೆ ಸುರಕ್ಷಿತ ಕುಡಿಯುವ ನೀರಿನ ಹಕ್ಕಿದೆ ಮತ್ತು ಶಾಲೆಗಳಲ್ಲಿ ಅದಕ್ಕೆ ಅವಕಾಶ ಇರಬೇಕು ಎನ್ನುತ್ತದೆ. ಭಾರತದಲ್ಲಿ ಪ್ರತೀ ಮಗುವೂ ಅಗತ್ಯವಿರುವಷ್ಟು ನೀರು ಕುಡಿಯುವುದನ್ನು ಖಾತರಿಪಡಿಸುವ ಯಾವುದೇ ಕಾರ್ಯವಿಧಾನವಿಲ್ಲ. ನೀರಿನ ಗಂಟೆಯ ಪ್ರವೃತ್ತಿಯು ಈ ದಿಕ್ಕಿನಲ್ಲಿ ಸಹಾಯ ಮಾಡುತ್ತದೆ ಎನ್ನಬಹುದು.

ಶಾಲೆಯಲ್ಲಿ ಇನ್ನು ಮುಂದೆ ದಿನಕ್ಕೆ ಮೂರು ಬಾರಿ 'ವಾಟರ್ ಬೆಲ್' ಬಾರಿಸುತ್ತದೆ. ಬೆಳಿಗ್ಗೆ 10.35ಕ್ಕೆ, ಮಧ್ಯಾಹ್ನ 12 ಮತ್ತು 2 ಗಂಟೆಗೆ ಈ ಬೆಲ್ ಬಾರಿಸುವಂತೆ ವೇಳಾಪಟ್ಟಿ ನಿಗದಿಪಡಿಸಲಾಗಿದೆ.



ಉತ್ತಮ ಪ್ರಯತ್ನದಂತೆ ತೋರುವ ಈ 'ವಾಟರ್ ಬೆಲ್' ಮೂಲತಃ ಕೇರಳದ್ದು. ಕೇರಳದ ಇರಿಂಜಾಲಕ್ಕುಡದಲ್ಲಿರುವ ಸಂತ ಜೋಸೆಫ್ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕ ಜೆನಿಲ್ ಜಾನ್ ಅವರು ಈ ಯೋಜನೆಯ ರೂವಾರಿ. ಬಾಯಾರಿಕೆ ಅನುಭವಿಸಿದರೂ ನೀರು ಕುಡಿಯದೆ ಮೂರ್ಛೆ ಹೋದ ಶಾಲೆಯ ಮಗುವೊಂದರ ಪ್ರಕರಣದಿಂದ ಅವರು ಕಳವಳಗೊಂಡು ಇಂತಹದ್ದೊಂದು ಹೊಸ ಕಲ್ಪನೆಯನ್ನು ಹುಟ್ಟುಹಾಕಿದರು. ಅದು ಯಶಸ್ಸು ಕಂಡಿತು. ನಂತರ ಇಡೀ ಕೇರಳ ಅದನ್ನು ಅನುಷ್ಠಾನಗೊಳಿಸಿತು. ಈಗ ಕರ್ನಾಟಕ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ಮತ್ತು ಒಡಿಶಾ ರಾಜ್ಯಗಳೂ ಅದನ್ನು ಅನುಷ್ಠಾನಗೊಳಿಸಿವೆ.

ಶಾಲೆ ಈಗ ಓದು- ಬರಹವನ್ನಷ್ಟೇ ಹೇಳಿಕೊಡದೆ ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಿದೆ. ಮಧ್ಯಾಹ್ನದ ಪೌಷ್ಟಿಕ ಆಹಾರ, ನಿಯಮಿತವಾಗಿ ವೈದ್ಯರಿಂದ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸೆ, ವಿಟಮಿನ್ ಮಾತ್ರೆಗಳ ವಿತರಣೆ, ಚಟುವಟಿಕೆಯಿಂದ ಇರುವಂತೆ ಮಾಡಲು ಆಟೋಟ, ಸ್ವಚ್ಛತೆ ಮತ್ತು ಆರೋಗ್ಯ ಜಾಗೃತಿ ಕಾರ್ಯಕ್ರಮಗಳು ಮಕ್ಕಳನ್ನು ಆರೋಗ್ಯವಾಗಿ ಇಡಲು ಸಹಕಾರಿಯಾಗಿವೆ. ಈಗ 'ವಾಟರ್ ಬೆಲ್' ಅದಕ್ಕೊಂದು ಹೊಸ ಸೇರ್ಪಡೆ. ನಾವು ನಾಳೆಗಳ ಬಗ್ಗೆ ಯೋಚಿಸುವುದೆಂದರೆ ಅದು ಮಕ್ಕಳ ಬಗ್ಗೆ ಯೋಚಿಸುವುದೇ ಆಗಿದೆ. ನಮ್ಮ ಮಕ್ಕಳ ನಾಳಿನ ದಿನಗಳ ಸ್ವಾಸ್ಥ್ಯವು ನಾವು ಇಂದು ಕಲಿಸುವ ಆರೋಗ್ಯಕರ ಅಭ್ಯಾಸಗಳಲ್ಲಿದೆ.

ವಾಚಕರ ವಾಣಿ

ಮನುಕುಲದ ಮೃಗಗಳ ನಿಯಂತ್ರಣ ಹೇಗೆ?

ಮನುಕುಲದಲ್ಲಿ ಮೃಗಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದು ನಿವೃತ್ತ ಸೇನಾಧಿಕಾರಿಯೊಬ್ಬರು ಕಳವಳ ವ್ಯಕ್ತಪಡಿಸಿದ್ದಾರೆ (ಪ್ರ.ವಾ., ಕಿಡಿನುಡಿ, ನ. 20). ಅದೇ ದಿನ ಕಾಸರಗೋಡಿನ ಮಂಜೇಶ್ವರದಲ್ಲಿ ರಸ್ತೆಯಲ್ಲಿ ನಿಂತಿದ್ದ ಬಾಲಕಿಯನ್ನು ದುರುಳನೊಬ್ಬ ನಿಷ್ಕರುಣವಾಗಿ ಹೊಡೆದು ರಸ್ತೆಗೆ ಬಿಸಾಡಿದ್ದು (ಪ್ರ.ವಾ., ನ. 18) ಸೇನಾಧಿಕಾರಿಯ ಆತಂಕಕ್ಕೆ ಪುಷ್ಟಿ ನೀಡುವಂತಿದೆ. ಹೌದು, ಇತ್ತೀಚಿನ ದಿನಗಳಲ್ಲಿ ಸೌಮ್ಯ ಮುಖವಾಡದ, ಕರಾಳ ಆಂತರ್ಯ ಹೊಂದಿರುವವರ ಸಂಖ್ಯೆ ಹೆಚ್ಚುತ್ತಿದೆ. ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ.

ಬಹಳಷ್ಟು ಸಂದರ್ಭಗಳಲ್ಲಿ ಹಿಂಸೆಗೆ ಒಳಗಾದ ಮಕ್ಕಳ ಬಗೆಗೆ ಕಾಳಜಿ ವ್ಯಕ್ತವಾಗುವ ಬದಲು, ಮೃಗೀಯ ವರ್ತನೆ ತೋರಿದವರ ಪರವಾಗಿಯೇ ರಾಜಕೀಯ ಹಾಗೂ ಜಾತಿ ಆಧಾರದ ಮೇಲೆ ಕಾಳಜಿ ವ್ಯಕ್ತವಾಗುತ್ತಿರುವುದು ಘೋರ ಅಪರಾಧವೇ ಸರಿ. ಸಮಾಜದಲ್ಲಿ ನೈತಿಕತೆಯ ಮಟ್ಟ ಅಧಃಪತನಕ್ಕೆ ಇಳಿಯದಂತೆ ನೋಡಿಕೊಳ್ಳಲು ನಾಗರಿಕ ಸಮಾಜ ಜಾಗೃತಗೊಳ್ಳಬೇಕಾದ ಅಗತ್ಯವಿದೆ.

ನಾರಾಯಣರಾವ ಕುಲಕರ್ಣಿ, ಹಿರೇಅರಳಿಹಳ್ಳಿ, ಯಲಬುರ್ಗಾ

ಒತ್ತಡ ತರುವ ತಂತ್ರ...

ಕಾಂಗ್ರೆಸ್ ಪಕ್ಷವನ್ನು ಹೀನಾಯ ಸ್ಥಿತಿಯಿಂದ ಹೊರತಂದು ಬಲಪಡಿಸುವುದಕ್ಕೆ ಪೂರಕವಾಗಿ ಉನ್ನತ ಮಟ್ಟದ ಸಭೆ ಕರೆಯುವಂತೆ ಅಧ್ಯಕ್ಷೆಯಾಗಿದ್ದ ಸೋನಿಯಾ ಗಾಂಧಿ ಅವರಿಗೆ ಪಕ್ಷದ ಕೆಲವು ಹಿರಿಯರು ಈ ಹಿಂದೆ ಪತ್ರ ಬರೆದು ಒತ್ತಾಯಿಸಿದಾಗ, ಈ ನಾಯಕರಲ್ಲಿದ್ದ ತಳಮಳವನ್ನು ಅರಿಯದೆ ಅವರನ್ನು ಮೂಲೆಗುಂಪು ಮಾಡಲಾಯಿತು. ಅಲ್ಲದೆ ಅವರನ್ನೇ 'ಪಕ್ಷದ ವಿರೋಧಿಗಳು' ಎಂಬಂತೆ ನಡೆಸಿಕೊಳ್ಳಲಾಯಿತು. ಈಗ ಅಜಯ್ ಮಾಕನ್ ಅವರು ರಾಜಸ್ಥಾನದ ಉಸ್ತುವಾರಿಯಾಗಿ ಮುಂದುವರಿಯುವುದಕ್ಕೆ ನಿರಾಕರಿಸಿ, ತಮ್ಮ ಸ್ಥಾನಕ್ಕೆ ಬೇರೊಬ್ಬರನ್ನು ನೇಮಿಸುವಂತೆ ಹೊಸ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿದ್ದಾರೆ. ಮತ್ತೊಂದು ಕಡೆ, ರಾಜಸ್ಥಾನದಲ್ಲಿ ಪಕ್ಷವು ಕರೆದಿದ್ದ ವಿಧಾನಸಭಾ ಸದಸ್ಯರ ಸಭೆಗೆ ಬಹಿಷ್ಕಾರ ಹಾಕಿದವರ ಮೇಲೆ ಕ್ರಮ ಕೈಗೊಳ್ಳುವಂತೆ ಸಚಿನ್ ಪೈಲಟ್ ಅವರು ಪಕ್ಷದ ಅಧ್ಯಕ್ಷರನ್ನು ಕೋರಿದ್ದಾರೆ.

ಸೋನಿಯಾ ಗಾಂಧಿ ಅವರು ಪಕ್ಷದ ಅಧ್ಯಕ್ಷರಾಗಿದ್ದಾಗ ಪಕ್ಷದ ನಿಷ್ಠಾವಂತರೆಂದು ಗುರುತಿಸಿಕೊಂಡಿದ್ದ ಈ ನಾಯಕರು ಈಗ ಅಧ್ಯಕ್ಷರಿಗೇ ಪತ್ರ ಬರೆದು ಹೀಗೆ ಆಗ್ರಹಿಸುವ ಧೈರ್ಯ ಪಡೆದಿದ್ದಾದರೂ ಹೇಗೆ? ಈ ಎರಡನೇ ವರ್ಗದ ನಾಯಕರ 'ಒತ್ತಡ ತರುವ' ತಂತ್ರವನ್ನು ಖರ್ಗೆ ಹೇಗೆ ಸ್ವೀಕರಿಸುವರು? ಹಿಂದೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರು ಕಪಿಲ್ ಸಿಬಲ್ ಮೊದಲಾದವರನ್ನು ನೇಪಥ್ಯಕ್ಕೆ ಸರಿಸಿದಂತೆ, ಇವರ ಮೇಲೆ ಕ್ರಮ ತೆಗೆದುಕೊಳ್ಳುವ ಧೈರ್ಯವನ್ನು ಪ್ರದರ್ಶಿಸುವರೇ?

ಪಿ.ಸಿ.ಕೇಶವ, ಬೆಂಗಳೂರು

ಕಲಾವಿದನ ಆಘಾತಕಾರಿ ಹೇಳಿಕೆ

ಕರ್ನಾಟಕ ಮಾಧ್ಯಮ ಅಕಾಡೆಮಿ ಆಯೋಜಿಸಿದ್ದ ವಿಚಾರ ಸಂಕಿರಣದಲ್ಲಿ ನಟ ಅನಂತನಾಗ್ 'ನಾನು ಪಕ್ಕಾ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಭಕ್ತ' ಎಂದು ಕರೆದುಕೊಂಡಿರುವುದು ವರದಿಯಾಗಿದೆ. ಈ ಮೊದಲು ಕೂಡ 80ರ ದಶಕದ ರಾಮಕೃಷ್ಣ ಹೆಗಡೆ ಅವರ ಆಡಳಿತದ ದಿನಗಳಲ್ಲಿ ಇವರು, ಹೆಗಡೆಯವರು ಹೇಳಿದರೆ ತಾವು ಹಾಳು ಬಾವಿಗೆ ಬೇಕಾದರೂ ಬೀಳಲು ಸಿದ್ಧ ಎಂದಿದ್ದರು.

ಒಬ್ಬ ಕಲಾವಿದನಾಗಿಯೂ ಸಜ್ಜನ ವ್ಯಕ್ತಿಯಾಗಿಯೂ ಅನಂತನಾಗ್ ಅವರನ್ನು ಗೌರವಿಸುವ ನನ್ನಂತಹವರಿಗೆ ಅವರ ಇಂತಹ ಹೇಳಿಕೆಗಳು ಆಘಾತ ಉಂಟುಮಾಡುತ್ತವೆ.

ಸೋಮು ಎಸ್. ಘಟ್ಟ, ಬೆಂಗಳೂರು

ಸಾಕ್ಷರತೆಗಾಗಿ ಹಂಬಲ ಸ್ತುತ್ಯರ್ಹ

ಅಫಜಲಪುರ ತಾಲ್ಲೂಕಿನ ಘತ್ತರಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕಟ್ಟಡಕ್ಕೆ ಭೂಮಿ ಖರೀದಿಸಲು ಸೊನ್ನ ವಿರಕ್ತ ಮಠದ ಡಾ. ಶಿವಾನಂದ ಸ್ವಾಮೀಜಿ ಅವರು ಸಾರ್ವಜನಿಕರಿಂದ ₹ 61 ಲಕ್ಷ ಸಂಗ್ರಹಿಸುವ ಮೂಲಕ ಸಾಕ್ಷರತೆಗಾಗಿ ಹಂಬಲಿಸಿರುವುದು ಸ್ತುತ್ಯರ್ಹ. ಶಾಲೆಯನ್ನು ಬೇರೆಡೆಗೆ ಸ್ಥಳಾಂತರಿಸಿ ಹೊಸ ಕಟ್ಟಡ ನಿರ್ಮಿಸಲು ಹಲವು ಬಾರಿ ಕೇಳಿಕೊಂಡಾಗಲೂ ಸರ್ಕಾರವಾಗಲೀ ಜಿಲ್ಲಾಡಳಿತವಾಗಲೀ ಕ್ಯಾರೇ ಎನ್ನದಿರುವುದು ಅಕ್ಷರದ ಬಗ್ಗೆ ಅವುಗಳಿಗಿರುವ ಅನಾದರವನ್ನು ತೋರಿಸುತ್ತದೆ. ಈಗಿರುವ ಶಾಲೆಯನ್ನು ಎತ್ತಂಗಡಿ ಮಾಡಲು ಮುಜರಾಯಿ ಇಲಾಖೆ ಹೇಳಿರುವುದು ಕೂಡ ವಿಪರ್ಯಾಸ.

ತಂಬ್ರಹಳ್ಳಿ ರಾಮನಮಲಿ, ಹರಪನಹಳ್ಳಿ

ಪುತ್ಥಳಿಗಳ ಬಗ್ಗೆ ಅನಾದರವೇಕೆ?

'ಬೆಂಗಳೂರನ್ನು ಸುಂದರವಾಗಿಸಲು ಬೇಕಾದದ್ದು ದೊಡ್ಡ ಬಜೆಟ್‌ನಲ್ಲಿ ನಿರ್ಮಿಸುವ ಭಾರಿ ಪ್ರತಿಮೆಗಳಲ್ಲ, ನಮ್ಮ ಸಾಹಿತ್ಯ, ಸಂಸ್ಕೃತಿಯನ್ನು ಸಂಭ್ರಮಿಸುವ, ಗೌರವಿಸುವ ಪ್ರತೀಕಗಳು. ಅವು ನಮ್ಮ ಕೈವಶ ಆಗಬಹುದೇ' ಎಂಬುದು ಎಂ.ಎಸ್.ಶ್ರೀರಾಮ್ ಅವರ ಪ್ರಶ್ನೆ (ಪ್ರ.ವಾ., ನ. 19). ಆದರೆ ನಮ್ಮಲ್ಲಿನ ಸಮಸ್ಯೆ ಏನೆಂದರೆ, ಇಂತಹ ಪ್ರಶ್ನೆಗಳನ್ನು ಕೇಳಿಸಿಕೊಳ್ಳುವ ಕಿವಿಗಳು ಇವೆಯೇ ಎನ್ನುವುದು. ಆ ಹೊತ್ತಿನ ಯಾರದೋ ಒತ್ತಡಕ್ಕೆ ಎಂಥದ್ದೋ ಒಂದನ್ನು ಮಾಡಿ-ಬಿಟ್ಟರಾಯಿತು. ಆಮೇಲೆ ಅದನ್ನು ಮರೆತುಬಿಟ್ಟರಾಯಿತು. ಬೆಂಗಳೂರಿನಲ್ಲಿ ನಿರ್ಮಿಸಿರುವ ದ.ರಾ.ಬೇಂದ್ರೆ ಮತ್ತು ತೀನಂಶ್ರೀ ಅವರ ಪುತ್ಥಳಿಗಳಿಗೆ ಒದಗಿರುವ ಅನಾಥಸ್ಥಿತಿಯನ್ನು ಲೇಖಕರು ನಿರ್ದಿಷ್ಟವಾಗಿಯೇ ಬೊಟ್ಟುಮಾಡಿ ತೋರಿಸಿದ್ದಾರೆ. ಇದನ್ನು ನೋಡಿದಾಗ, ಕನ್ನಡದ ಕವಿ ಕಲಾವಿದರಂತಹ ಮಹನೀಯರು, ಕಲೆ-ಸೌಂದರ್ಯದ ನಯನಾಜೂಕುಗಳನ್ನು ಅರಿಯದವರ ಕೈವಶವಾಗದೆ ಅಜ್ಞಾತವಾಗಿ ಉಳಿಯುವುದೇ ಕ್ಷೇಮ ಎನಿಸುತ್ತದೆ.

ರಾಜಧಾನಿಯಲ್ಲಿ ಕನ್ನಡಪರ ಸಂಘಟನೆಗಳಿವೆ, ಜನಪ್ರತಿನಿಧಿಗಳಿದ್ದಾರೆ, ಮಿಗಿಲಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೆ, ಕನ್ನಡ ಸಾಹಿತ್ಯ ಪರಿಷತ್ತೇ ಇದೆ. ಏನಿದ್ದರೇನು? ಗತಿಸಿದ ಈ ಮಹನೀಯರ ಪುತ್ಥಳಿಗಳು ಅನಾದರಕ್ಕೆ ಒಳಗಾಗಿರುವುದು ಇವರ್‍ಯಾರ ಗಮನಕ್ಕೂ ಬಂದಿಲ್ಲದಿರುವುದೇ ಸೋಜಿಗ! ಕನ್ನಡಿಗರು ನಿರಭಿಮಾನಿಗಳೆಂದು ಬಹು ಹಿಂದೆ ನೊಂದು ನುಡಿದರು ಹಿರಿಯರು. ಆ ಮಾತನ್ನು ಇಂದಿಗೂ ಸಾರ್ಥಕಗೊಳಿಸುತ್ತಿದ್ದೇವೆ.

ಸಾಮಗ ದತ್ತಾತ್ರಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ಕುರಿತ 'ಎಮಿಷನ್ ಗ್ಯಾಪ್ ರಿಪೋರ್ಟ್' ಉಲ್ಲೇಖ

ಮಾಲಿನ್ಯಕ್ಕೆ ಅಂಕುಶ ದೇಶಗಳಿಗೆ ಅಪಥ್ಯ



ಪ್ರಜಾವಾಣಿ ವಾರ್ತೆ

ಇತ್ತೀಚಿನ ವರ್ಷಗಳಲ್ಲಿ ಎಲ್ಲಿ ನೋಡಿದರೂ ಪ್ರವಾಹ, ಅತಿ ಬಿಸಿಲು, ವಿಪರೀತ ಚಳಿ ಹಾಗೂ ಮಳೆಯ ವಿನ್ಯಾಸದಲ್ಲಿ ಅಗಾಧ ಏರುಪೇರು ಕಂಡುಬರುತ್ತಿದೆ. ಇದು ಜಾಗತಿಕ ವಿದ್ಯಮಾನವಾಗಿದ್ದು, ಭಾರತದಲ್ಲೂ ಜನರು ಇಂತಹ ಘಟನೆಗಳಿಗೆ ನಿತ್ಯವೂ ಮುಖಾಮುಖಿಯಾಗುತ್ತಿದ್ದಾರೆ. ಇದಕ್ಕೆಲ್ಲ ಕಾರಣ, ಹವಾಮಾನ ಬದಲಾವಣೆ ಎಂಬ ರಕ್ಕಸ ಸಮಸ್ಯೆ.

ಈ ಜಾಗತಿಕ ಹವಾಮಾನ ಬದಲಾವಣೆಗೆ ಕಾರಣವಾಗಿರುವುದು ಹಸಿರುಮನೆ ಅನಿಲಗಳು (ಗ್ರೀನ್‌ಹೌಸ್ ಗ್ಯಾಸ್). ಈ ಅನಿಲಗಳ ಹೊರಸೂಸುವಿಕೆಯ ಬಹುಪಾಲು ವಿಶ್ವದ ಶ್ರೀಮಂತ ದೇಶಗಳ ಕೊಡುಗೆ. ಆದರೆ, ಮಾಲಿನ್ಯ ಕಡಿಮೆ ಮಾಡುತ್ತೇವೆ ಎಂದು ತಾವೇ ಹೇಳಿದ್ದ ಮಾತುಗಳಿಂದ ಈ ದೇಶಗಳು ಬಹು ದೂರ ಉಳಿದಿವೆ ಎಂದು ವಿಶ್ವಸಂಸ್ಥೆ ಹೇಳಿದೆ. ಇಂಗಾಲ ಸೇರಿದಂತೆ ಹಸಿರುಮನೆ ಅನಿಲಗಳ ಹೊರಸೂಸುವಿಕೆಯನ್ನು ತಡೆಯುವ ವಿಚಾರದಲ್ಲಿ ಭಾರಿ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ ಎಂಬುದನ್ನು ವಿಶ್ವಸಂಸ್ಥೆಯ ಪರಿಸರ ಕಾರ್ಯಕ್ರಮ ಕುರಿತ 'ಎಮಿಷನ್ ಗ್ಯಾಪ್ ರಿಪೋರ್ಟ್'ನಲ್ಲಿ ಉಲ್ಲೇಖಿಸಲಾಗಿದೆ.


ಕೈಗಾರಿಕಾ ಕ್ರಾಂತಿಗಿಂತ ಮೊದಲು ಇದ್ದ ಇಂಗಾಲ ಹೊರಸೂಸುವಿಕೆ ಮಟ್ಟವನ್ನು ಕಾಯ್ದುಕೊಳ್ಳುವುದಾಗಿ 2015ರಲ್ಲಿ ಆಗಿದ್ದ ಪ್ಯಾರಿಸ್ ಒಪ್ಪಂದದಲ್ಲಿ ಬಹುತೇಕ ದೇಶಗಳು ಒಮ್ಮತಕ್ಕೆ ಬಂದಿದ್ದವು. ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಕಟ್ಟಿಹಾಕುವುದು ಒಪ್ಪಂದದ ಬಹುಮುಖ್ಯ ಭಾಗವಾಗಿತ್ತು. ಆದರೆ ಅಂದು ಬದ್ಧತೆ ಪ್ರದರ್ಶಿಸಿದ್ದ ಯಾವ ದೇಶವೂ ಅಗತ್ಯ ಕ್ರಮ ತೆಗೆದುಕೊಳ್ಳುತ್ತಿಲ್ಲ. ಇದೇ ಧೋರಣೆ ಮುಂದುವರಿದಲ್ಲಿ 2100ರ ಹೊತ್ತಿಗೆ ಜಾಗತಿಕ ತಾಪಮಾನವು 2.8 ಡಿಗ್ರಿ ಸೆಲ್ಸಿಯಸ್‌ನಷ್ಟು ಏರಿಕೆ ಆಗಲಿದೆ ಎಂದು ವರದಿ ಗಂಭೀರ ಎಚ್ಚರಿಕೆ ನೀಡಿದೆ.

ಮಾಲಿನ್ಯ ನಿಯಂತ್ರಣಕ್ಕೆ ಈಗ ತೆಗೆದುಕೊಂಡಿರುವ ಪರಿಣಾಮಕಾರಿಯಲ್ಲದ ಕ್ರಮಗಳನ್ನೇ ಮುಂದುವರಿಸಿಕೊಂಡು ಹೋದಲ್ಲಿ, 2030ರಲ್ಲಿ ವಾತಾವರಣಕ್ಕೆ ಬಿಡುಗಡೆಯಾಗುವ ಇಂಗಾಲ ಹಾಗೂ ಇತರೆ ಅನಿಲಗಳ ಪ್ರಮಾಣ 5,800 ಕೋಟಿ ಟನ್‌ಗೆ ಏರಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.

ಹಿಂದಿನ ವರ್ಷ ಗ್ಲಾಸ್ಗೋದಲ್ಲಿ ನಡೆದಿದ್ದ 26ನೇ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮಾವೇಶದಲ್ಲಿ (ಸಿಒಪಿ–ಕಾನ್ಫರೆನ್ಸ್ ಆಫ್ ಪಾರ್ಟೀಸ್) ತಾಪಮಾನ ಏರಿಕೆಯನ್ನು ತಗ್ಗಿಸುವ ಬಗ್ಗೆ ಸಮಾಲೋಚನೆ ನಡೆದಿತ್ತು. ಸಾಕಷ್ಟು ಮಾತುಕತೆಯ ಬಳಿಕ, 2030ರ ವೇಳೆಗೆ ವಾತಾವರಣಕ್ಕೆ ಬಿಡುಗಡೆಯಾಗುವ ಇಂಗಾಲ ಹಾಗೂ ಇತರೆ ಅನಿಲಗಳ ಪ್ರಮಾಣವನ್ನು 50 ಕೋಟಿ ಟನ್‌ನಷ್ಟು ಕಡಿತ ಮಾಡಲಾಗುವುದು ಎಂದು ಈ ದೇಶಗಳು ಭರವಸೆ ನೀಡಿದ್ದವು. ಆದರೆ ಈ ಗುರಿ ತಲುಪಲು 8 ವರ್ಷಗಳಷ್ಟೇ ಬಾಕಿಯಿದ್ದು, ಗುರಿಯನ್ನು ಈ ಅವಧಿಯಲ್ಲಿ ಮುಟ್ಟುವುದು ತೀರಾ ಕಷ್ಟ ಎಂದು ವರದಿ ಅಭಿಪ್ರಾಯಪಟ್ಟಿದೆ. ಈಗ ವಾತಾವರಣಕ್ಕೆ ಬಿಡುಗಡೆ ಮಾಡುತ್ತಿರುವ ಹಸಿರುಮನೆ ಅನಿಲಗಳ ಪ್ರಮಾಣವನ್ನು ಶೇ 45ರಷ್ಟು ತಗ್ಗಿಸಿದರೆ ಮಾತ್ರ, ಅಂದುಕೊಂಡ ಗುರಿಯನ್ನು ತಲುಪಲು ಸಾಧ್ಯವಿದೆ ಎಂದು ವರದಿ ತಿಳಿಸಿದೆ.

ಈ ವರದಿ ಬಿಡುಗಡೆಯಾಗಿ ಎರಡು ವಾರ ಕಳೆಯುವಷ್ಟರಲ್ಲಿ ಮತ್ತೊಂದು ಸಮಾವೇಶ ನಡೆದಿದೆ. ಈಜಿಪ್ಟ್‌ನಲ್ಲಿ ನಡೆದ 27ನೇ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮಾವೇಶದಲ್ಲಿ, ಅಗತ್ಯ ಕ್ರಮಗಳನ್ನು ತುರ್ತಾಗಿ ತೆಗೆದುಕೊಳ್ಳಬೇಕು, ಬದ್ಧತೆಯನ್ನು ಮುಂದುವರಿಸಬೇಕು ಎಂದು ಶ್ರೀಮಂತ ರಾಷ್ಟ್ರಗಳಿಗೆ ಮತ್ತೊಮ್ಮೆ ತಾಕೀತು ಮಾಡಲಾಗಿದೆ. ಜಾಗತಿಕ ಬದ್ಧತೆಯ ಕೊರತೆಯಿಂದ ನಾವು ಜಾಗತಿಕ ದುರಂತದತ್ತ ಸಾಗುತ್ತಿದ್ದೇವೆ ಎಂದು ವಿಶ್ವಸಂಸ್ಥೆಯ ಮಹಾಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ವ್ಯಕ್ತಪಡಿಸಿರುವ ಬೇಸರಕ್ಕೆ ಅರ್ಥವಿದೆ.

ಕ್ಷೇತ್ರವಾರು ಮಾಲಿನ್ಯ (2020)




- 1990ರಿಂದ ಅತಿಹೆಚ್ಚು ಮಾಲಿನ್ಯ ಉಂಟು ಮಾಡುವ ಕ್ಷೇತ್ರಗಳಲ್ಲಿ ಇಂಧನ ಪೂರೈಕೆ, ಕೈಗಾರಿಕೆ ಹಾಗೂ ಸಾರಿಗೆ ಮುಂಚೂಣಿಯಲ್ಲಿವೆ
- 2020ರಲ್ಲಿ ಇಂಧನ ಪೂರೈಕೆ ಕ್ಷೇತ್ರದ ಮಾಲಿನ್ಯವೇ ಅತ್ಯಧಿಕ; ನಂತರದಲ್ಲಿ ಕೈಗಾರಿಕಾ ಕ್ಷೇತ್ರವಿದೆ
- ಇಂಧನ ಪೂರೈಕೆ ಹಾಗೂ ಕೈಗಾರಿಕೆಗಳು ಮಾಲಿನ್ಯಕ್ಕೆ ತಲಾ ಶೇ 25ಕ್ಕಿಂತಲೂ ಹೆಚ್ಚು ಕೊಡುಗೆ ನೀಡುತ್ತಿವೆ
- ಇಂಧನ ಪೂರೈಕೆಯಿಂದ 2,000 ಕೋಟಿ ಟನ್, ಕೈಗಾರಿಕೆಯಿಂದ 1,400 ಕೋಟಿ ಟನ್ ಇಂಗಾಲ ಬಿಡುಗಡೆಯಾಗುತ್ತಿದೆ

ಮತ್ತೆ ಏರಿಕೆಯತ್ತ ಇಂಗಾಲದ ಮಟ್ಟ

ಕೋವಿಡ್ ಆವರಿಸಿದ್ದ 2020ರ ಅವಧಿಯಲ್ಲಿ ಜಾಗತಿಕವಾಗಿ ಆರ್ಥಿಕ ಚಟುವಟಿಕೆಗಳಿಗೆ ಹಿನ್ನಡೆಯಾಗಿತ್ತು. ಕೈಗಾರಿಕೆಗಳು ಮತ್ತು ಸಾರಿಗೆ ಕ್ಷೇತ್ರದಲ್ಲಿ ಪಳೆಯುಳಿಕೆ ಇಂಧನಗಳ ಬಳಕೆ ಅಷ್ಟಾಗಿ ಇರಲಿಲ್ಲ. ವಾತಾವರಣಕ್ಕೆ ಬಿಡುಗಡೆಯಾಗುವ ಹಸಿರುಮನೆ ಅನಿಲಗಳ ಬಿಡುಗಡೆ ಪ್ರಮಾಣ ಶೇ 4.7ರಷ್ಟು ಕುಸಿದಿತ್ತು. ಇದೇ ಅವಧಿಯಲ್ಲಿ ಕೈಗಾರಿಕಾ ಚಟುವಟಿಕೆಗಳು ಕಡಿಮೆ ಇದ್ದುದರಿಂದ, ಇಂಗಾಲ (ಸಿಒ2) ಹೊರಸೂಸುವಿಕೆ ಪ್ರಮಾಣವೂ ಶೇ 5.7ರಷ್ಟು ಕಡಿಮೆಯಾಗಿತ್ತು. ಆದರೆ ಮೀಥೇನ್ ಮತ್ತು ನೈಟ್ರಸ್ ಆಕ್ಸೈಡ್ ಹೊರಸೂಸುವಿಕೆಯು 2019ರ ಮಟ್ಟದಲ್ಲೇ ಮುಂದುವರಿದಿದೆ.

ಆಧಾರ: ವಿಶ್ವಸಂಸ್ಥೆಯ 'ಎಮಿಷನ್ ಗ್ಯಾಪ್ ರಿಪೋರ್ಟ್', ಕ್ಲೈಮೆಟ್ ಟ್ರೇಡ್, ಪಿಟಿಐ, ರಾಯಿಟರ್ಸ್


ಹಸಿರುಮನೆ ಅನಿಲಗಳ ಹೊರಸೂಸುವಿಕೆ ಪ್ರಮಾಣ



ಜಿ–20 ದೇಶಗಳ ಪಾಲೇ ಅಧಿಕ

ಅತಿಹೆಚ್ಚು ಇಂಗಾಲ ಹೊರಸೂಸುವಿಕೆಯಲ್ಲಿ ವಿಶ್ವದ ಜಿ–20 ದೇಶಗಳ ಪಾಲೇ ಶೇ 75ರಷ್ಟಿದೆ. ಚೀನಾ, ಅಮೆರಿಕ, 27 ದೇಶಗಳ ಐರೋಪ್ಯ ಒಕ್ಕೂಟ, ಭಾರತ, ಇಂಡೊನೇಷ್ಯಾ, ಬ್ರೆಜಿಲ್, ರಷ್ಯಾ ಮೊದಲಾದ ದೇಶಗಳು ಈ ಪಟ್ಟಿಯಲ್ಲಿ ಅಧಿಕ ಪಾಲು ಹೊಂದಿವೆ. ಪಟ್ಟಿಯಲ್ಲಿ ಅಗ್ರ ಸ್ಥಾನದಲ್ಲಿರುವ ಎಂಟು ದೇಶಗಳ ಒಟ್ಟಾರೆ ಹೊರಸೂಸುವಿಕೆ ಮಟ್ಟವು 2019ರಲ್ಲಿ 3,280 ಕೋಟಿ ಟನ್ ಇತ್ತು. ಕೋವಿಡ್ ಪರಿಣಾಮವಾಗಿ ಈ ಮಟ್ಟವು 2020ರಲ್ಲಿ 3,150 ಕೋಟಿ ಟನ್‌ಗೆ ಇಳಿಕೆಯಾಗಿತ್ತು. 2021ರಲ್ಲಿ ಆರ್ಥಿಕ ಚಟುವಟಿಕೆಗಳು ಗರಿಗೆದರಿದ್ದು, 2019ರ ಮಟ್ಟಕ್ಕೆ ಮಾಲಿನ್ಯ ಪ್ರಮಾಣ ಏರಿಕೆಯಾಗುವ ಪ್ರವೃತ್ತಿ ಕಂಡುಬರುತ್ತಿದೆ ಎಂದು ವರದಿ ಹೇಳಿದೆ.

ಮಾಲಿನ್ಯ: ಚೀನಾ ಮುಂದು



- ಇಂಗಾಲ ಸೇರಿದಂತೆ ಹಸಿರುಮನೆ ಅನಿಲಗಳನ್ನು ಹೊರಸೂಸುವ ವಿಚಾರದಲ್ಲಿ ಚೀನಾ ಅಗ್ರ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿ ಭಾರತವಿದೆ
- ಪಟ್ಟಿಯಲ್ಲಿ ಅಗ್ರ ಸ್ಥಾನ ಪಡೆದಿರುವ ಐದು ದೇಶಗಳು ಸೇರಿ ಸುಮಾರು 2 ಸಾವಿರ ಟನ್ ಹಸಿರುಮನೆ ಅನಿಲಗಳ ಬಿಡುಗಡೆಗೆ ಕಾರಣವಾಗಿವೆ
- ಜರ್ಮನಿ, ಇರಾನ್, ಇಂಡೊನೇಷ್ಯಾ, ದಕ್ಷಿಣ ಕೊರಿಯಾ, ಸೌದಿ ಅರೇಬಿಯಾ, ಐರೋಪ್ಯ ಒಕ್ಕೂಟದ 27 ದೇಶಗಳು, ಅಂತರರಾಷ್ಟ್ರೀಯ ಸಾರಿಗೆ ಸಹ ಇಂಗಾಲ ಹೊರಸೂಸುವಿಕೆಗೆ ಪ್ರಮುಖ ಕಾರಣ ಆಗಿವೆ



ಭಾರತ: ಜಾಗತಿಕ ಸರಾಸರಿಗಿಂತ ಕಡಿಮೆ

ಹಸಿರುಮನೆ ಅನಿಲ ಹೊರಸೂಸುವಿಕೆ ಪ್ರಮಾಣವನ್ನು ಜಗತ್ತಿನ ಜನಸಂಖ್ಯೆಯೊಂದಿಗೆ ವಿಭಾಗಿಸಿದಾಗ, ಪ್ರತಿ ವ್ಯಕ್ತಿಗೆ ಸರಾಸರಿ 6.3 ಟನ್ ಪಾಲು ಸಿಗುತ್ತದೆ. 2020ರ ಪ್ರಕಾರ, ವ್ಯಕ್ತಿಗತ ಸರಾಸರಿಯಲ್ಲಿ ಅಮೆರಿಕ ಎಲ್ಲ ದೇಶಗಳಿಗಿಂತ ಮುಂದಿರುವುದು ಕಂಡುಬಂದಿದೆ. ಜಾಗತಿಕ ಮಾಲಿನ್ಯಕ್ಕೆ ಅಮೆರಿಕದ ಪ್ರತಿ ವ್ಯಕ್ತಿ ತಲಾ 14 ಟನ್ ಕೊಡುಗೆ ನೀಡುತ್ತಿದ್ದಾನೆ. ನಂತರದ ಸ್ಥಾನದಲ್ಲಿರುವ ರಷ್ಯಾದಲ್ಲಿ ಅಮೆರಿಕಕ್ಕಿಂತ ಒಂದು ಟನ್ (13 ಟನ್) ಕಡಿಮೆಯಿದೆ. ಚೀನಾದ ಜನರು ತಲಾ 9.7 ಟನ್ ಪಾಲು ಹೊಂದಿದ್ದಾರೆ.

ಅತಿಹೆಚ್ಚು ಮಾಲಿನ್ಯ ಹೊರಸೂಸುವ ಜಗತ್ತಿನ ಅಗ್ರ ದೇಶಗಳಲ್ಲಿ ಮೂರನೇ ಸ್ಥಾನದಲ್ಲಿರುವ ಭಾರತ, ಹೊರಸೂಸುವಿಕೆಯಲ್ಲಿ ವ್ಯಕ್ತಿಗತ ಪಾಲು ಜಾಗತಿಕ ಸರಾಸರಿಗಿಂತ ಬಹಳ ಕಡಿಮೆ ಪ್ರಮಾಣವನ್ನು ದಾಖಲಿಸಿದೆ. ಭಾರತದಲ್ಲಿ ಇಂಗಾಲ ಹೊರಸೂಸುವಿಕೆಯಲ್ಲಿ ಪ್ರತಿ ವ್ಯಕ್ತಿಯ ಪಾಲು 2.4 ಟನ್ ಇದೆ.

ವೇದವ್ಯಾಸರ ಶಿವಪುರಾಣಸಾರ 280



ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮನ್ಮಥನನ್ನು ಬದುಕಿಸಿದ ಶಿವ

ರತಿದೇವಿ ತನ್ನ ಅಭೀಷ್ಟ ನೆರವೇರಲು ಇದೇ ಸರಿಯಾದ ಸಮಯವೆಂದು ತಿಳಿಯುತ್ತಾಳೆ. ಇದಕ್ಕಾಗಿ ಶಿವನ ಬಳಿ ಬಂದ ರತಿ ಕೈಮುಗಿದು ಕೇಳುತ್ತಾಳೆ: 'ಸ್ವಾಮಿಯೇ, ನೀನೇನೋ ಪಾರ್ವತಿಯನ್ನು ಮದುವೆಯಾದೆ. ಆದರೆ ನಿಮ್ಮ ಮದುವೆಗಾಗಿ ಪ್ರಯತ್ನಿಸಿದ ನನ್ನ ಪ್ರಾಣನಾಥನಾದ ಮನ್ಮಥನನ್ನು ನಿಷ್ಕಾರಣವಾಗಿ ಸುಟ್ಟುಹಾಕಿದೆ. ಈಗಲಾದರೂ ನಿಮಗಾಗಿ ಪ್ರಾಣತೆತ್ತ ನನ್ನ ಪತಿಯನ್ನು ಬದುಕಿಸಿ, ನನ್ನೊಡನೆ ಬಾಳುವಂತೆ ಅನುಗ್ರಹಿಸು. ನನಗೆ ಪತಿಯ ದರ್ಶನವನ್ನು ಅನುಗ್ರಹಿಸಿ, ಹಿಂದೆ ನೀನಾಡಿದ ಮಾತನ್ನು ಉಳಿಸಿಕೋ. ಪರಪ್ರಭುವಾದ ನಿನ್ನನ್ನು ಬಿಟ್ಟರೆ ಚರಾಚರಾತ್ಮಕವಾದ ಮೂರು ಲೋಕದಲ್ಲಿ ನನ್ನ ದುಃಖವನ್ನು ನಾಶ ಮಾಡುವವರು ಯಾರು ಇಲ್ಲ. ಆದುದರಿಂದ ದೀನನಾಥನಾದ ನಿನ್ನಲ್ಲಿ ನಾನು ಶರಣುಹೊಂದಿರುವೆ. ದಯೆ ಇಟ್ಟು ನನ್ನ ದುಃಖವನ್ನು ನಿವಾರಿಸು. ಸರ್ವರಿಗೂ ಆನಂದದಾಯಕವಾಗಿರುವ ನಿನ್ನ ವಿವಾಹಸಮಯದಲ್ಲಿ ಎಲ್ಲೆಲ್ಲಿಯೂ ಪೂರ್ಣಾನಂದ ತುಂಬಿತುಳುಕಾಡುತ್ತಿದೆ. ಇಂಥ ಸುಸಮಯದಲ್ಲಿ ನನ್ನ ಪತಿಯನ್ನು ಬದುಕಿಸಿ. ನಾನೂ ಸಂತೋಷಪಡುವಂತೆ ಮಾಡು.

'ನನ್ನ ಪತಿ ಬದುಕಿ ಬಂದರೆ ನನಗೆ ಬಹಳ ಆನಂದವಾಗುವುದು. ನೀನೂ ಪಾರ್ವತಿಯೊಡನೆ ಸ್ವಚ್ಛಂದವಾಗಿ ವಿಹರಿಸಬಹುದು. ನನ್ನ ಅಭಿಲಾಷೆಯು ಪೂರ್ಣವಾಗುವುದು. ನಿನ್ನ ವಿಹಾರವೂ ತಡೆಯಿಲ್ಲದೆ ನೆರವೇರುವುದು. ನೀನು ಲೋಕೇಶ್ವರ, ಏನನ್ನು ಬೇಕಾದರೂ ಮಾಡಲು ಸಮರ್ಥನಾಗಿರುವೆ. ದಯಮಾಡಿ ನನ್ನ ಪತಿಯನ್ನು ಬದುಕಿಸಿಕೊಡು' ಎಂದು ಪ್ರಾರ್ಥಿಸಿದಳು.

ಹೀಗೆ ಹೇಳಿದ ರತಿದೇವಿ ತನ್ನ ಸೆರಗಿನಲ್ಲಿ ಗಂಟುಹಾಕಿಕೊಂಡಿದ್ದ ಪತಿಯ ಬೂದಿಯನ್ನು ತೆಗೆದುಕೊಂಡು, 'ನಾಥನೇ, ನಿನಗೆಂಥ ದುರ್ಗತಿ ಬಂತು. ಶಿವ-ಪಾರ್ವತಿಯರ ಮದುವೆ ಮಾಡಲು ಹೋಗಿ ಭಸ್ಮವಾದೆಯಲ್ಲ. ನಿನಗೆ ಬಂದಂಥ ಸಾವು ಯಾರಿಗೂ ಬರಬಾರದು' ಎಂದು ಈಶ್ವರನ ಎದುರಿಗೆ ಗಟ್ಟಿಯಾಗಿ ಅಳಲಾರಂಭಿಸಿದಳು. ರತಿಯ ದುಃಖವನ್ನು ನೋಡಿ ಅಲ್ಲಿದ್ದ ಎಲ್ಲಾ ಸ್ತ್ರೀಯರ ಮನಸ್ಸಿಗೂ ನೋವಾಗಿ, ಅವರು ಸಹ ಅಳಲು ಪ್ರಾರಂಭಿಸಿದರು.

ಆಗ ಪಾರ್ವತಿ ಪರಮೇಶ್ವರನಿಗೆ ಹೇಳಿದಳು, 'ಸ್ವಾಮಿಯೇ, ನೀನು ಭಕ್ತವತ್ಸಲನೆಂದು ಹೆಸರಾದವನು. ದಯಾನಿಧಿ ಎಂದು ಪ್ರಸಿದ್ಧಗೊಂಡಿರುವೆ. ಈಗ ಮನ್ಮಥನನ್ನು ಬದುಕಿಸಿ ದುಃಖಿತಳಾದ ರತಿಯನ್ನು ಸಂತೋಷಗೊಳಿಸು' ಎಂದಳು. ಇದಕ್ಕೆ ಲಕ್ಷ್ಮೀ, ಸರಸ್ವತಿ ಸಹಿತ ಎಲ್ಲಾ ಸ್ತ್ರೀಯರು ಒಕ್ಕೊರಲಿನಿಂದ ಅನುಮೋದಿಸಿ ಮನ್ಮಥನನ್ನು ಬದುಕಿಸುವಂತೆ ಶಿವನಲ್ಲಿ ಮನವಿ ಮಾಡಿದರು.

ದೇವಿಯರ ಮಾತನ್ನು ಕೇಳಿ ಕರುಣಾಸಾಗರನಾದ ಪರಶಿವ ಪ್ರಸನ್ನನಾದ. ತಕ್ಷಣವೇ ಕೃಪಾಕಟಾಕ್ಷ ಬೀರಿದ. ಅವನ ಅಮೃತಕಟಾಕ್ಷಗಳಿಂದ ಮನ್ಮಥ ಬೂದಿಯಿಂದ ಈಚೆಗೆ ಎದ್ದು ಬಂದ. ಅವನ ಆಕಾರವೂ ಅಲಂಕಾರವೂ ಹಿಂದಿನಂತೆಯೇ ಇತ್ತು. ಹಿಂದಿನಂತೆಯೇ ಸುಂದರಮೂರ್ತಿಯಾಗಿದ್ದ. ಮನ್ಮಥನ ಆ ಸುಂದರರೂಪ ಹಿಂದಿನಂತೆಯೇ ಇದ್ದವು.

ಧನುರ್ಬಾಣಧಾರಿಯಾಗಿಯೇ ಮತ್ತೆ ಬದುಕಿ ಬಂದ ತನ್ನ ಪತಿಯಾದ ಮನ್ಮಥನನ್ನು ನೋಡಿ ರತಿ ಆನಂದದಿಂದ ಕುಣಿದಾಡಿದಳು. ಅನಂತರ ಮಹೇಶ್ವರನಿಗೆ ನಮಸ್ಕರಿಸಿದ ರತಿದೇವಿ ಅಂಜಲಿಬದ್ಧಳಾಗಿ ಶಿವನ ಸ್ತೋತ್ರಮಾಡಿದಳು. ಪತಿಯನ್ನು ಬದುಕಿಸಿದ್ದಕ್ಕಾಗಿ ಕೃತಾರ್ಥಳಾದೆ ಎಂದು ಮತ್ತೆ ಮತ್ತೆ ಶಿವನಿಗೆ ನಮಸ್ಕಾರ ಮಾಡಿದಳು.

ರತಿಯೊಂದಿಗೆ ಮನ್ಮಥ ಸಹ ಶಿವನನ್ನು ಕೃತಜ್ಞತೆಯಿಂದ ಸ್ತುತಿಸಿದ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **ಹೊಸ ನೋಟು** ಹಾಗೂ ನಾಣ್ಯಗಳನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಬಿಡುಗಡೆ ಮಾಡಿದ್ದು, ಚಲಾವಣೆಗೆ ಲಭ್ಯವಿವೆ ಎಂಬ ಸಂದೇಶಗಳು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡುತ್ತಿವೆ. '₹2, ₹5, ₹350, ₹500 ₹1,000 ಮುಖಬೆಲೆಯ ನೋಟುಗಳು ಹಾಗೂ ₹100, ₹125, ₹1,000 ಮುಖಬೆಲೆಯ ನಾಣ್ಯಗಳನ್ನು ಸರ್ಕಾರ ಪರಿಚಯಿಸಿದೆ' ಎಂದು ಸಂದೇಶಗಳಲ್ಲಿ ಹೇಳಲಾಗಿದೆ. ನೋಟುಗಳು ಹಾಗೂ ನಾಣ್ಯಗಳ ಚಿತ್ರಗಳನ್ನೂ ಜನರು ಹಂಚಿಕೊಂಡಿದ್ದಾರೆ.



✓ **ಹೊಸ ನೋಟುಗಳು** ಹಾಗೂ ನಾಣ್ಯಗಳ ಸಂದೇಶಗಳ ಅಸಲಿಯತ್ತನ್ನು 'ಲಾಜಿಕಲ್ ಇಂಡಿಯನ್' ವೆಬ್‌ಸೈಟ್ ಪರಿಶೀಲಿಸಿದ್ದು, ಈ ಸಂದೇಶಗಳು ದಾರಿತಪ್ಪಿಸುತ್ತಿವೆ ಎಂದು ತಿಳಿಸಿದೆ. ಹೊಸದಾಗಿ ಬಿಡುಗಡೆ ಮಾಡಲಾಗಿದೆ ಎಂದು ಹೇಳಲಾಗುವ ನೋಟುಗಳ ಮುಖಬೆಲೆಯನ್ನು ತಿರುಚಲಾಗಿದೆ. ಐದು ರೂಪಾಯಿಯ ನೋಟಿನಲ್ಲಿ ₹5 ಎಂದು ಸಂಖ್ಯೆಯಲ್ಲಿ ಬರೆಯಲಾಗಿದ್ದು, ಅಕ್ಷರಗಳಲ್ಲಿ ಐವತ್ತು ರೂಪಾಯಿ ಎಂದಿದೆ. ಅಂದರೆ, 50 ರೂಪಾಯಿಯ ನೋಟನ್ನು ತಿರುಚಿ 5 ರೂಪಾಯಿಯ ನೋಟು ಎಂದು ಬಿಂಬಿಸಲಾಗಿದೆ. ಹಾಗೆಯೇ ₹1,000 ಮುಖಬೆಲೆಯ ನೋಟಿನ ಮೇಲೆ ಅಕ್ಷರಗಳಲ್ಲಿ ಎರಡು ಸಾವಿರ ರೂಪಾಯಿ ಎಂದಿದೆ. ಅಕ್ಷರಗಳನ್ನು ಹಾಗೆಯೇ ಉಳಿಸಿ, ಸಂಖ್ಯೆಯನ್ನು ಮಾತ್ರ ತಿರುಚಲಾಗಿದೆ. ₹100, ₹125, ₹1,000 ಮುಖಬೆಲೆಯ ನಾಣ್ಯಗಳನ್ನು ಸ್ವಾತಂತ್ರ್ಯ ಹೋರಾಟಗಾರರು, ಪ್ರಸಿದ್ಧ ವ್ಯಕ್ತಿಗಳ ಸ್ಮರಣಾರ್ಥ ಬಿಡುಗಡೆ ಮಾಡಲಾಗಿದ್ದು, ಇವು ಚಲಾವಣೆಯಲ್ಲಿ ಇಲ್ಲ ಎಂದು ವೆಬ್‌ಸೈಟ್ ತಿಳಿಸಿದೆ.

ಬೆರಗಿನ ಬೆಳಕು



ಗುರುರಾಜ ಕರಜಗಿ

ಸಾರ್ಥಕವಾಗುವ ಮುನ್ನೋಟ

ಮುನ್ನಾದ ಜನುಮಗಳ ನೆನಪಿನಿಂ ನಿನಗೇನು? |
ಇನ್ನುಮಿಹುದಕೆ ನೀಡುಮನವನ್:
ಎನ್ನುವವೊಲ್ ||
ಬೆನ್ನ ಪಿಂತಿನದು ಕಾಣಿಸದಂತೆ ಪರಮೇಷ್ಠಿ |
ಕಣ್ಣನಿಟ್ಟನು ಮುಖದಿ - ಮಂಕುತಿಮ್ಮ || 760 ||

ಪದ-ಅರ್ಥ: ಮುನ್ನಾದ = ಹಿಂದೆ ಆಗಿ ಹೋದ, ನೆನಪಿನಿಂ = ನೆನಪುಗಳಿಂದ, ಇನ್ನುಮಿಹುದಕೆ- = ಇನ್ನುಮ್ (ಇನ್ನು) + ಇಹುದಕೆ(ಇರುವುದಕ್ಕೆ), ಎನ್ನುವವೊಲ್ = ಎನ್ನುವಂತೆ, ಪಿಂತಿನದು = ಹಿಂದಿನದು, ಕಣ್ಣನಿಟ್ಟನು = ಕಣ್ಣನು- + ಇಟ್ಟನು.

ವಾಚ್ಯಾರ್ಥ: ಹಿಂದೆ ಆಗಿಹೋದ ಜನ್ಮಗಳ ನೆನಪಿನಿಂದ ಆಗುವುದೇನು? ಇನ್ನು ಮುಂದೆ ಇರುವುದಕ್ಕೆ ಮನಸ್ಸನ್ನು ನೀಡು ಎನ್ನುವಂತೆ ಸೃಷ್ಟಿಕರ್ತ, ಬೆನ್ನಹಿಂದಿರುವುದು ಕಾಣದಿರಲೆಂದು ಮುಂದೆ ಮುಖದಲ್ಲಿ ಕಣ್ಣುಗಳನ್ನು ಇಟ್ಟಿದ್ದಾನೆ.

ವಿವರಣೆ: ನಮ್ಮ ಸನಾತನ ಧರ್ಮದಲ್ಲಿ ಜನ್ಮಾಂತರಗಳ ಅಸ್ತಿತ್ವದಲ್ಲಿ ನಂಬಿಕೆ ಇದೆ. ಅದು ಇದೆಯೋ ಇಲ್ಲವೋ ಎನ್ನುವುದು ಅವರವರ ನಂಬಿಕೆಯಲ್ಲಿದೆ. ಆತ್ಮನಿಗೆ ಜನ್ಮಾಂತರವಿದೆಯೆ? ಆತ್ಮನಿಗೆ ಹಿಂದೆ ಯಾವ ಜನ್ಮವಿತ್ತು? ಮುಂದೆ ಈ ಆತ್ಮನು ಏನಾಗಿ ಹುಟ್ಟುತ್ತಾನೆ? ಇಂತಹ ವಿಷಯಗಳು ಬಹಳ ಸಂದಿಗ್ಧವಾದವುಗಳು. ಈ ವಿಷಯದಲ್ಲಿ ಮನುಷ್ಯರಿಗೆ ಮಾತ್ರವಲ್ಲ, ದೇವತೆಗಳಿಗೂ ಸಂಶಯವಿದೆಯಂತೆ. ಕಠೋಪನಿಷತ್ತಿನಲ್ಲಿ ಯಮಧರ್ಮ ನಚಿಕೇತನಿಗೆ ಹೇಳುತ್ತಾನೆ, "ದೇವೈರತ್ರಾಪಿ ವಿಚಿಕಿತ್ಸಿತಂ ಪುರಾ| ನ ಹಿ ಸುವಿಜ್ಞೇಯಮಣುರೇಷ ಧರ್ಮಃ:" ಹಾಗೆಂದರೆ, ಮರಣಾನಂತರ ಆತ್ಮನು ಇರುತ್ತಾನೋ, ಇಲ್ಲವೋ ಎನ್ನುವ ವಿಷಯದಲ್ಲಿ ದೇವತೆಗಳಿಗೂ ಸಂಶಯವಿದೆ. ಯಾಕೆಂದರೆ ಈ ವಿಷಯ ಅತ್ಯಂತ ಸೂಕ್ಷ್ಮವು, ಅವಿಜ್ಞೇಯವೂ ಆಗಿರುತ್ತದೆ. ಈ ವಿಷಯಗಳು ಪ್ರತ್ಯಕ್ಷಗೋಚರವಲ್ಲ! ಒಂದು ವೇಳೆ ನಾವು ಹಿಂದಿನ ಅನೇಕ ಜನ್ಮಗಳಲ್ಲಿ ಏನಾಗಿದ್ದೆವು ಎಂಬುದು ತಿಳಿದರೂ ಏನು ಪ್ರಯೋಜನ?ಅವುಗಳಲ್ಲಿ ಬದಲಾವಣೆ ಮಾಡುವುದು ಸಾಧ್ಯವಿಲ್ಲ. ನಾವು ಮಾಡಬಹುದಾದದ್ದು ನಮ್ಮ ಬದುಕಿನ ಉಳಿದ ಅವಧಿಯಲ್ಲಿ, ಅಲ್ಲಿ ಧರ್ಮದಿಂದ ಪರಿಶ್ರಮವಹಿಸಿ ದುಡಿದರೆ ಆ ಅವಧಿ ಪ್ರಯೋಜನಕಾರಿಯಾದೀತು. ಆದ್ದರಿಂದ ಹಿಂದಿನ ಜನ್ಮಗಳಲ್ಲಿ ಅಲ್ಲ, ಈ ಜನ್ಮದಲ್ಲೇ ಹಿಂದಾದದ್ದನ್ನು ನೆನಪಿಸಿಕೊಂಡರೆ ಏನು ಸುಖ? ಮುಂದೆ ಮಾಡಬಹುದಾದ ಸಾರ್ಥಕ ಕರ್ಮಗಳ ಕಡೆಗೆ ಮನಸ್ಸನ್ನು ಹರಿಸಬೇಕು. ಇದು ಧನಾತ್ಮಕ ಚಿಂತನೆ. ಕಗ್ಗ ಒಂದು ಉದಾಹರಣೆಯಿಂದ, ಭಗವಂತನೂ ಇದನ್ನೇ ಸೂಚಿಸುತ್ತಾನೆ ಎನ್ನುತ್ತದೆ. ನಮ್ಮ ಕಣ್ಣುಗಳು ಬೆನ್ನ ಮೇಲಿದ್ದರೆ ನಮಗೆ ಕಾಣುವುದೇನು? ಬರೀ ಹಿಂದಿದ್ದ ಚಿತ್ರಗಳೇ. ಮನುಷ್ಯ ಕೇವಲ ಹಿಂದಾದದ್ದನ್ನು ನೋಡುತ್ತ ಬದುಕನ್ನು ವ್ಯಯ-ಮಾಡದಿರಲಿ ಎಂದು ಆತ ನಮ್ಮ ಕಣ್ಣುಗಳನ್ನು ಮುಂದಕ್ಕೆ ನೋಡುವಂತೆ ಮುಖದಲ್ಲಿ ಇಟ್ಟನಂತೆ!. ಕಗ್ಗದ ಸಂದೇಶವೇ ಅದು. ಜೀವ ಶ್ರೇಷ್ಠತೆಯ ಕಡೆಗೆ ಸಾಗಲು ಧನಾತ್ಮಕವಾಗಿ ಮುಂದಾಗುವುದರ ಬಗ್ಗೆ ಯೋಚಿಸಬೇಕೇ ವಿನಃ ಋಣಾತ್ಮಕವಾಗಿ ಹಿಂದೆ ಆಗಿಹೋದದ್ದರ ಬಗ್ಗೆ ಚಿಂತಿಸುತ್ತ ಕೂಡ್ರಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಸೋಮವಾರ ನವೆಂಬರ್ 21, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ದ್ವಾದಶಿ ಗಂ. 10-08 ನಕ್ಷತ್ರ: ಚಿತ್ತಾ ಗಂ. 24-14 ಯೋಗ: ಆಯುಷ್ಮಾನ್ ಗಂ. 21-06, ಕರಣ: ತೈತಿಲ ಗಂ. 10-08, ವೃಶ್ಚಿಕ ಮಾಸದ 04 ನೇ ದಿನ.
ರಾಹುಕಾಲ: ಬೆಳಿಗ್ಗೆ 07-30 – 09-00, **ಸೂರ್ಯೋದಯ:** 06-36 **ಸೂರ್ಯಾಸ್ತ:** 05-57
ಮುಸ್ಲಿಂ ದಿನಾಂಕ: 25 ರಬಿಯುಸ್ಸಾನಿ
ದಿನ ವಿಶೇಷ: ಪ್ರದೋಷ
ಅದೃಷ್ಟ ಸಂಖ್ಯೆ: 4, 9

ಮೇಷ: ಎಲ್ಲಾ ವಿಷಯಗಳಲ್ಲೂ ಸ್ವಾಭಾವಿಕ ಗುಣಕ್ಕಿಂತ ಹೆಚ್ಚಿನ ಸಮಾಧಾನ-ದಿಂದಿರುವುದು ಉತ್ತಮ. ಮನೋಭಿಲಾಷೆ ವ್ಯಕ್ತಪಡಿಸಲು ಹಿಂಜರಿಯಬೇಡಿ. ಉದ್ಯೋಗಾಕಾಂಕ್ಷಿಗಳಿಗೆ ಬಯಸಿದ ಕ್ಷೇತ್ರದಲ್ಲಿ ಅವಕಾಶ ದೊರೆಯಲಿದೆ.

ವೃಷಭ: ಈ ದಿನದ ಗ್ರಹಗಳ ಚಲನೆಯು ಸುಖಮಯವಾಗಿ ಜೀವನ ನಡೆಸಲು ಅನುಕೂಲಕರವಾಗಿದೆ. ನಿಮ್ಮ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಬರಲಿದೆ. ಸಾಂಸಾರಿಕ ವಿಷಯದಲ್ಲಿ ಹಿರಿಯರ ಮಾತು ಮೀರದಿರುವುದು ಲೇಸು.

ಮಿಥುನ: ಕುಟುಂಬದಲ್ಲಿ ಶುಭಕಾರ್ಯಗಳ ಸಂಭ್ರಮದಿಂದಾಗಿ ಹಿರಿಯರ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಹೊಸ ನಿರ್ಧಾರ ತೆಗೆದುಕೊಳ್ಳುವ ಮೊದಲು ಸಮಯಾವಕಾಶವನ್ನು ತೆಗೆದುಕೊಂಡು ಯೋಚಿಸಿ ನಿರ್ಧರಿಸಿ.

ಕರ್ಕಾಟಕ: ವ್ಯಾಪಾರ ವ್ಯವಹಾರದಲ್ಲಿನ ಪ್ರತಿ ಹೆಜ್ಜೆಯನ್ನು ನಿಮ್ಮ ಎದುರಾಳಿಯು ಗಮನಿಸುತ್ತಿರುವ ಕಾರಣ ಬಹಳಷ್ಟು ಎಚ್ಚರದಿಂದ ವ್ಯವಹರಿಸಿ. ಯಾವುದೇ ಸಮಯದಲ್ಲೂ ಆತ್ಮವಿಶ್ವಾಸ ಕಳೆದುಕೊಳ್ಳಬೇಡಿ.

ಸಿಂಹ: ಪ್ರೀತಿಯ ವಿಷಯವನ್ನು ಸಂಬಂಧಪಟ್ಟವರ ಮುಂದಿಡುವುದು ಲೇಸು, ನಾಳೆ ಎನ್ನುವುದು ಈ ವಿಷಯದಲ್ಲಿ ಸೂಕ್ತವಲ್ಲ. ಮೀನ-ಮೇಷ ಎಣಿಸದೆ ನಿಮ್ಮ ಕಾರ್ಯತಂತ್ರ ರೂಪಿಸಿಕೊಳ್ಳಬಹುದು. ಆರೋಗ್ಯ ವೃದ್ಧಿಯಾಗಲಿದೆ.

ಕನ್ಯಾ: ಕಚೇರಿಯ ಕೆಲಸಗಳನ್ನು ಶೀಘ್ರ ಮುಗಿಸಿ, ಮನೆಯಲ್ಲಿ ತಂಗಿಯ ಅಥವಾ ತಮ್ಮನ ಮದುವೆಯ ಕೆಲಸದ ಒತ್ತಡ ಹಾಗೂ ಜವಾಬ್ದಾರಿ ಹೆಚ್ಚಲಿದೆ. ಮಿತ್ರರ ಭೇಟಿಯಿಂದ ನಿಮಗೆ ಅಚ್ಚರಿಯ ವಿಚಾರ ತಿಳಿಯುವುದು.

ತುಲಾ: ಇಂದಿನ ಕೆಲಸದ ಒತ್ತಡ ಸಂಜೆಯ ವೇಳೆಗೆ ಕಡಿಮೆಯಾಗುವುದಲ್ಲದೆ ಲಾಭಕರವಾಗಿ ಮುಗಿಯುವುದು. ಉಡುಗೊರೆ ಲಭ್ಯವಾಗಬಹುದು. ಸ್ನೇಹ ಸಂಬಂಧಗಳು ಗಟ್ಟಿಯಾಗಿ ಸಹಾಯ ಸಹಕಾರ ನಿರೀಕ್ಷೆಗೆ ಮೀರಿ ಬರಲಿದೆ.

ವೃಶ್ಚಿಕ: ಸಾರ್ವಜನಿಕ ಸ್ಥಳದಲ್ಲಿ ನಿಮ್ಮ ಗೌರವವನ್ನು ಕಾಪಾಡಿಕೊಳ್ಳುವ ಬಗ್ಗೆ ಗಮನವಿರಲಿ. ಇಂದು ನಿಮಗೆ ಕಷ್ಟದ ದಿನ ಎನಿಸಬಹುದು, ಆದರೆ ಇದೇ ನಾಳಿನ ಸುಖಕ್ಕೆ ನಾಂದಿಯಾಗಲಿದೆ, ತಾಳ್ಮೆ ಈ ದಿನದ ಮಂತ್ರವಾಗಿರಲಿ.

ಧನು: ಅಭಿವೃದ್ಧಿಗೆ ಪೂರಕವಾದ ಹೊಸ ಅವಕಾಶಗಳ ಬಾಗಿಲು ತೆರೆಯಲಿದೆ, ಈ ದಿನ ನಿಯೋಜಿತ ಕೆಲಸಗಳನ್ನು ಅಕ್ಕರೆಯಿಂದ ಒಪ್ಪಿಕೊಳ್ಳಿ, ಮತ್ತೊಂದು ಹೊಸ ಕೆಲಸ ನಿಮಗಾಗಿ ಕಾದಿರುವುದು. ಧನ ಸಹಾಯ ಅಪೇಕ್ಷಿಸಬೇಡಿ.

ಮಕರ: ನಿಮ್ಮ ಪ್ರತಿಭೆಯನ್ನು ಗುರುತಿಸಿಲ್ಲ ಎಂಬ ನೋವು ಇಂದೇ ಕೊನೆಯಾಗುವುದು. ಈ ದಿನ ನಿಮ್ಮ ಪ್ರತಿಭೆಯ ತೀಕ್ಷ್ಣತೆಯು ಸಂಬಂಧಪಟ್ಟ-ವರ ಗಮನ ಸೆಳೆಯಲಿದೆ. ಅದೃಷ್ಟವನ್ನು ಇಂದು ಪರೀಕ್ಷಿಸಿಕೊಳ್ಳಬಹುದು.

ಕುಂಭ: ಹರಿತವಾದ ಆಯುಧಗಳ ಬಳಕೆಯಲ್ಲಿ ಜಾಗ್ರತೆ ವಹಿಸಿ. ಮನೆಗೆ ಹೊಸ ಪೀಠೋಪಕರಣಗಳ ಖರೀದಿಗೆ ಧನವ್ಯಯವಾಗಲಿದೆ. ಮನೆ ಅಲಂಕೃತವಾಗು-ವುದು. ರಾಜಕೀಯ ವ್ಯಕ್ತಿಗಳಿಗೆ ಧಾರ್ಮಿಕ ಶ್ರದ್ಧೆ ಮೂಡುವುದು.


ಮೀನ: ಮನೆಯ ವಿಸ್ತರಣೆ ಸಂಬಂಧ ಆಲೋಚನೆಗಳು ಗರಿಗೆದರಲಿವೆ, ಯಾವುದೇ ವಿಚಾರದಲ್ಲೂ ಕಳವಳ ಬೇಡ, ನಿಮ್ಮಿಚ್ಛೆಯಂತೆ ನಡೆಯಲಿದೆ. ಸಮಾರಂಭಗಳಿಗಾಗಿ ನೂತನ ವಸ್ತುಗಳ ಖರೀದಿಯ ಯೋಗವಿದೆ.

ಪದಬಂಧ 5145

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
4.ಈ ವರ್ತಕ ಉತ್ತೇಜನ ಕೊಡುವವನು (4)
5.ಬೇಡಿಕೆಯನ್ನು ಹೀಗೆ ಹೇಳಿ 3)
7.ಏರುತಗ್ಗಿಲ್ಲದಿರುವುದು (3)
9.ಮಣ ಭಾರ ಹೊತ್ತ ನಲ್ಲ (3)
10.ಈತ ಆನೆ ನಡೆಸುವವನು (3)
11.ಅವಸರವು ಉಲ್ಟಾ ಆಗಿದೆ (3)
12.ಮರದೊಳಗೆ ಸವಿಯಾದುದು ಕಾಣುತ್ತಿದೆ (3)
14.ಪ್ರಾಧಿಕಾರದ ಪೌಳಿ! (3)
15.ರಾಗ ವಿಸ್ತರಿಸಿ ತೋರುವುದು (4)

ಮೇಲಿಂದ ಕೆಳಕ್ಕೆ
1.ಅದೇತಾನೆ ಬಿರಿದ ಹೂವು (4)
2.ಉತ್ತರದವರ ಚಿಕ್ಕಪ್ಪ (2)
3.ಪಣದಲ್ಲಿರುವ ಅಳತೆ (4)
6.ಈ ತರ ತಮ್ಮತೋರಿದ ಭೇದಭಾವ (4)
8.ಶಾಂತಿ ಹೀಗೆ ಬಂದಿದೆ (4)
11.ತರತರದ ಕಾಯಿಪಲ್ಲೆ (4)
13.ಪುಸ್ತಕದ ಮೇಲು ಹೊದಿಕೆ (4)
15.ಜೀವಿತದ ಅವಧಿ (2)



5144ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮುನಿ 2.ತವಕ
5.ಕಡಿವಾಣ 7.ರುದ್ರಭೂಮಿ
9.ರಾಜ 10.ಜ್ಞಾನಿ
11.ಸಮಂಜಸ 14.ಮಧುಕರ
16.ತಿಳಗೆ 17.ವಾಣಿ

ಮೇಲಿಂದ ಕೆಳಕ್ಕೆ:
1.ಮುದುಕ 2.ತರುಣ
3.ಕರಾರು 4.ಟಪಭೂ
6.ಡಿರಜ 8.ಮಿಸುನಿ
9.ರಾಯಸ 10.ಜ್ಞಾಪಕ
12.ಮಂಪರು 13.ಸವತಿ
14.ಮಲ್ಲಿಗೆ 15.ರಮಣಿ

ಸುಡೊಕು 5531

	1		3		8		2	
8		6				5		3
	5		4		6		7	
5			1		2		4	
	2	9						
6			8		9	2		5
	8		6		1		9	
7		2		8		3		1
	6		2		3		5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5530 ಸುಡೊಕು

2	9	4	1	5	6	7	8	3
6	1	7	3	8	4	5	2	9
8	5	3	7	2	9	4	1	6
3	2	9	5	4	1	6	7	8
7	6	8	2	9	3	1	4	5
5	4	1	6	7	8	9	3	2
1	7	6	8	3	5	2	9	4
4	3	5	9	1	2	8	6	7
9	8	2	4	6	7	3	5	1

‘ರಿಕ್ಷಾದಲ್ಲಿತ್ತು ಕುಕ್ಕರ್, ವೈರ್, ನಟ್ ಬೋಲ್ಟ್’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ನಗರದ ಗರೋಡಿಯಲ್ಲಿ ಶನಿವಾರ ಸ್ಫೋಟ ಸಂಭವಿಸಿದ ಆಟೊರಿಕ್ಷಾದಲ್ಲಿ ಕುಕ್ಕರ್, ನಟ್, ಬೋಲ್ಟ್ ಹಾಗೂ ವೈರ್‌ಗಳಿದ್ದವು’ ಎಂದು ಪ್ರತ್ಯಕ್ಷದರ್ಶಿ ಸುಭಾಷ್ ಶೆಟ್ಟಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಶನಿವಾರ 5 ಗಂಟೆ ಸುಮಾರಿಗೆ ಕೃತ್ಯ ಸಂಭವಿಸಿದೆ. ಆಗ ನಾನು ಸಮೀಪದಲ್ಲಿರುವ ನಮ್ಮ ತರಕಾರಿ ಅಂಗಡಿಯಲ್ಲಿದ್ದೆ. ದೊಡ್ಡ ಪಟಾಕಿ ಸ್ಫೋಟಿಸಿದ ಸದ್ದು ಕೇಳಿಸಿತು. ರಿಕ್ಷಾದಲ್ಲಿ ದಟ್ಟ ಹೊಗೆ ಕಾಣಿಸಿತ್ತು. ಸ್ಥಳಕ್ಕೆ ಧಾವಿಸಿ ನೋಡಿದಾಗ ರಿಕ್ಷಾ ಚಾಲಕನ ತಲೆಗೆ ಸುಟ್ಟ ಗಾಯಗಳಾಗಿದ್ದವು’ ಎಂದರು.

‘ರಿಕ್ಷಾದಲ್ಲಿದ್ದ ಪ್ರಯಾಣಿಕ ಎರಡೆರಡು ಬಟ್ಟೆ ಹಾಕಿದ್ದ. ಆತನ ಕೈ ಕೂಡ ಸುಟ್ಟು ಹೋಗಿತ್ತು. ನೀರು ಹಾಕಿ ಬೆಂಕಿ ನಂದಿಸಿದೆವು. ಬೇರೆ ಆಟೊರಿಕ್ಷಾದಲ್ಲಿ ಅವರನ್ನು ಆಸ್ಪತ್ರೆಗೆ ಕಳುಹಿಸಿದೆವು. ಸ್ಫೋಟ ಸಂಭವಿಸಿದಾಗ ಇಲ್ಲಿ ಹೆಚ್ಚು ಜನ ಇರಲಿಲ್ಲ. ಟ್ರಾಫಿಕ್ ಜಾಮ್ ಆಗಬಾರದು ಎಂಬ ಕಾರಣಕ್ಕೆ ಸ್ಥಳದಲ್ಲಿದ್ದ ಆಟೊರಿಕ್ಷಾವನ್ನು ಪಕ್ಕಕ್ಕೆ ಸರಿಸಿದೆವು’ ಎಂದು ವಿವರಿಸಿದರು.

‘ರಿಕ್ಷಾ ಚಾಲಕ ಉಜ್ಜೋಡಿಯವರು. ಅವರು ನಮ್ಮ ಪರಿಚಯದವರೇ. ಅವರು ತಲೆ ಕೂದಲು ಸುಟ್ಟು ಹೋಗಿತ್ತು. ಅವರನ್ನು ಫಾದರ್ ಮುಲ್ಲರ್ ಆಸ್ಪತ್ರೆಗೆ ಕಳುಹಿಸಿದ್ದು ನಾನೇ. ರಿಕ್ಷಾದ ಗ್ಯಾಸ್ ಸಿಲಿಂಡರ್ ಸ್ಫೋಟಿಸಿರಬಹುದು ಎಂದು ಮೊದಲು ಭಾವಿಸಿದ್ದೆವು. ಆದರೆ, ನಂತರ ನೋಡುವಾಗ ಕುಕ್ಕರ್, ಬೋಲ್ಟ್, ನಟ್, ಬ್ಯಾಟರಿ ಹಾಗೂ ವೈರ್‌ಗಳು ರಿಕ್ಷಾದಲ್ಲಿದ್ದವು. ಸಂಶಯ ಬಂದು ಕಂಕನಾಡಿ ಪೊಲೀಸ್ ಠಾಣೆಗೆ ಮಾಹಿತಿ ನೀಡಿದೆ’ ಎಂದು ತಿಳಿಸಿದರು.

ತಮಿಳುನಾಡು ವ್ಯಕ್ತಿಯ ವಿಚಾರಣೆ (ಚೆನ್ನೈ ವರದಿ): ಮಂಗಳೂರಿನಲ್ಲಿ ಸಂಭವಿಸಿದ ಸ್ಫೋಟ ಪ್ರಕರಣದ ಶಂಕಿತ ಆರೋಪಿ ಬಳಸಿದ ಮೊಬೈಲ್ ನಂಬರ್ ಅನ್ನು ತಮಿಳುನಾಡಿನ ವ್ಯಕ್ತಿಯೊಬ್ಬರ ಆಧಾರ್ ಕಾರ್ಡ್ ಬಳಸಿ ಪಡೆದುಕೊಳ್ಳಲಾಗಿತ್ತು ಎಂಬ ಶಂಕೆಯ ಮೇರೆಗೆ ನೀಲಗಿರಿ ಜಿಲ್ಲೆಯ ಸುರೇಂದ್ರನ್ ಅವರನ್ನು ತಮಿಳುನಾಡು ಪೊಲೀಸರು ಭಾನುವಾರ ವಿಚಾರಣೆಗೆ ಒಳಪಡಿಸಿದ್ದಾರೆ.



ಸ್ಫೋಟಗೊಂಡ ಆಟೋದಲ್ಲಿ ಇದ್ದ ಕುಕ್ಕರ್

> **ಮಂಗಳೂರಿನಲ್ಲಿ ನಡೆದಿರುವ ಬಾಂಬ್ ಸ್ಫೋಟದ ಘಟನೆಯು ಗುಪ್ತಚರ ವಿಭಾಗ ಮತ್ತು ಗೃಹ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸಿದೆ.**
> **ಸಿದ್ದರಾಮಯ್ಯ**, ವಿಧಾನಸಭೆ ವಿರೋಧ ಪಕ್ಷದ ನಾಯಕ

> **ಮಂಗಳೂರು ವಿಮಾನ ನಿಲ್ದಾಣದಲ್ಲಿ ಬಾಂಬ್ ಇಟ್ಟಿದ್ದ ವ್ಯಕ್ತಿ 3 ವರ್ಷ ಜೈಲಿನಲ್ಲಿದ್ದಾನೆ. ಆತ ಆರ್‌ಎಸ್‌ಎಸ್‌ನವನು. ಪ್ರಕರಣದಲ್ಲಿ ಯಾರ ಕೈವಾಡವಿದೆ ಎಂದು ಹೇಳುವುದಿಲ್ಲ. ಈ ಬಗ್ಗೆ ತನಿಖೆಯಾಗಲಿ.**
> **ಸಿ.ಎಂ.ಇಬ್ರಾಹಿಂ,** ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ

ಎನ್‌ಐಎಯಿಂದ ತನಿಖೆ: ನಳಿನ್ ಕುಮಾರ್ ಕಟೀಲ್

ಸ್ಫೋಟದ ತನಿಖೆಯನ್ನು ಕೇಂದ್ರ ಸರ್ಕಾರದ ಸೂಚನೆ ಮೇರೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಟ್ವೀಟ್ ಮಾಡಿದ್ದಾರೆ.

‘ಈ ಕೃತ್ಯದ ಹಿಂದಿರುವ ಮೂಲಭೂತವಾದಿಗಳ ಜಾಡನ್ನು ಪತ್ತೆ ಹಚ್ಚಲು ಎನ್‌ಐಎ ತನಿಖೆಯಿಂದ ನೆರವಾಗಲಿದೆ. ಬಾಂಬ್ ಸ್ಫೋಟದ ಹಿಂದೆ ಅಂತರರಾಜ್ಯ ದೇಶದ್ರೋಹಿಗಳ ಕೈವಾಡ ಪತ್ತೆ ಹಚ್ಚಲು ಎನ್‌ಐಎ ಕಾರ್ಯತತ್ಪರವಾಗಿದೆ. ಉನ್ನತ ಪೊಲೀಸ್ ಅಧಿಕಾರಿಗಳು ಸಹಕರಿಸುತ್ತಿದ್ದಾರೆ. ಮಂಗಳೂರಿನಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ಎಲ್ಲಾ ರೀತಿಯ ವ್ಯವಸ್ಥೆ ಮಾಡಲಾಗಿದೆ. ಯಾವುದೇ ಭಯೋತ್ಪಾದಕ ಕೃತ್ಯ ನಡೆಸಲು ಪ್ರಯತ್ನಿಸುವವರ ಜನ್ಮ ಜಾಲಾಡಿ ಶಾಶ್ವತವಾಗಿ ಅವರು ನೆನಪಿಡುವ ಕ್ರಮ ಜರುಗಿಸಲಾಗುವುದು’

‘ಭಯೋತ್ಪಾದಕ ಕೃತ್ಯ ಮಾಡುವ ಮೂಲಕ ರಾಜ್ಯಕ್ಕೆ ಕೆಟ್ಟ ಹೆಸರು ತರುವ ಮತಾಂಧರ ಪ್ರಯತ್ನ ಜಾರಿಯಾಗಲು ಬಿಡುವುದಿಲ್ಲ. ದೇಶದ್ರೋಹಿ ಸಂಘಟನೆಗಳನ್ನು ನಿಷೇಧ ಮಾಡಿದ ಬಳಿಕ ವಿಧ್ವಂಸಕ ಕೃತ್ಯಗಳನ್ನು ಮಾಡಿ ಬಾಲ ಬಿಚ್ಚಲು ಕೆಲವರು ಹೊರಟಿದ್ದಾರೆ. ಭಯೋತ್ಪಾದನೆಯ ವಿರುದ್ಧದ ನಮ್ಮ ಸಮರದಲ್ಲಿ ನಾಗರಿಕರ ಸಹಕಾರ ಮುಖ್ಯ. ಕರ್ನಾಟಕದಲ್ಲಿ ನಮ್ಮ ಪೊಲೀಸ್ ಇಲಾಖೆ ಮಂಗಳೂರಿನ ಸ್ಫೋಟದ ಮೂಲ ಪತ್ತೆಹಚ್ಚುವಲ್ಲಿ ನಿರತವಾಗಿದ್ದು, ಕೇಂದ್ರದಿಂದ ಅಗತ್ಯ ನೆರವು ನೀಡಲಾಗಿದೆ’ ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಘಟನೆ ನಡೆದ ಸ್ಥಳಕ್ಕೆ ಭೇಟಿ ನೀಡಿದ ಸ್ಥಳೀಯ ಶಾಸಕ ವೇದವ್ಯಾಸ ಕಾಮತ್, ‘ಈ ಕೃತ್ಯದ ಬಗ್ಗೆ ಸಮಗ್ರ ತನಿಖೆ ಆಗಬೇಕು. ರಿಕ್ಷಾದಲ್ಲಿ ಪ್ರಯಾಣಿಸಿದ ವ್ಯಕ್ತಿ ಏಕೆ ಕುಕ್ಕರ್ ತಂದಿದ್ದ. ಎಲ್ಲಿ ಏನು ಮಾಡಬೇಕೆಂಬ ಉದ್ದೇಶ ಇತ್ತು ಎಂಬ ಬಗ್ಗೆಯೂ ಕೂಲಂಕಷವಾಗಿ ತನಿಖೆ ನಡೆಸಬೇಕು. ನಗರದಲ್ಲಿ ಯಾವತ್ತೂ ಬಾಂಬ್ ಸ್ಫೋಟ ನಡೆದಿರಲಿಲ್ಲ. ಕರ್ನಾಟಕ ಕೇರಳದ ಗಡಿ ಪ್ರದೇಶವಿದು. ಇಲ್ಲಿ ಘಟನೆ ಆದಾಗ ಕೇರಳಕ್ಕೆ ಪರಾರಿಯಾಗುತ್ತಾರೆ. ಇದನ್ನು ತಪ್ಪಿಸಲು ಎನ್‌ಐಎ ಘಟಕವನ್ನು ಮಂಗಳೂರಿನಲ್ಲಿ ಸ್ಥಾಪಿಸಬೇಕು’ ಎಂದಿದ್ದಾರೆ.

ಕೃತ್ಯಕ್ಕೂ ಪ್ರೇಮರಾಜನಿಗೂ ನಂಟಿಲ್ಲ: ಪ್ರವೀಣ್ ಸೂದ್

ಮಂಗಳೂರು: ಆಟೊರಿಕ್ಷಾ ಸ್ಫೋಟ ಪ್ರಕರಣಕ್ಕೂ ಹುಬ್ಬಳ್ಳಿಯ ಪ್ರೇಮರಾಜನಿಗೂ ಸಂಬಂಧವಿಲ್ಲ ಎಂದು ರಾಜ್ಯ ಪೊಲೀಸ್ ಮಹಾನಿರ್ದೇಶಕ ಪ್ರವೀಣ್ ಸೂದ್ ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಭಾನುವಾರ ಟ್ವೀಟ್ ಮಾಡಿರುವ ಅವರು, ‘ಪ್ರೇಮರಾಜ ದಾಖಲೆಗಳು ಕಳವಾಗಿದ್ದವು. ಅವರಿಗೂ ಈ ಸ್ಫೋಟಕ್ಕೂ ಸಂಬಂಧ ಇಲ್ಲ’ ಎಂದು ತಿಳಿಸಿದ್ದಾರೆ.

‘ರಿಕ್ಷಾದಲ್ಲಿ ಸಂಭವಿಸಿದ ಲಘು ಸ್ಫೋಟವು ಭಯೋತ್ಪಾದನೆ ಕೃತ್ಯ. ಗಂಭೀರ ಹಾನಿ ಉಂಟು ಮಾಡಲೆಂದೇ ಕೃತ್ಯ ನಡೆಸಲಾಗಿದೆ. ರಾಜ್ಯದ ಪೊಲೀಸರು ಕೇಂದ್ರದ ತನಿಖಾ ಸಂಸ್ಥೆಗಳ ಜೊತೆ ಸೇರಿ ಇದರ ಬಗ್ಗೆ ತನಿಖೆ ನಡೆಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

ಸುಧಾರಿತ ಸ್ಫೋಟ ಸಾಧನ?

‘ಕಡಿಮೆ ತೀವ್ರತೆಯ ಸುಧಾರಿತ ಸ್ಫೋಟ ಸಾಧನವನ್ನು (ಐಇಡಿ) ಕುಕ್ಕರ್‌ನಲ್ಲಿ ಅಳವಡಿಸಿರುವ ಸಾಧ್ಯತೆ ಇದೆ. ಕೃತ್ಯ ನಡೆದ ಸ್ಥಳದಲ್ಲಿ ಕುಕ್ಕರ್ ಬಾಂಬ್ ಸ್ಫೋಟಿಸುವ ಉದ್ದೇಶ ಇದ್ದಂತೆ ಕಾಣುತ್ತಿಲ್ಲ. ಬೇರೆಲ್ಲೋ ಸ್ಫೋಟಿಸಬೇಕಾದ ಬಾಂಬ್ ಗರೋಡಿಯಲ್ಲಿ ಸ್ಫೋಟಿಸಿದೆ’ ಎಂದು ಅಲೋಕ್ ಕುಮಾರ್ ತಿಳಿಸಿದರು.
‘ಮಂಗಳೂರು ಸೂಕ್ಷ್ಮ ಪ್ರದೇಶ. ಇಲ್ಲಿ ಸಾಮರಸ್ಯ ಕೆಡಿಸುವ ಉದ್ದೇಶವೂ ಈ ಕೃತ್ಯದ ಹಿಂದೆ ಇದ್ದಂತಿದೆ’ ಎಂದರು.

‘ಭಾವಚಿತ್ರ ಮಗನದ್ದಲ್ಲ’

ಹುಬ್ಬಳ್ಳಿ: ಮಂಗಳೂರಿನಲ್ಲಿ ಆಟೊ ರಿಕ್ಷಾದಲ್ಲಿ ಸಂಭವಿಸಿದ ಸ್ಫೋಟ ಪ್ರಕರಣ ಸ್ಥಳದಲ್ಲಿ ದೊರೆತ ಆಧಾರ್ ಕಾರ್ಡ್‌ನಲ್ಲಿ ಹೆಸರಿದ್ದ ಪ್ರೇಮರಾಜ ಹುಟಗಿ ಅವರ ಪೋಷಕರನ್ನು ಸ್ಥಳೀಯ ಪೊಲೀಸರು ವಿಚಾರಣೆ ನಡೆಸಿದರು.

ಪೋಷಕರು ಹುಬ್ಬಳ್ಳಿ ಮಧುರಾ ಕಾಲೊನಿಯಲ್ಲಿ ನೆಲೆಸಿದ್ದಾರೆ. ಪ್ರೇಮರಾಜ ಅವರ ತಂದೆ ಮಾರುತಿ ಹುಟಗಿ, ತಾಯಿ ರೇಖಾ ಹಾಗೂ ಸಹೋದರ ಲವರಾಜ ಅವರನ್ನು ಶನಿವಾರ ರಾತ್ರಿಯೇ ಪೊಲೀಸರು ವಿಚಾರಣೆ ನಡೆಸಿ, ಮಾಹಿತಿ ಸಂಗ್ರಹಿಸಿದರು. ‘ವಿಚಾರಣೆ ನಡೆಸಿ, ಮಾಹಿತಿ ಸಂಗ್ರಹಿಸಲಾಗಿದೆ’ ಎಂದು ಪೊಲೀಸ್ ಕಮಿಷನರ್ ಲಾಭೂರಾಮ್ ಹೇಳಿದರು.

ಮಾಧ್ಯಮದವರಿಗೆ ಪ್ರತಿಕ್ರಿಯಿಸಿದ ಮಾರುತಿ ಹುಟಗಿ, ‘ಸ್ಫೋಟದ ಸ್ಥಳದಲ್ಲಿ ಸಿಕ್ಕಿದೆ ಎನ್ನಲಾದ ಆಧಾರ್ ಕಾರ್ಡ್‌ನಲ್ಲಿ ನಮ್ಮ ವಿಳಾಸವಿದೆ. ಅದರಲ್ಲಿರುವ ಭಾವಚಿತ್ರ ನನ್ನ ಮಗನದ್ದಲ್ಲ. ಶನಿವಾರ ರಾತ್ರಿ 8.45ರ ವೇಳೆಗೆ ಪೊಲೀಸ್ ಅಧಿಕಾರಿಗಳು ಮನೆಗೆ ಬಂದು ವಿಚಾರಣೆ ನಡೆಸಿದ್ದಾರೆ. ಅವರ ಪ್ರಶ್ನೆಗಳಿಗೆ ಉತ್ತರಿಸಿದ್ದೇವೆ. ನನ್ನ ಮಗನ ಜೊತೆಯೂ ಮಾತನಾಡಿದ್ದಾರೆ’ ಎಂದರು.

‘ನನ್ನ ಮಗ ಯಾವ ತಪ್ಪೂ ಮಾಡಿಲ್ಲ. ವಿಚಾರಣೆಗೆ ಎಲ್ಲಿಗೆ ಬೇಕಾದರೂ ಬರುತ್ತೇವೆ. ನಾವು ತಪ್ಪೇ ಮಾಡದಿರುವಾಗ, ಯಾಕೆ ಹೆದರಬೇಕು’ ಎಂದು ಪ್ರೇಮರಾಜ ತಾಯಿ ರೇಖಾ ಪ್ರಶ್ನಿಸಿದರು.

‘ಆಧಾರ್ ನನ್ನದಲ್ಲ: ಘಟನೆಗೂ ನನಗೂ ಸಂಬಂಧವಿಲ್ಲ’

ಪ್ರಜಾವಾಣಿ ವಾರ್ತೆ



ಪ್ರೇಮರಾಜ

ತುಮಕೂರು: ಮಂಗಳೂರಿನಲ್ಲಿ ಆಟೊ ರಿಕ್ಷಾದಲ್ಲಿ ಕುಕ್ಕರ್ ಸ್ಫೋಟಗೊಂಡ ಸ್ಥಳದಲ್ಲಿ ದೊರೆತ ಆಧಾರ್ ಕಾರ್ಡ್‌ಗೆ ಸಂಬಂಧಿಸಿದಂತೆ ಪ್ರೇಮರಾಜ ಹುಟಗಿ ಭಾನುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಪೂರವಾಡ್ ಅವರನ್ನು ಭೇಟಿಯಾಗಿ ಮಾಹಿತಿ ನೀಡಿದ್ದಾರೆ.

ಸ್ಫೋಟದ ಸ್ಥಳದಲ್ಲಿ ದೊರೆತ ಆಧಾರ್ ಕಾರ್ಡ್‌ನಲ್ಲಿ ಪ್ರೇಮರಾಜ ಹುಟಗಿ ಹೆಸರಿತ್ತು. ಹಾಗಾಗಿ ಸ್ಪಷ್ಟನೆ ನೀಡಲು ಅವರು ಎಸ್.ಪಿ. ಕಚೇರಿಗೆ ಬಂದಿದ್ದರು.

‘ಎಡಿಜಿಪಿ ಅಲೋಕ್ ಕುಮಾರ್ ಶನಿವಾರ ಕರೆ ಮಾಡಿ ತುಮಕೂರು ಎಸ್.ಪಿ ರಾಹುಲ್ ಕುಮಾರ್ ಶಹಪೂವಾಡ್ ಅವರನ್ನು ಭೇಟಿ ಮಾಡುವಂತೆ ಸೂಚನೆ ನೀಡಿದ್ದರು. ಅವರ ಸಲಹೆಯಂತೆ ಪೊಲೀಸರಿಗೆ ಎಲ್ಲ ಮಾಹಿತಿ ನೀಡಲಾಗಿದೆ. ಘಟನೆಯಲ್ಲಿ ನನ್ನ ಪಾತ್ರ ಇಲ್ಲ. ಸ್ಥಳದಲ್ಲಿ ಸಿಕ್ಕಿರುವ ಆಧಾರ್ ಕಾರ್ಡ್ ಕೂಡ ನನ್ನದಲ್ಲ ಎಂದು ಸ್ಪಷ್ಟಪಡಿಸಿದ್ದೇನೆ’ ಎಂದು ತಿಳಿಸಿದ್ದಾರೆ.

ಹುಬ್ಬಳ್ಳಿಯವರಾದ ಪ್ರೇಮರಾಜ ಮೂರು ವರ್ಷದಿಂದ (2019ರಿಂದ) ತುಮಕೂರಿನಲ್ಲಿ ರೈಲ್ವೆ ಗೇಟ್ ಮ್ಯಾನ್ ಕೆಲಸ ಮಾಡುತ್ತಿದ್ದಾರೆ. ತುಮಕೂರು ತಾಲ್ಲೂಕಿನ ಹಿರೇಹಳ್ಳಿಯಲ್ಲಿ ವಾಸವಾಗಿದ್ದಾರೆ.

‘ಸ್ಫೋಟ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಈ ಹಿಂದೆ ಎರಡು ಬಾರಿ ನನ್ನ ಆಧಾರ್ ಕಾರ್ಡ್ ಕಳೆದಿತ್ತು. ಒಂದು ಬಾರಿ ಹುಬ್ಬಳ್ಳಿಗೆ ಹೋಗುವಾಗ, ಮತ್ತೊಮ್ಮೆ ಸ್ಪರ್ಧಾತ್ಮಕ ಪರೀಕ್ಷೆ ಬರೆಯಲು ಹೊರಟಾಗ ಹುಬ್ಬಳ್ಳಿ-ಹಾವೇರಿ ಮಾರ್ಗದಲ್ಲಿ ಕಾರ್ಡ್ ಕಳೆದಿತ್ತು. ಆದರೆ, ಈ ಬಗ್ಗೆ ದೂರು ನೀಡಿರಲಿಲ್ಲ. ಅದರ ದುರ್ಬಳಕೆಯಾಗಿರುವ ಶಂಕೆ ಇದೆ. ಸ್ಫೋಟದ ಸ್ಥಳದಲ್ಲಿ ದೊರೆತ ಆಧಾರ್ ಕಾರ್ಡ್ ಅಸಲಿಯೋ ಅಥವಾ ನಕಲಿಯೋ ಗೊತ್ತಿಲ್ಲ. ಆದರೆ, ಮಂಗಳೂರಿನಲ್ಲಿ ನಾನು ಆಧಾರ್ ಕಾರ್ಡ್ ಕಳೆದುಕೊಂಡಿರಲಿಲ್ಲ’ ಎಂದು ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.



ಶಂಕಿತ ಆರೋಪಿ ಬಾಡಿಗೆಗೆ ಪಡೆದಿದ್ದ ಮೈಸೂರಿನ ಮೇಟಗಳ್ಳಿಯ ಮನೆಯಲ್ಲಿ ಪೊಲೀಸರು ಪರಿಶೀಲಿಸಿದರು– ಪ್ರಜಾವಾಣಿ ಚಿತ್ರ

ಸ್ಫೋಟ: ಭಯೋತ್ಪಾದನೆ ಕೃತ್ಯ

ಒಂದನೇ ಪುಟದಿಂದ

ಆತನ ಬಗ್ಗೆ ಬಹಳಷ್ಟು ಮಾಹಿತಿ ಕಲೆ ಹಾಕಿದ್ದೇವೆ. ಆತನ ಬಂಧುಗಳನ್ನೂ ಕರೆಸಿಕೊಳ್ಳುತ್ತಿದ್ದೇವೆ. ಅವರು ಖಚಿತಪಡಿಸಿದ ಬಳಿಕವಷ್ಟೇ ಆರೋಪಿ ಗುರುತನ್ನು ಬಹಿರಂಗಪಡಿಸಬಹುದು’ ಎಂದು ಎಡಿಜಿಪಿ ತಿಳಿಸಿದರು.

‘ಆರೋಪಿಗೆ ಯಾರ ಜೊತೆ ಸಂಪರ್ಕ ಇದೆ, ಅವನು ಇಲ್ಲಿಗೆ ಹೇಗೆ ಬಂದ, ಎಲ್ಲಿ ವಾಸ ಇದ್ದ, ಬಾಂಬ್ ಎಲ್ಲಿ ತಯಾರಿಸಲಾಗಿತ್ತು ಎಂಬುದನ್ನು ಪತ್ತೆ ಹಚ್ಚಲು ತಂಡಗಳನ್ನು ರಚಿಸಲಾಗಿದೆ. ಇಲ್ಲಿ ಪ್ರಕರಣದ ತನಿಖೆಗೆ ಎಸಿಪಿ ಪರಮೇಶ್ವರ ಹೆಗಡೆ ಅವರನ್ನು ನೇಮಿಸಲಾಗಿದೆ. ಅವರ ನೇತೃತ್ವದ ತಂಡವು ಬಹಳಷ್ಟು ಮಾಹಿತಿ ಕಲೆಹಾಕಿದೆ. ಕೇಂದ್ರೀಯ ತನಿಖಾ ಏಜೆನ್ಸಿಗಳ ಜೊತೆಗೂ ಸಂಪರ್ಕದಲ್ಲಿದ್ದೇವೆ’ ಎಂದರು.

‘ಆರೋಪಿ ಜೊತೆ ನಂಟು ಇರುವ ಆಧಾರದಲ್ಲಿ ರಾಜ್ಯದಲ್ಲಿ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ’ ಎಂದರು.

ಬಸ್‌ನಲ್ಲಿ ಬಂದಿದ್ದ ಆರೋಪಿ: ಬಿ.ಸಿ. ರೋಡ್ ಕಡೆಯಿಂದ ಬಸ್‌ನಲ್ಲಿ ಬಂದಿದ್ದ ಆರೋಪಿ, ಪಡೀಲ್ ಬಳಿಯ ನಾಗುರಿ ಎಂಬಲ್ಲಿ ಇಳಿದಿದ್ದ. ಅಲ್ಲಿಂದ ರಿಕ್ಷಾದಲ್ಲಿ ಪ್ರಯಾಣಿಸಿದ್ದ. ರಿಕ್ಷಾದಲ್ಲಿ ಅರ್ಧ ಕಿ.ಮೀ ದೂರ ಸಾಗುವಷ್ಟರಲ್ಲೇ ಗರೊಡಿ ಬಳಿ ಇದ್ದ ಕುಕ್ಕರ್ ಬಾಂಬ್ ಸ್ಫೋಟಗೊಂಡಿತ್ತು ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಆರೋಪಿ ಬಳಿ ಪತ್ತೆಯಾದ ಆಧಾರ್ ಕಾರ್ಡ್‌ನಿಂದಾಗಿ ಗೊಂದಲ ಉಂಟಾಗಿತ್ತು. ‘ಆರೋಪಿ ಬೇರೆಯವರ ಆಧಾರ್ ಕಾರ್ಡ್ ಇಟ್ಟು ಕೊಂಡಿರುವ ಸಾಧ್ಯತೆ ಇದೆ’ ಎಂದು ಅಲೋಕ್ ಕುಮಾರ್ ತಿಳಿಸಿದರು.

ಸುದ್ದಿ 2 ನಿಮಿಷ

‘ವಂಚಿಸುವವರ ವಿರುದ್ಧ ಕಾನೂನು’

ಮೈಸೂರು: ‘ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆದು ಮರುಪಾವತಿ ಮಾಡದ ಬುದ್ಧಿವಂತ ರಾಜಕಾರಣಿಗಳಿಗೆ ಚುರುಕು ಮುಟ್ಟಿಸಲು, ವಂಚನೆಗೆ ಕಡಿವಾಣ ಹಾಕಲು ಕಾನೂನು ತರಲು ಚಿಂತನೆ ನಡೆಸಿದ್ದೇವೆ’ ಎಂದು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು.

ರಾಜ್ಯ ಸಹಕಾರ ಮಹಾಮಂಡಳದಿಂದ ಕೆಎಸ್‌ಒಯು ಘಟಿಕೋತ್ಸವ ಭವನದಲ್ಲಿ ಭಾನುವಾರ ನಡೆದ ‘ಸಹಕಾರ ಸಪ್ತಾಹ’ದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

‘ರಾಜಕಾರಣಿಗಳು ಸಾಲ ಪಡೆದು ಅಸಲು ಹಾಗೂ ಬಡ್ಡಿ ಎರಡನ್ನೂ ಪಾವತಿಸುತ್ತಿಲ್ಲ. ಕಿರು ಸಾಲ ಪಡೆದ ರೈತರ ಮುಂದೆ ಪೌರುಷ ತೋರುವ ಬ್ಯಾಂಕ್‌ಗಳು ₹ 600 ಕೋಟಿ ಸಾಲ ಮಾಡಿರುವ ರಾಜಕಾರಣಿ ಒಬ್ಬರಿಂದ ಮೊದಲು ವಸೂಲು ಮಾಡಲಿ’ ಎಂದರು.

‘ಬೆಂಗಳೂರಿನ ರಾಘವೇಂದ್ರ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ₹ 1,270 ಕೋಟಿ ವಂಚನೆ ನಡೆದಿದೆ. ಸಹಕಾರ ಬ್ಯಾಂಕ್‌ಗಳಲ್ಲಿ ಸುಳ್ಳು ಲೆಕ್ಕ ಕೊಡುವ ಸಿಬ್ಬಂದಿ, ಸಿ.ಎ.ಗಳ ವಿರುದ್ಧವೂ ಪ್ರಕರಣ ದಾಖಲಿಸಲಾಗುವುದು’ ಎಂದರು.

‘ಸಹಕಾರ ಬ್ಯಾಂಕ್ ಮೂಲಕ ಶೂನ್ಯ ಬಡ್ಡಿ ದರದಲ್ಲಿ 33 ಲಕ್ಷ ರೈತರಿಗೆ ₹ 24 ಸಾವಿರ ಕೋಟಿ ಸಾಲ ಕೊಡಲಾಗುತ್ತಿದೆ. ₹ 15 ಸಾವಿರ ಕೋಟಿ ಸಾಲವನ್ನು ಇಲಾಖೆಯಿಂದಲೇ ನೀಡಲಾಗುವುದು. ಶೇ 90ರಷ್ಟು ಪ್ರಮಾಣದಲ್ಲಿ ಸಾಲ ಮರುಪಾವತಿಯಾಗುತ್ತಿದ್ದು, ರೈತರು ಪಾವತಿಸದಿದ್ದರೆ ಆಸ್ತಿ ಮುಟ್ಟುಗೋಲು ಹಾಕದಂತೆ ಸೂಚಿಸಲಾಗಿದೆ’ ಎಂದು ಮಾಹಿತಿ ನೀಡಿದರು.

‘ನಂದಿನಿ ಕ್ಷೀರ ಸಮೃದ್ಧಿ ಬ್ಯಾಂಕ್ ಸ್ಥಾಪನೆ ಸಂಬಂಧ ಇದೇ 25 ರಂದು ಭಾರತೀಯ ರಿಸರ್ವ್ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ನಡೆಯಲಿದ್ದು, ಅನುಮೋದನೆ ಸಿಗುವ ಭರವಸೆ ಇದೆ’ ಎಂದು ಹೇಳಿದರು.



‘ರೈತರ ಜೀವ ಉಳಿಸಬಹುದಿತ್ತು’

ಬುಲ್ಡಾನಾ, ಮಹಾರಾಷ್ಟ್ರ (ಪಿಟಿಐ): ನೂತನ ಕೃಷಿ ಕಾಯ್ದೆಗಳನ್ನು ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಜೊತೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡಿದ್ದರೆ 733 ಜೀವಗಳನ್ನು ಉಳಿಸಬಹುದಿತ್ತು ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿಷಾದ ವ್ಯಕ್ತಪಡಿಸಿದರು.

ಭಾರತ್ ಜೋಡೊ ಯಾತ್ರೆಯ ಭಾಗವಾಗಿ ಬುಲ್ಡಾನಾ ಜಿಲ್ಲೆಯ ಭಸ್ತಾನ್ ಗ್ರಾಮದಲ್ಲಿ ರಾಹುಲ್ ಗಾಂಧಿ ಮಾತನಾಡಿದರು. ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿ ಸುದೀರ್ಘ ಕಾಲ ನಡೆಸಿದ ಚಳವಳಿ ವೇಳೆ ಮೃತಪಟ್ಟ ರೈತರಿಗೆ ಸಂತಾಪ ವ್ಯಕ್ತಪಡಿಸಿದರು.

ನ.19 ಅನ್ನು ಕಾಂಗ್ರೆಸ್ ಕಿಸಾನ್ ವಿಜಯ್ ದಿವಸ್ (ರೈತರ ವಿಜಯದ ದಿನ) ವನ್ನಾಗಿ ಆಚರಿಸಿತು. ರೈತರು ಈ ರಾಷ್ಟ್ರದ ಧ್ವನಿಯಾಗಿದ್ದಾರೆ. ಕೃಷಿ ಕಾಯ್ದೆಗಳು ರೈತರ ವಿರೋಧಿಯಾಗಿದ್ದವು. ಹಾಗಾಗಿ ಅವರು ದೆಹಲಿಯ ಹೊರಭಾಗದಲ್ಲಿ ಪ್ರತಿಭಟನೆ ನಡೆಸಿದರು. ಆದರೆ, ಪ್ರಧಾನಿ ಅವರು ರೈತರ ಬೇಡಿಕೆಗಳನ್ನು ನಿರ್ಲಕ್ಷಿಸಿದರು. ಕೃಷಿ ಕಾಯ್ದೆಗಳು ಕೆಲವು ಉದ್ಯಮಿಗಳಿಗೆ ಅನುಕೂಲ ಮಾಡಿಕೊಡುವಂತವುಗಳಾಗಿದ್ದವು ಎಂದು ರಾಹುಲ್ ಹೇಳಿದರು.

ಬಳ್ಳಾರಿಯ ವಾಲ್ಮೀಕಿ ವೇದಿಕೆಯಲ್ಲಿ ಚುನಾವಣೆ ರಣಕಹಳೆ

ಒಂದನೇ ಪುಟದಿಂದ...

ನಗರದ ಹೊರ ವಲಯದ 130 ಎಕರೆಯಲ್ಲಿ ಹಾಕಿದ್ದ ಮುಖ್ಯ ಪೆಂಡಾಲ್‌ನಲ್ಲಿ ಭಾರೀ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದವರು ಜಮಾಯಿಸಿದ್ದರು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಅರ್ಜುನ್ ಮುಂಡಾ, ಪ್ರಲ್ಹಾದ ಜೋಶಿ, ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಮತ್ತು ಪರಿಶಿಷ್ಟ ಪಂಗಡದ ನಾಯಕರೂ ಆದ ಸಚಿವ ಬಿ. ಶ್ರೀರಾಮುಲು ಅವರ ಮಾತುಗಳಿಗೆ ಜನರು ಘೋಷಣೆಗಳನ್ನು ಕೂಗಿ ಸ್ಪಂದಿಸಿದರು.

‘ನರೇಂದ್ರ ಮೋದಿ ಮತ್ತು ಬಸವರಾಜ ಬೊಮ್ಮಾಯಿ ಅವರ ಸರ್ಕಾರ ನಿಮ್ಮ ಬದುಕನ್ನು ಬದಲಾಯಿಸುವ ಕೆಲಸ ಮಾಡುತ್ತಿದ್ದು, ಇವೆರಡೂ ಸರ್ಕಾರದ ಪರ ನಿಲ್ಲಬೇಕು. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಆಶೀರ್ವದಿಸಬೇಕು. ಇದುವರೆಗೆ ಮತ ಬ್ಯಾಂಕ್ ರಾಜಕಾರಣ ಮಾಡಿ ನಿಮ್ಮನ್ನು ವಂಚಿಸಿದ ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಬೇಕು’ ಎಂದು ನಡ್ಡಾ ಮನವಿ ಮಾಡಿದರು.

‘ಕೇಂದ್ರದಲ್ಲಿ ಪರಿಶಿಷ್ಟ ಪಂಗಡದ ಮೀಸಲು ಹೆಚ್ಚಳ ಮಾಡಿದ ಮೋದಿ ಅವರಿಂದ ಪ್ರೇರಣೆ ಪಡೆದು ರಾಜ್ಯದಲ್ಲೂ ತೀರ್ಮಾನ ಮಾಡಲಾಗಿದೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.

‘ಇಷ್ಟು ವರ್ಷ ಆಡಳಿತ ನಡೆಸಿದ ಕಾಂಗ್ರೆಸ್ ಬಡತನ ನಿವಾರಿಸುವ ಕೆಲಸ ಮಾಡಿದೆಯಾ; ಪರಿಶಿಷ್ಟರಿಗೆ ಸ್ವಾಭಿಮಾನದ ಬದುಕು ಕೊಟ್ಟಿದೆಯಾ; ಮೀಸಲಾತಿ ಹೆಚ್ಚಳ ಮಾಡಿದೆಯಾ’ ಎಂದು ಬೊಮ್ಮಾಯಿ ಪ್ರಶ್ನಿಸಿದಾಗ, ಸಭಿಕರು ‘ಇಲ್ಲ, ಇಲ್ಲ’ ಎಂಬ ಉತ್ತರ ಕೊಟ್ಟರು.

‘ಬಳ್ಳಾರಿ ಸಮಾವೇಶ ನೋಡಿ ಕಾಂಗ್ರೆಸ್ ನಾಯಕರಿಗೆ ಆಘಾತವಾಗಿದೆ. ಮುಂದಿನ ವಿಧಾನಸಭೆ ಚುನಾವಣೆಯಲ್ಲಿ 140 ರಿಂದ 150 ಕ್ಷೇತ್ರಗಳಲ್ಲಿ ಬಿಜೆಪಿ ಗೆಲ್ಲಿಸಿ. ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯಲ್ಲಿ ಒಟ್ಟು 10 ಕ್ಷೇತ್ರಗಳಿದ್ದು, ಎಲ್ಲೆಡೆ ಬಿಜೆಪಿ ಆರಿಸಿ’ ಎಂದು ಹಿರಿಯ ಮುಖಂಡ ಬಿ.ಎಸ್. ಯಡಿಯೂರಪ್ಪ ಕಾರ್ಯಕರ್ತರಿಗೆ ಮನವಿ ಮಾಡಿದರು.



ಬಳ್ಳಾರಿಯಲ್ಲಿ ಭಾನುವಾರ ನಡೆದ ಬಿಜೆಪಿ ಎಸ್‌ಟಿ ಸಮುದಾಯದ ರಾಜ್ಯ ಮಟ್ಟದ ಸಮಾವೇಶದಲ್ಲಿ ಪಕ್ಷದ ಮುಖಂಡರು ಬಿಲ್ಲುಗಳನ್ನು ಹಿಡಿದು ಬಾಣಗಳನ್ನು ಬಿಟ್ಟರು. ಸಚಿವ ಬಿ.ಶ್ರೀರಾಮುಲು, ಆನಂದಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕ ಬಿ.ಎಸ್. ಯಡಿಯೂರಪ್ಪ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ, ಕೇಂದ್ರ ಸಚಿವರಾದ ಅರ್ಜುನ್ ಮುಂಡಾ, ಪ್ರಲ್ಹಾದ ಜೋಶಿ, ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್ ಸಿಂಗ್ ಇದ್ದಾರೆ –ಪ್ರಜಾವಾಣಿ ಚಿತ್ರ

‘ಇಲ್ಲಿದೆ ಅಹಿಂದ ಸಿದ್ದರಾಮಣ್ಣ’

‘ಎಲ್ಲಿದೆ ಅಹಿಂದ ಸಿದ್ದರಾಮಣ್ಣ...ಇಲ್ಲಿದೆ ಅಹಿಂದ ನೋಡು ಬಾ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯರನ್ನು ಸಮಾವೇಶದಲ್ಲಿ ಲೇವಡಿ ಮಾಡಿದರು.

‘ಅಹಿಂದ ಹೆಸರಲ್ಲಿ ರಾಜಕೀಯ ಮಾಡುವಿರಾ; ವೋಟ್ ಬ್ಯಾಂಕ್‌ಗಳಾಗಿ ಈ ಸಮುದಾಯಗಳನ್ನು ಬಳಸಿಕೊಳ್ಳುತ್ತೀರಾ; ಇನ್ನು ಮುಂದೆ ನಾಟಕ ನಡೆಯೋಲ್ಲ; ಸುಳ್ಳು ಭರವಸೆಗಳು ನಡೆಯೋಲ್ಲ; ಜನರಿಗೆ ನಿಮ್ಮ ಮೋಸ ಗೊತ್ತಾಗಿದೆ’ ಎಂದು ಬೊಮ್ಮಾಯಿ ಕಾಲೆಳೆದರು.

‘60 ವರ್ಷ ದಲಿತರು, ಶೋಷಿತರು, ಬಡವರು, ಮಹಿಳೆಯರಿಗೆ ನೀವು ಮೋಸ ಮಾಡಿದ್ದೀರಿ; ಶೋಷಣೆ ಮಾಡಿದ್ದೀರಿ; ಅಹಿಂದ ಸಮುದಾಯ ಮತ್ತು ಮಹಿಳೆಯರ ಶಾಪ ನಿಮಗೆ ತಟ್ಟುತ್ತದೆ’ ಎಂದು ಕುಟುಕಿದರು.

ಪರಿಶಿಷ್ಟ ಪಂಗಡದ ಸಮಾವೇಶದ ಕೇಂದ್ರ ಬಿಂದು ಸಚಿವ ಬಿ. ಶ್ರೀರಾಮುಲು ಅತೀ ಭಾವವೇಶ ಪ್ರದರ್ಶಿಸಿದರು. ಕಾಂಗ್ರೆಸ್ ನಾಯಕರು ಅದರಲ್ಲೂ ಸಿದ್ದರಾಮಯ್ಯನವರ ವಿರುದ್ಧ ತೋಳೇರಿಸಿದರು. ಒಂದು ಹಂತದಲ್ಲಿ ಹೆಗಲ ಮೇಲಿದ್ದ ಶಲ್ಯವನ್ನು ತೆಗೆದು ತಲೆಗೆ ಸುತ್ತಿಕೊಂಡು, ‘ನನ್ನನ್ನು ಹಾಸ್ಯ ಮಾಡುತ್ತೀರಾ; ಲೇವಡಿ ಮಾಡುತ್ತೀರಾ; ತಾಕತ್ತಿದ್ದರೆ ಬರ್‍ರಲ್ಲಾ ನೋಡೋಣ; ನಾವೇನು ಬಳೆ ತೊಟ್ಕೊಂಡಿಲ್ಲ’ ಎಂದು ತೋಳೇರಿಸುತ್ತಿದ್ದಂತೆ ಅವರ ಬೆಂಬಲಿಗರ ಕೇಕೆ, ಶಿಳ್ಳೆ ಮುಗಿಲು ಮುಟ್ಟಿತ್ತು.

ಜಯತೀರ್ಥಾಚಾರ್ಯ ಮಳಗಿ ನಿಧನ



ಧಾರವಾಡ: ಹಿರಿಯ ವಿದ್ವಾಂಸ, ಪ್ರವಚನಕಾರ ಪಂ. ಡಾ. ಜಯತೀರ್ಥಾಚಾರ್ಯ ಮಳಗಿ (73) ಭಾನುವಾರ ನಿಧನರಾದರು. ಅವರಿಗೆ ಮಗ ಹಾಗೂ ಮಗಳು ಇದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದ ಅವರು ವೇದವ್ಯಾಸ ವಿದ್ಯಾಪೀಠದ ಸ್ಥಾಪಕ ಅಧ್ಯಕ್ಷ, ಧಾರ್ಮಿಕ ಪತ್ರಿಕೆಗಳ ಸಂಪಾದಕರೂ ಆಗಿದ್ದರು. ಧಾರವಾಡ ನಗರವನ್ನು ಮಾಧ್ವ ಸಿದ್ಧಾಂತದ ಮಹಾಕೇಂದ್ರವನ್ನಾಗಿ ರೂಪಿಸಿದ ಮಹನೀಯರಲ್ಲಿ ಪ್ರಮುಖರಾಗಿದ್ದಾರೆ.

ಶ್ರೀಸತ್ಯಧ್ಯಾನರು, ಶ್ರೀಸತ್ಯಧ್ಯಾನರ ನುಡಿಮುತ್ತುಗಳು, ಕುಲಪತಿ, ಕ್ಷೇಮೇಂದ್ರನ ಸುಭಾಷಿತಗಳು, ಲೇಖನ ತರಂಗಿಣಿ, ಷಟ್ ಪ್ರಶ್ನೋಪನಿಷತ್ತು, ಪ್ರಮೋದ ತರಂಗಿಣಿ, ಸತ್ಯಧ್ಯಾನ ಜೀವನ ರಶ್ಮಿ ಸೇರಿದಂತೆ 40ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದಾರೆ.

ಇತ್ತೀಚೆಗೆ ನಡೆದ ಅಖಿಲ ಭಾರತ ಮಾಧ್ವತತ್ವಜ್ಞಾನ ಸಮ್ಮೇಳನದ 29ನೇ ಅಧಿವೇಶನದ ಸಮ್ಮೇಳನಾಧ್ಯಕ್ಷರಾಗಿದ್ದ ಡಾ.ಮಳಗಿ ಅವರಿಗೆ ಹಲವು ಪ್ರಶಸ್ತಿಗಳು ಸಂದಿವೆ. ಹೊಸಯಲ್ಲಾಪುರ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

‘ಮೀಸಲಾತಿ ಪರ ಹೇಳಿಕೆ ನೀಡುವಾಗ ಎಚ್ಚರದಿಂದ ಇರಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಪಂಚಮಸಾಲಿ ಲಿಂಗಾಯತರು, ಒಕ್ಕಲಿಗರು, ಕುರುಬರು ಹೀಗೆ ವಿವಿಧ ಸಮುದಾಯದವರ ಮೀಸಲಾತಿ ಬೇಡಿಕೆಗೆ ಸಂಬಂಧಿಸಿದಂತೆ ಹೇಳಿಕೆ ನೀಡುವಾಗ ತುಂಬಾ ಎಚ್ಚರಿಕೆಯಿಂದ ಇರಬೇಕು’ ಎಂದು ಕಾಂಗ್ರೆಸ್ ವರಿಷ್ಠರು ಕರ್ನಾಟಕದ ನಾಯಕರಿಗೆ ಸೂಚನೆ ನೀಡಿದ್ದಾರೆ.

ಭ್ರಷ್ಟಾಚಾರ, ಶೇ 40 ಕಮಿಷನ್ ಆರೋಪ, ನೇಮಕಾತಿ ಹಗರಣ, ಪ್ರವಾಹ ಪರಿಸ್ಥಿತಿ ನಿರ್ವಹಣೆಯಲ್ಲಿನ ವೈಫಲ್ಯ, ದುರಾಡಳಿತ ಸೇರಿದಂತೆ ವಿವಿಧ ವಿಚಾರಗಳನ್ನು ಮುಂದಿಟ್ಟುಕೊಂಡು ರಾಜ್ಯ ನಾಯಕರು ಆಡಳಿತಾರೂಢ ಬಿಜೆಪಿ ಮೇಲೆ ವಾಗ್ದಾಳಿ ನಡೆಸುತ್ತಿದ್ದು, ಇದನ್ನು ಮುಂದುವರಿಸುವಂತೆ ವರಿಷ್ಠರು ತಾಕೀತು ಮಾಡಿದ್ದಾರೆ.

‘ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ ಲಿಂಗಾಯತರಿಗೆ ಪ್ರತ್ಯೇಕ ಧರ್ಮದ ಸ್ಥಾನಮಾನ ನೀಡುವ ನಿರ್ಣಯ ಕೈಗೊಳ್ಳಲಾಗಿತ್ತು. ನಂತರದ ಚುನಾವಣೆಯಲ್ಲಿ ಪಕ್ಷಕ್ಕೆ ಸೋಲು ಎದುರಾಗಿತ್ತು. ಈ ಬಾರಿ ಅಂತಹ ತಪ್ಪಿಗೆ ಅವಕಾಶ ನೀಡದಂತೆ ಎಚ್ಚರವಹಿಸಬೇಕಿದೆ’ ಎಂದು ತಿಳಿಸಿದ್ದಾರೆ.

ವಿವಿಧ ಟ್ಯಾಂಕ್‌ಗಳಲ್ಲಿ ನೀರು ಕುಡಿದ ಪರಿಶಿಷ್ಟರು

ಹೆಗ್ಗೋಠಾರ ಪ್ರಕರಣ: ಎಫ್‌ಐಆರ್

ಚಾಮರಾಜನಗರ: ತಾಲ್ಲೂಕಿನ ಹೆಗ್ಗೋಠಾರ ಗ್ರಾಮದಲ್ಲಿ ಪರಿಶಿಷ್ಟ ಮಹಿಳೆ ನೀರು ಕುಡಿದರು ಎಂಬ ಕಾರಣಕ್ಕೆ ಕಿರು ನೀರು ಸರಬರಾಜು ಟ್ಯಾಂಕ್‌ನ ನೀರು ಖಾಲಿ ಮಾಡಿ, ಶುದ್ಧೀಕರಣಗೊಳಿಸಿದ ಪ್ರಕರಣಕ್ಕೆ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಭಾನುವಾರ ಪ್ರಕರಣ ದಾಖಲಾಗಿದೆ.

ಗ್ರಾಮದ ಪರಿಶಿಷ್ಟ ಸಮುದಾಯದ ಮುಖಂಡ ಗಿರಿಯಪ್ಪ ದೂರು ನೀಡಿದ್ದು, ಅದೇ ಗ್ರಾಮದ ವೀರಶೈವ ಮುಖಂಡ ಮಹದೇವಪ್ಪ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಆರೋಪಿ ತಲೆಮರೆಸಿಕೊಂಡಿದ್ದಾರೆ.

ಮಾಧ್ಯಮಗಳಲ್ಲಿ ವರದಿ ಪ್ರಕಟವಾಗುತ್ತಿದ್ದಂತೆ ಕಂದಾಯ, ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಗ್ರಾಮಕ್ಕೆ ಭಾನುವಾರ ತೆರಳಿ ಸ್ಥಳೀಯರಿಂದ ಮಾಹಿತಿ ಪಡೆದರು. ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್, ತಹಶೀಲ್ದಾರ್ ಐ.ಇ.ಬಸವರಾಜು, ತಾಲ್ಲೂಕು, ಗ್ರಾ.ಪಂ. ಅಧಿಕಾರಿಗಳು ಸಮುದಾಯದ ಮುಖಂಡರೊಂದಿಗೆ ಸಭೆ ನಡೆಸಿದರು.

ವಿವಿಧ ಬೀದಿಗಳಲ್ಲಿರುವ ಟ್ಯಾಂಕ್‌ಗಳ ನೀರನ್ನು ಪರಿಶಿಷ್ಟ ಜಾತಿಯವರು ಕುಡಿಯುವಂತೆ ಮಾಡಿ, ‘ಅಸ್ಪೃಶ್ಯತೆ ಆಚರಣೆಗೆ ಅವಕಾಶ ನೀಡುವುದಿಲ್ಲ’ ಎಂಬ ಸಂದೇಶ ನೀಡಿದರು.

ದೂರಿನಲ್ಲೇನಿದೆ?: ‘ನ.18ರಂದು ಗ್ರಾಮದಲ್ಲಿ ಪರಿಶಿಷ್ಟ ಜಾತಿಯ ಯುವಕನ ಮದುವೆಗೆ ಬಂದಿದ್ದ ಶಿವಮ್ಮ (ಮಹದೇವಮ್ಮ) ಊಟ ಮುಗಿಸಿ ಹೋಗುವಾಗ ಕೃಷ್ಣರಾಯ ದೇವಸ್ಥಾನದ ಬಳಿಯ ತೊಂಬೆಗೆ (ನೀರಿನ ಟ್ಯಾಂಕ್) ಹೋಗಿ ನೀರು ಕುಡಿದರು. ಆಗ, ವೀರಶೈವ ಮುಖಂಡ ಮಹದೇವಪ್ಪ (ಪಟ್ಟವಾಡಿ), ‘ನೀನು ಯಾವ ಜನಾಂಗದ ಮಹಿಳೆ’ ಎಂದು ಕೇಳಿದಾಗ ಶಿವಮ್ಮ, ತಾನು ಪರಿಶಿಷ್ಟ ಜನಾಂಗದ ಮಹಿಳೆ ಎಂದು ಹೇಳಿದರು. ಆಗ ಮಹದೇವಪ್ಪ, ‘ಇದು ವೀರಶೈವರಿಗೆ ಸೇರಿದ ತೊಂಬೆ. ನೀವು ದಲಿತರು. ಇಲ್ಲಿ ನೀರು ಕುಡಿದು ನಮ್ಮ ತೊಂಬೆಗಳನ್ನು ಮಲಿನ ಮಾಡಿದ್ದೀರಾ’ ಎಂದು ಗಲಾಟೆ ಮಾಡಿ ಜಾತಿ ನಿಂದನೆ ಮಾಡಿರುವುದು ಕಂಡುಬಂದಿದೆ’ ಎಂದು ಗಿರಿಯಪ್ಪ ದೂರಿನಲ್ಲಿ ತಿಳಿಸಿದ್ದಾರೆ.

ಟ್ಯಾಂಕ್‌ನ ನೀರು ಖಾಲಿ ಮಾಡಿಸಿ, ಶುದ್ಧೀಕರಣ ಮಾಡಿರುವ ಅಂಶವನ್ನು ದೂರಿನಲ್ಲಿ ಉಲ್ಲೇಖಿಸಿಲ್ಲ.

‘ಶಿವಮ್ಮ ಎಂಬ ಮಹಿಳೆಗೆ ಜಾತಿ ನಿಂದನೆ ಮಾಡಿದ್ದು, ಅವರು ಎಚ್.ಡಿ.ಕೋಟೆ ತಾಲ್ಲೂಕಿನ ಸರಗೂರಿನ ಯಶವಂತಪುರದವರು. ಅವರನ್ನು ಸೋಮವಾರ ಕರೆತರಲು ಪ್ರಯತ್ನಿಸುತ್ತೇವೆ’ ಎಂದು ಪರಿಶಿಷ್ಟ ಸಮುದಾಯದ ಮುಖಂಡ ಕುಮಾರ್ ತಿಳಿಸಿದರು.



ಹೆಗ್ಗೋಠಾರ ಗ್ರಾಮದಲ್ಲಿ ಅಧಿಕಾರಿಗಳ ಸಮ್ಮುಖದಲ್ಲಿ ಪರಿಶಿಷ್ಟ ಸಮುದಾಯವದರು ಟ್ಯಾಂಕ್ ನೀರು ಕುಡಿದರು

26ಕ್ಕೆ 8 ನ್ಯಾನೊ ಉಪಗ್ರಹಗಳ ಉಡಾವಣೆ

ಬೆಂಗಳೂರು: ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಇದೇ 26ರಂದು ಎಂಟು ನ್ಯಾನೊ ಉಪಗ್ರಹಗಳನ್ನು ಉಡಾವಣೆ ಮಾಡಲಿದೆ.

ಪಿಎಸ್‌ಎಲ್‌ವಿ-ಸಿ54/ಇಒಎಸ್-06 ಮೂಲಕ ಇವುಗಳ ಜತೆಗೆ ‘ಓಶಿಯನ್‌ಸ್ಯಾಟ್-3’ ಉಡಾವಣೆಗೂ ಉದ್ದೇಶಿಸಲಾಗಿದೆ. ಶ್ರೀಹರಿಕೋಟಾದ ಸತೀಶ್ ಧವನ್ ಉಡ್ಡಯನ ಕೇಂದ್ರದಿಂದ ಶನಿವಾರ ಬೆಳಿಗ್ಗೆ 11.46ಕ್ಕೆ ಉಪಗ್ರಹಗಳ ಉಡಾವಣೆ ಆಗಲಿವೆ. 8 ನ್ಯಾನೊ ಉಪಗ್ರಹದಲ್ಲಿ ಭೂತಾನ್ ಉಪಗ್ರಹವೂ ಸೇರಿದೆ ಎಂದು ಇಸ್ರೊ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರಪತಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಇಲ್ಲಿಯ ಸೇನಾ ಆಸ್ಪತ್ರೆಯಲ್ಲಿ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಭಾನುವಾರ ಒಳಗಾದರು.

‘ರಾಷ್ಟ್ರಪತಿ ಬಲಗಣ್ಣಿನ ಪೊರೆ ಶಸ್ತ್ರಚಿಕಿತ್ಸೆಗೆ ಒಳಗಾದರು. ಶಸ್ತ್ರಚಿಕಿತ್ಸೆಯು ಯಶಸ್ವಿಯಾಗಿ ನಡೆಯಿತು ಮತ್ತು ಅವರು ಆಸ್ಪತ್ರೆಯಿಂದ ಬಿಡುಗಡೆಗೊಂಡರು’ ಎಂದು ರಾಷ್ಟ್ರಪತಿ ಭವನ ತಿಳಿಸಿದೆ.

ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ: ಎಚ್‌ಡಿಕೆ ಭರವಸೆ

ದೇಗುಲದಲ್ಲಿ ಊಟ: ಟೆಂಟ್‌ನಲ್ಲಿ ನಿದ್ರೆ

ಪ್ರಜಾವಾಣಿ ವಾರ್ತೆ

ಕೋಲಾರ: ಜೆಡಿಎಸ್‌ನ ಮಹತ್ವಾಕಾಂಕ್ಷೆಯ ‘ಪಂಚರತ್ನ’ ಯೋಜನೆಗಳನ್ನು ಜನರಿಗೆ ಮನದಟ್ಟು ಮಾಡಲು ಗ್ರಾಮಗಳಿಗೆ ತೆರಳುತ್ತಿರುವ ಎಚ್.ಡಿ.ಕುಮಾರಸ್ವಾಮಿ ಶನಿವಾರ ರಾತ್ರಿ ಬಂಗಾರಪೇಟೆ ತಾಲ್ಲೂಕಿನ ಮಾಗೇರಿ ಹಾಗೂ ಭಾನುವಾರ ರಾತ್ರಿ ಮಾಲೂರು ತಾಲ್ಲೂಕಿನ ಶಿವಾರಪಟ್ಟಣದಲ್ಲಿ ಗ್ರಾಮ ವಾಸ್ತವ್ಯ ನಡೆಸಿದರು.

ಮಾಗೇರಿಯಲ್ಲಿ ಮಧ್ಯ ರಾತ್ರಿಯವರೆಗೆ ನಡೆದ ಸಂವಾದದ ವೇಳೆ ರೈತರು ಬೆಳೆ ನಷ್ಟ ಪರಿಹಾರ ಸಿಕ್ಕಿಲ್ಲವೆಂದು ದೂರಿದರೆ, ಪಿಂಚಣಿ, ಮಾಸಾಶನ ಸಿಕ್ಕಿಲ್ಲವೆಂದು ವೃದ್ಧರು, ಅಂಗವಿಕಲರು ಸಮಸ್ಯೆ ಹೇಳಿಕೊಂಡರು. ವೆಂಕಟರಮಣ ದೇಗುಲದಲ್ಲಿ ಮುದ್ದೆ, ಅವರೆಕಾಳು ಸಾರಿನ ಊಟ ಮಾಡಿ ಟೆಂಟ್‌ನಲ್ಲಿ ಮಲಗಿದರು.

ಬೆಳಿಗ್ಗೆ ದೇವರ ದರ್ಶನದ ಬಳಿಕ ಪಕ್ಷದ ಸಂಭವನೀಯ ಅಭ್ಯರ್ಥಿಗಳನ್ನು ಪಂಚರತ್ನ ವಾಹನದಲ್ಲಿ ಅಕ್ಕಪಕ್ಕದಲ್ಲಿ ನಿಲ್ಲಿಸಿಕೊಂಡು ಮಾಲೂರು ತಾಲ್ಲೂಕಿನತ್ತ ತೆರಳಿದರು. ಕೆಂಪಸಂದ್ರ ಗ್ರಾಮದ ಬಳಿ ದಾರಿಯಲ್ಲಿ ವೃದ್ಧರೊಬ್ಬರು ಕಾರು ಅಡ್ಡಹಾಕಿ ಹಸ್ತಲಾಘವ ನೀಡಿದರು. ಕಾರ್ಯಕರ್ತರು ಕಾರು ಹಾಗೂ ದ್ವಿಚಕ್ರ ವಾಹನಗಳಲ್ಲಿ ಹಿಂಬಾಲಿಸಿದರು.

ಭಾನುವಾರ ಮಾಸ್ತಿಯಲ್ಲಿ ಸೇರಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದ ಕುಮಾರಸ್ವಾಮಿ, ‘2023ರ ವಿಧಾನಸಭೆ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ಬಂದರೆ 24 ಗಂಟೆಗಳಲ್ಲಿ ಸ್ತ್ರೀಶಕ್ತಿ ಸಂಘಗಳ ಸಾಲ ಮನ್ನಾ ಮಾಡುತ್ತೇನೆ. ವೃದ್ಧರಿಗೆ ಪ್ರತಿ ತಿಂಗಳು ₹5 ಸಾವಿರ, ವಿಧವೆಯರಿಗೆ ಹಾಗೂ ಅಂಗವಿಕಲರಿಗೆ ತಲಾ ₹ 2,500 ಮಾಸಾಶನ ಕೊಡುತ್ತೇನೆ’ ಎಂದು ಭರವಸೆ ನೀಡಿದರು.

‘ಕೊರೆವ ಚಳಿಯಲ್ಲೂ, ರಾತ್ರಿ 10 ಗಂಟೆಯಾದರೂ ಮಕ್ಕಳು, ಮಹಿಳೆಯರು, ಯುವಕರು ಪಂಚರತ್ನ ರಥಯಾತ್ರೆಯಲ್ಲಿ ಭಾಗಿಯಾಗುತ್ತಿದ್ದಾರೆ. ಇದು ನನ್ನ ಮುಂದಿನ ನೂರು ದಿನಗಳ ಹೋರಾಟಕ್ಕೆ ಉತ್ಸಾಹ ತುಂಬಿದೆ’ ಎಂದರು.



ಕೋಲಾರದ ಮಾಲೂರು ತಾಲ್ಲೂಕಿನಲ್ಲಿ ಮಹಿಳೆಯೊಬ್ಬರು ಎಚ್‌.ಡಿ.ಕುಮಾರಸ್ವಾಮಿ ಅವರಿಗೆ ತಿಲಕ ಇಟ್ಟರು

ಮುಖ್ಯಾಂಶಗಳು
- ಎಚ್‌.ಡಿ.ಕುಮಾರಸ್ವಾಮಿ ಗ್ರಾಮ ವಾಸ್ತವ್ಯ
- ಮಾಗೇರಿಯಲ್ಲಿ ಮಧ್ಯರಾತ್ರಿ ವರೆಗೆ ಜನರೊಂದಿಗೆ ಸಂವಾದ
- ‘ವೃದ್ಧರಿಗೆ ₹5000, ವಿಧವೆಯರಿಗೆ ₹2,500 ಮಾಸಾಶನ’

ಪ್ರಜಾ ಮತ
ಜನತಂತ್ರದ ಹಬ್ಬ 2022

ಇಡಬ್ಲ್ಯುಎಸ್ ಮೀಸಲಿನಿಂದ ಸಮಸ್ಯೆ ಪರಿಹಾರ: ಹಾರ್ದಿಕ್

ಅಹಮದಾಬಾದ್ (ಪಿಟಿಐ): ಆರ್ಥಿಕವಾಗಿ ದುರ್ಬಲ ವರ್ಗಗಳ (ಇಡಬ್ಲ್ಯುಎಸ್) ಜನರಿಗೆ ಶೇ 10ರಷ್ಟು ಮೀಸಲಾತಿ ಕಲ್ಪಿಸುವ ಕೇಂದ್ರದ ನಿರ್ಧಾರದಿಂದಾಗಿ ಗುಜರಾತ್‌ನ ಪಟೇಲ್ ಸಮುದಾಯದ ಹಲವು ಸಮಸ್ಯೆಗಳು ಪರಿಹಾರ ಆಗಿವೆ. ಹಾಗಾಗಿ, ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿಯೇ ಗೆಲ್ಲುವಂತೆ ಈ ಸಮುದಾಯ ನೋಡಿಕೊಳ್ಳಲಿದೆ ಎಂದು ಬಿಜೆಪಿ ಮುಖಂಡ ಹಾರ್ದಿಕ್ ಪಟೇಲ್ ಭಾನುವಾರ ಹೇಳಿದ್ದಾರೆ.

ಪಾಟೀದಾರ್ ಸಮುದಾಯವು 2015ರಲ್ಲಿ ನಡೆಸಿದ ಮೀಸಲಾತಿ ಹೋರಾಟದ ನೇತೃತ್ವವನ್ನು ಹಾರ್ದಿಕ್ ವಹಿಸಿಕೊಂಡಿದ್ದರು. ವಿಧಾನಸಭೆಗೆ 2017ರಲ್ಲಿ ನಡೆದ ಚುನಾವಣೆಯಲ್ಲಿ ಸುಮಾರು 20 ಕ್ಷೇತ್ರಗಳಲ್ಲಿ ಈ ಹೋರಾಟವು ಪ್ರಭಾವ ಬೀರಿತ್ತು ಎಂದು ಹಾರ್ದಿಕ್ ಹೇಳಿದ್ದಾರೆ. 2017ರ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಪಕ್ಷದಲ್ಲಿದ್ದರು.

ಚುನಾವಣೆಯಲ್ಲಿ ಸ್ಪರ್ಧಿಸಲು ಎಎಪಿಗೆ ಮುಕ್ತ ಅವಕಾಶ ಇದೆ. ಆದರೆ, ಆ ಪಕ್ಷದ ನಾಯಕರೊಬ್ಬರು ವಿಷ್ಣು ಮತ್ತು ಮಹೇಶ ದೇವರ ವಿರುದ್ಧ ಆಡಿರುವ ಮಾತಿನಿಂದ ಗುಜರಾತಿನ ಜನರ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ' ಎಂದು ಅವರು ಹೇಳಿದರು.

ಎಎಪಿಯಿಂದ ಬಿಜೆಪಿಗೆ ಸವಾಲೇನೂ ಇಲ್ಲ. ದೂರದ ಪ್ರತಿಸ್ಪರ್ಧಿಯಾಗಿ ಇರುವುದು ಕಾಂಗ್ರೆಸ್ ಮಾತ್ರ. ಕಾಂಗ್ರೆಸ್ ಎರಡನೇ ಸ್ಥಾನ ಪಡೆಯಲಿದೆ
ಹಾರ್ದಿಕ್ ಪಟೇಲ್, ಬಿಜೆಪಿ ಮುಖಂಡ

'ಮೊದಲಿನಿಂದಲೂ ಬಿಜೆಪಿ ಮನಃಸ್ಥಿತಿಯೇ'

ಕಾಂಗ್ರೆಸ್ ತೊರೆದು ಬಿಜೆಪಿ ಸೇರಿದ ಬಗ್ಗೆ ಮಾತನಾಡಿದ ಹಾರ್ದಿಕ್ ಪಟೇಲ್, ತಮ್ಮದು ಮೊದಲಿನಿಂದಲೂ ಬಿಜೆಪಿ ಮನಃಸ್ಥಿತಿಯೇ. ತಮ್ಮ ಸಿದ್ಧಾಂತವು ಹಿಂದುತ್ವ ಮತ್ತು ರಾಷ್ಟ್ರೀಯವಾದಕ್ಕೆ ಹತ್ತಿರವಾದುದು ಎಂದಿದ್ದಾರೆ.

'ಭಾರತ್ ಜೋಡೊ ಯಾತ್ರೆ'ಯಲ್ಲಿ ಮೇಧಾ ಪಾಟ್ಕರ್ ಭಾಗವಹಿಸಿದ್ದಕ್ಕೆ ಪ್ರಧಾನಿ ಮೋದಿ ಟೀಕೆ

'ಕಾಂಗ್ರೆಸ್‌ಗೆ ಮತ ಕೇಳುವ ಹಕ್ಕಿಲ್ಲ'

ಧೊರಾಜಿ, ವೆರಾವಲ್ (ಗುಜರಾತ್) (ಪಿಟಿಐ): ಗುಜರಾತ್‌ನಲ್ಲಿ ಮತ ಕೇಳಲು ಕಾಂಗ್ರೆಸ್ ಪಕ್ಷಕ್ಕೆ ಯಾವುದೇ ನೈತಿಕತೆ ಇಲ್ಲ. ನರ್ಮದಾ ಅಣೆಕಟ್ಟು ಯೋಜನೆಯನ್ನು ಮೂರು ದಶಕಗಳಷ್ಟು ವಿಳಂಬ ಮಾಡಿದ ಮಹಿಳೆಯು 'ಭಾರತ್ ಜೋಡೊ ಯಾತ್ರೆ'ಯನ್ನು ಸೇರಿಕೊಂಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ನರ್ಮದಾ ಬಚಾವೊ ಆಂದೋಲನದ ನಾಯಕಿ ಮೇಧಾ ಪಾಟ್ಕರ್ ಅವರು ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಮಹಾರಾಷ್ಟ್ರದಲ್ಲಿ ಶನಿವಾರ ಭಾಗಿಯಾಗಿದ್ದನ್ನು ಮೋದಿ ಉಲ್ಲೇಖಿಸಿದ್ದಾರೆ. ರಾಜ್‌ಕೋಟ್ ಜಿಲ್ಲೆಯ ಧೊರಾಜಿ ಪಟ್ಟಣದಲ್ಲಿ ಮೋದಿ ಅವರು ಭಾನುವಾರ ಚುನಾವಣಾ ಪ್ರಚಾರ ನಡೆಸಿದರು. ನರ್ಮದಾ ನದಿಗೆ ಸರ್ದಾರ್ ಸರೋವರ ಅಣೆಕಟ್ಟು ನಿರ್ಮಾಣವು ಹಲವರು ಉಂಟು ಮಾಡಿದ ಅಡಚಣೆಯಿಂದಾಗಿ ಬಹಳ ವಿಳಂಬ ಆಯಿತು ಎಂದು ಅವರು ಹೇಳಿದ್ದಾರೆ.


ಪ್ರಧಾನಿ ನರೇಂದ್ರ ಮೋದಿ ಅವರು ಗಿರ್ ಸೋಮನಾಥ ಜಿಲ್ಲೆಯ ಸೋಮನಾಥ ದೇವಾಲಯಕ್ಕೆ ಭಾನುವಾರ ಭೇಟಿ ನೀಡಿದರು — ಪಿಟಿಐ ಚಿತ್ರ

'ಬರಡು ಭೂಮಿಯಾಗಿರುವ ಕಛ್ ಮತ್ತು ಕಾಥಿಯಾವಾಡದ (ಸೌರಾಷ್ಟ್ರ ಪ್ರದೇಶ) ನೀರಡಿಕೆ ನೀಗಿಸಲು ಇದ್ದ ಏಕೈಕ ಪರಿಹಾರ ನರ್ಮದಾ ಯೋಜನೆ ಆಗಿತ್ತು. ನರ್ಮದಾ ವಿರೋಧಿ ಕಾರ್ಯಕರ್ತೆಯಾಗಿರುವ ಮಹಿಳೆಯ ಜೊತೆಗೆ ಕಾಂಗ್ರೆಸ್ ನಾಯಕರೊಬ್ಬರು ಪಾದಯಾತ್ರೆ ನಡೆಸಿದ್ದನ್ನು ನೀವು ನೋಡಿದ್ದೀರಿ' ಎಂದು ಮೋದಿ ಹೇಳಿದ್ದಾರೆ.

'ಇಲ್ಲಿಗೆ ನೀರು ಬಾರದಂತೆ ಮಾಡಲು ಈ ಕಾರ್ಯಕರ್ತರು ಪ್ರತಿಭಟನೆ ಮಾಡಿದರು' ಎಂದ ಮೋದಿ ಅವರು, ಈ ಕಾರ್ಯಕರ್ತರು ಗುಜರಾತ್ ಕುರಿತು ಎಷ್ಟು ಅಪಖ್ಯಾತಿ ಹರಡಿದ್ದರೆಂದರೆ ವಿಶ್ವ ಬ್ಯಾಂಕ್ ಕೂಡ ಯೋಜನೆಗೆ ಹಣಕಾಸು ನೆರವನ್ನು ನಿಲ್ಲಿಸಿತು ಎಂದಿದ್ದಾರೆ.

'ಕಾಂಗ್ರೆಸ್ ನಾಯಕರು ಮತ ಕೇಳಲು ಬಂದಾಗ, ಯಾವ ನೈತಿಕತೆಯ ಮೇಲೆ ಮತ ಕೇಳುತ್ತಿದ್ದೀರಿ ಎಂಬುದನ್ನು ವಿವರಿಸುವಂತೆ ಅವರನ್ನು ನೀವು ಕೇಳಬೇಕು ಎಂದು ನಾನು ಬಯಸುತ್ತೇನೆ' ಎಂದು ಮೋದಿ ಹೇಳಿದ್ದಾರೆ.

'ಎಲ್ಲ ಮತಗಟ್ಟೆಗಳಲ್ಲಿ ಗೆಲ್ಲಿಸಿ'

ಎಲ್ಲ ಮತಗಟ್ಟೆಗಳಲ್ಲಿಯೂ ಬಿಜೆಪಿ ಗೆಲ್ಲುವಂತೆ ಮಾಡಬೇಕು ಎಂದು ಗಿರ್ ಸೋಮನಾಥ ಜಿಲ್ಲೆಯ ಮತದಾರರಿಗೆ ಮೋದಿ ಅವರು ವಿನಂತಿ ಮಾಡಿಕೊಂಡಿದ್ದಾರೆ. ಸೋಮನಾಥ ದೇವಾಲಯದಲ್ಲಿ ಪೂಜೆ ಸಲ್ಲಿಸಿದ ಬಳಿಕ ಅವರು ವೆರಾವಲ್‌ನಲ್ಲಿ ರ‍್ಯಾಲಿ ಉದ್ದೇಶಿಸಿ ಮಾತನಾಡಿದರು.

ಸೋಮನಾಥ ಜಿಲ್ಲೆಯ ನಾಲ್ವರು ಅಭ್ಯರ್ಥಿಗಳ ಪರ ಮೋದಿ ಅವರು ಮತ ಯಾಚಿಸಿದರು. 'ಈ ಚುನಾವಣೆಯಲ್ಲಿ ಜನರು ಭಾರಿ ಸಂಖ್ಯೆಯಲ್ಲಿ ಮತಗಟ್ಟೆಗೆ ಹೋಗಬೇಕು. ಈ ಹಿಂದಿನ ಎಲ್ಲ ದಾಖಲೆಗಳನ್ನು ಮುರಿಯಬೇಕು' ಎಂದು ಮೋದಿ ಹೇಳಿದರು.

ಮತದಾನದ ಈ ಹಿಂದಿನ ಎಲ್ಲ ದಾಖಲೆ ಮುರಿಯಿರಿ. ಬಿಜೆಪಿಗೇ ಮತ ಹಾಕಿ ಎಂದು ಹೇಳುತ್ತಿಲ್ಲ. ಜನತಂತ್ರದ ಹಬ್ಬದಲ್ಲಿ ಎಲ್ಲರೂ ಭಾಗಿಯಾಗಬೇಕು. ಇದು ನನ್ನ ಮನವಿ
ನರೇಂದ್ರ ಮೋದಿ, ಪ್ರಧಾನಿ

ಶಿವಪಾಲ್ ಕಾಲಿಗೆ ಎರಗಿದ ಅಖಿಲೇಶ್



ಇಟಾವಾ (ಉತ್ತರ ಪ್ರದೇಶ) (ಪಿಟಿಐ): ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ತಮ್ಮ ಚಿಕ್ಕಪ್ಪ ಶಿವಪಾಲ್ ಯಾದವ್ ಅವರ ಕಾಲಿಗೆ ಎರಗಿ, ಕುಟುಂಬದ ಒಗ್ಗಟ್ಟು ಪ್ರದರ್ಶಿಸಿದರು. ಮೈನ್‌ಪುರಿ ಲೋಕಸಭೆ ಕ್ಷೇತ್ರದ ಉಪಚುನಾವಣೆಯ ಪ್ರಚಾರದ ವೇಳೆ, ತಮ್ಮ ನಡುವೆ ಭಿನ್ನಾಭಿಪ್ರಾಯ ಇರಲಿಲ್ಲ ಎಂದು ಅಖಿಲೇಶ್ ಸ್ಪಷ್ಟಪಡಿಸಿದ್ದಾರೆ.

ಎಸ್‌ಪಿ ವರಿಷ್ಠ ಮುಲಾಯಂ ಸಿಂಗ್ ನಿಧನದಿಂದ ತೆರವಾಗಿರುವ ಕ್ಷೇತ್ರಕ್ಕೆ ಉಪಚುನಾವಣೆ ನಡೆಯುತ್ತಿದ್ದು, ಅಖಿಲೇಶ್ ಅವರ ಪತ್ನಿ ಡಿಂಪಲ್ ಯಾದವ್ ಪಕ್ಷದಿಂದ ಸ್ಪರ್ಧಿಸಿದ್ದಾರೆ. ಕುಟುಂಬದ ಭದ್ರನೆಲೆ ಸೈಫೈನಲ್ಲಿ ಅಖಿಲೇಶ್ ಪ್ರಚಾರ ನಡೆಸಿದರು.

ಮೈನ್‌ಪುರಿ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಜಸ್ವಂತ್ ನಗರ, ಕರ್ಹಾಲ್, ಮೈನ್‌ಪುರಿ ವಿಧಾನಸಭಾ ಕ್ಷೇತ್ರಗಳ ಜನರು ಎಸ್‌ಪಿಗೆ ಮತ ಹಾಕಲಿದ್ದಾರೆ. ಹೀಗಾಗಿ ಬಿಜೆಪಿಯಲ್ಲಿ ನಡುಕ ಶುರುವಾಗಿದೆ ಎಂದು ಅಖಿಲೇಶ್ ಹೇಳಿದರು. ಜಸ್ವಂತ್ ನಗರದಿಂದ ಶಿವಪಾಲ್, ಕರ್ಹಾಲ್‌ನಿಂದ ಅಖಿಲೇಶ್ ಶಾಸಕರಾಗಿ ಆಯ್ಕೆಯಾಗಿದ್ದಾರೆ.

'ನಾವು ಒಂದಾಗಿರಬೇಕು ಎಂದು ನೀವು ಬಯಸಿದ್ದಿರಿ. ನಾವು ಒಂದಾಗಿದ್ದೇವೆ. ಲೋಕಸಭಾ ಉಪಚುನಾವಣೆಯಲ್ಲಿ ಇನ್ನು ದಾಖಲೆಯ ಜಯ ದೊರಕಿಸಿಕೊಡುವ ಜವಾಬ್ದಾರಿ ನಿಮ್ಮ ಮೇಲಿದೆ' ಎಂದು ಸಮಾವೇಶದಲ್ಲಿ ಜನರನ್ನು ಉದ್ದೇಶಿಸಿ ಶಿವಪಾಲ್ ಹೇಳಿದರು.

ಬಂಡಾಯ: ಏಳು ಮುಖಂಡರು ಬಿಜೆಪಿಯಿಂದ ಅಮಾನತು

ಅಹಮದಾಬಾದ್ (ಪಿಟಿಐ): ಬಿಜೆಪಿ ಟಿಕೆಟ್ ದೊರೆಯದ ಕಾರಣ ಪಕ್ಷದ ವಿರುದ್ಧ ಬಂಡಾಯ ಎದ್ದು, ಪಕ್ಷೇತರರಾಗಿ ಸ್ಪರ್ಧಿಸಿರುವ ಏಳು ಅಭ್ಯರ್ಥಿಗಳನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ. ಅವರಲ್ಲಿ ಇಬ್ಬರು ಮಾಜಿ ಶಾಸಕರೂ ಇದ್ದಾರೆ.

ಮೊದಲ ಹಂತದಲ್ಲಿ ಡಿ.1ರಂದು ಮತದಾನ ನಡೆಯಲಿರುವ ಕ್ಷೇತ್ರಗಳಲ್ಲಿ ಈ ಏಳು ಮಂದಿ ಸ್ಪರ್ಧಿಸಿದ್ದಾರೆ.

ಮಾಜಿ ಶಾಸಕರಾದ ಅರವಿಂದ ಲಡಾನಿ, ಹರ್ಷದ್ ವಾಸವ, ಜಿಲ್ಲಾ ಪಂಚಾಯಿತಿ ಸದಸ್ಯ ಛತರ್‌ಸಿಂಹ ಗುಂಜರಿಯಾ, ಕೇತನ್ ಪಟೇಲ್, ಭರತ್ ಚಾವ್ಡಾ, ಉದಯ್ ಶಾ ಮತ್ತು ಕರಣ್ ಬರೈಯ ಅವರು ಅಮಾನತಾದವರು.

ಬಿಜೆಪಿಯ ಹಲವು ಮುಖಂಡರು ತಮಗೆ ಟಿಕೆಟ್ ಸಿಕ್ಕಿಲ್ಲ ಎಂಬುದರ ಕುರಿತು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಪಕ್ಷೇತರರಾಗಿ ಸ್ಪರ್ಧಿಸುವುದಾಗಿಯೂ ಹಲವರು ಹೇಳಿದ್ದರು. ಆರು ಬಾರಿ ಶಾಸಕರಾಗಿದ್ದ ಮಧು ಶ್ರೀವಾಸ್ತವ ಅವರೂ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ. ಬಿಜೆಪಿಯ ಇನ್ನೊಬ್ಬ ಮಾಜಿ ಶಾಸಕ ದಿನೇಶ್ ಪಟೇಲ್ ಅವರೂ ಪಕ್ಷೇತರರಾಗಿ ನಾಮಪತ್ರ ಸಲ್ಲಿಸಿದ್ದಾರೆ. ಈ ಇಬ್ಬರು ಸ್ಪರ್ಧಿಸಿರುವ ಕ್ಷೇತ್ರಗಳಲ್ಲಿ ಎರಡನೇ ಹಂತದಲ್ಲಿ ಡಿ. 5ರಂದು ಮತದಾನ ನಡೆಯಲಿದೆ.

ಮುಸ್ಲಿಮರ ತುಷ್ಟೀಕರಣ: ಬಿಜೆಪಿ ಆರೋಪ

ಅಹಮದಾಬಾದ್ (ಪಿಟಿಐ): ಕಾಂಗ್ರೆಸ್ ಪಕ್ಷವು ಅಲ್ಪಸಂಖ್ಯಾತರ ತುಷ್ಟೀಕರಣ ಮಾಡುತ್ತಿದೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ದೇಶ ಮತ್ತು ಕಾಂಗ್ರೆಸ್ ಪಕ್ಷವನ್ನು ಮುಸ್ಲಿಮರು ಮಾತ್ರ ರಕ್ಷಿಸಲು ಸಾಧ್ಯ ಎಂದು ಕಾಂಗ್ರೆಸ್‌ನ ಶಾಸಕರೊಬ್ಬರು ಹೇಳಿದ್ದಾರೆ ಎನ್ನಲಾದ ವಿಡಿಯೊ ಬಹಿರಂಗವಾದ ಬಳಿಕ ಬಿಜೆಪಿ ಹೀಗೆ ಟೀಕೆ ಮಾಡಿದೆ. ಆದರೆ, ಈ ವಿಡಿಯೊ ಮೂರು ವರ್ಷ ಹಳೆಯದಾಗಿದ್ದು, ಅದನ್ನು ತಿರುಚಲಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ಹಿಂದೂ ಮತ್ತು ಮುಸ್ಲಿಂ ಸಮುದಾಯದ ನಡುವೆ ಒಗ್ಗಟ್ಟು ಬೇಕು. ಅದರಿಂದ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ಸಿಧ್‌ಪುರದ ಶಾಸಕ ಹೇಳಿದ್ದರು. ಈ ಭಾಗವನ್ನು ತೆಗೆದು ಹಾಕಿ ವಿಡಿಯೊವನ್ನು ಬಹಿರಂಗ ಮಾಡಲಾಗಿದೆ ಎಂದು ಕಾಂಗ್ರೆಸ್ ವಕ್ತಾರ ಚಂದನ್‌ಜಿ ಠಾಕೂರ್ ಹೇಳಿದ್ದಾರೆ.

'ಅವರು (ಬಿಜೆಪಿ) ಹೊಸದಾಗಿ ಏನನ್ನಾದರೂ ಮಾಡಬಹುದು ಎಂದು ಅವರಿಗೆ ಮತ ಕೊಟ್ಟಿದ್ದೇವೆ. ಆದರೆ ಅವರು ನಮಗೆ ಮಾತ್ರವಲ್ಲ ಇಡೀ ದೇಶಕ್ಕೆ ಮೋಸ ಮಾಡಿದ್ದಾರೆ. ದೇಶ ಮತ್ತು ಕಾಂಗ್ರೆಸ್ ಪಕ್ಷವನ್ನು ಮುಸ್ಲಿಮರು ಮಾತ್ರ ಕಾಪಾಡಲು ಸಾಧ್ಯ' ಎಂದು ಶಾಸಕ ಹೇಳಿರುವುದು ವಿಡಿಯೊದಲ್ಲಿ ಇದೆ ಎನ್ನಲಾಗಿದೆ.

ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಅವರು ಈ ವಿಡಿಯೊಕ್ಕೆ ಹೀಗೆ ಪ್ರತಿಕ್ರಿಯೆ ಕೊಟ್ಟಿದ್ದಾರೆ: 'ಇದು ನಾಚಿಕೆಗೇಡಿನ ಮಾತುಗಳು. ಸೋಲಿನ ಭಯದಿಂದಾಗಿ ಕಾಂಗ್ರೆಸ್ ಪಕ್ಷವು ತುಷ್ಟೀಕರಣಕ್ಕೆ ಮುಂದಾಗಿದೆ. ಆದರೆ, ಕಾಂಗ್ರೆಸ್ ಪಕ್ಷವನ್ನು ಸೋಲಿನಿಂದ ರಕ್ಷಿಸಲು ಯಾರಿಗೂ ಸಾಧ್ಯವಿಲ್ಲ ಎಂಬುದನ್ನು ಆ ಪಕ್ಷವು ಅರ್ಥ ಮಾಡಿಕೊಳ್ಳಬೇಕು'. ಗುಜರಾತ್ ಬಿಜೆಪಿ ಅಧ್ಯಕ್ಷ ಸಿ.ಆರ್. ಪಾಟೀಲ್ ಅವರೂ ವಿಡಿಯೊದಲ್ಲಿ ಹೇಳಿರುವುದನ್ನು ಖಂಡಿಸಿದ್ದಾರೆ.

ಶ್ರದ್ಧಾ ಹತ್ಯೆ: ಕಾಡಿನಲ್ಲಿ ತಲೆಬುರುಡೆಯ ಭಾಗ ಪತ್ತೆ

ನವದೆಹಲಿ (ಪಿಟಿಐ/ ಎನ್‌ಡಿಟಿವಿ): ಕಾಲ್ ಸೆಂಟರ್ ಉದ್ಯೋಗಿ ಶ್ರದ್ಧಾ ವಾಲಕರ್ ಹತ್ಯೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಭಾನುವಾರ ತಲೆಬುರುಡೆಯ ಕೆಳಭಾಗ, ಕೆಳದವಡೆ ಹಾಗೂ ಮತ್ತಷ್ಟು ಮೂಳೆಗಳನ್ನು ಕಾಡಿನಿಂದ ವಶಪಡಿಸಿಕೊಂಡಿದ್ದಾರೆ.

ಈ ಭಾಗಗಳು ಶ್ರದ್ಧಾಳದ್ದೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು, ಆಕೆಯ ತಂದೆಯ ಡಿಎನ್‌ಎ ಮಾದರಿಗಳೊಂದಿಗೆ ಹೊಂದುತ್ತವೆಯೇ ಎಂಬುದನ್ನು ದೃಢೀಕರಿಸಲು ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗುವುದು ಎಂದು ಪೊಲೀಸರು ಹೇಳಿದ್ದಾರೆ.

ಛತ್ತರ್‌ಪುರದ ಅರಣ್ಯ ಪ್ರದೇಶ ಸೇರಿದಂತೆ, ಅಫ್ತಾಬ್ ಮತ್ತು ಶ್ರದ್ಧಾ ವಾಸಿಸುತ್ತಿದ್ದ ಸ್ಥಳ ಹಾಗೂ ದೆಹಲಿ ನಗರದಲ್ಲಿ ದೆಹಲಿ ಪೊಲೀಸರು ಮತ್ತೊಮ್ಮೆ ಶೋಧ ಕಾರ್ಯವನ್ನು ಆರಂಭಿಸಿದ್ದಾರೆ.

ಕೆರೆಯಲ್ಲಿ ತಲೆಬುರುಡೆ?: ಈ ನಡುವೆ, ಶ್ರದ್ಧಾಳ ತಲೆಬುರುಡೆಯನ್ನು ದೆಹಲಿಯ ಮೆಹ್ರೌಲಿ ಕೆರೆಗೆ ಎಸೆದಿರುವುದಾಗಿ ಅಫ್ತಾಬ್ ಪೊಲೀಸರಿಗೆ ತಿಳಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಭಾನುವಾರ ದೆಹಲಿ ಮಹಾನಗರ ಪಾಲಿಕೆಯ ಸಿಬ್ಬಂದಿ ಹಾಗೂ ಪೊಲೀಸರು ಮೆಹ್ರೌಲಿ ಕೆರೆಯನ್ನು ಖಾಲಿ ಮಾಡುವ ಕಾರ್ಯಾಚರಣೆ ಆರಂಭಿಸಿದ್ದಾರೆ.

ಬ್ಯಾಗ್ ಪತ್ತೆ: ಅಫ್ತಾಬ್‌ನ ಛತ್ತರ್‌ಪುರದ ಫ್ಲ್ಯಾಟ್‌ನಿಂದ ಶ್ರದ್ಧಾಳ ಬ್ಯಾಗ್ ಅನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಅದರಲ್ಲಿ ಕೆಲವು ಬಟ್ಟೆಗಳು ಮತ್ತು ಶೂಗಳು ಪತ್ತೆಯಾಗಿವೆ. ಎರಡು ದೊಡ್ಡ ಕಪ್ಪು ಬ್ಯಾಗ್‌ಗಳೊಂದಿಗೆ ಪೊಲೀಸರು ಆರೋಪಿಯ ಫ್ಲ್ಯಾಟ್‌ನಿಂದ ಹೊರಬಂದರು ಎಂದೂ ಮೂಲಗಳು ತಿಳಿಸಿವೆ.

ಆಯುಧ ಪತ್ತೆ: ಅಫ್ತಾಬ್‌ನ ಛತ್ತರ್‌ಪುರ ಫ್ಲ್ಯಾಟ್‌ನಿಂದ ಶನಿವಾರ ಪೊಲೀಸರು ದೊಡ್ಡದಾದ, ಹರಿತವಾದ ಕತ್ತರಿಸುವ ಉಪಕರಣವೊಂದನ್ನು ವಶಪಡಿಸಿಕೊಂಡಿದ್ದಾರೆ. ಇದನ್ನು ಆರೋಪಿಯು ಶ್ರದ್ಧಾಳ ದೇಹ ಕತ್ತರಿಸಲು ಬಳಸಿರಬಹುದು ಎಂದು ಶಂಕಿಸಲಾಗಿದೆ.

ಸಾಕ್ಷ್ಯ ಮುಚ್ಚಿಟ್ಟ ಆರೋಪಿ: ಶ್ರದ್ಧಾಳನ್ನು ಹತ್ಯೆ ಮಾಡಿದ ಬಳಿಕ ಎಲ್ಲಾ ಸಾಕ್ಷ್ಯಗಳನ್ನು ನಾಶಪಡಿಸಿದ್ದಾಗಿ ಆರೋಪಿ ಅಫ್ತಾಬ್ ಪೊಲೀಸರು ಎದುರು ಒಪ್ಪಿಕೊಂಡಿದ್ದಾನೆ. ಅಷ್ಟೇ ಅಲ್ಲ, ಹತ್ಯೆಯ ನಂತರ ದೊರೆತ ಶ್ರದ್ಧಾಳ ಮೂರು ಚಿತ್ರಗಳನ್ನು ನಾಶಪಡಿಸಿದ್ದಾಗಿಯೂ ಹೇಳಿದ್ದಾನೆ.

ಮೂವರು ಸ್ನೇಹಿತರ ವಿಚಾರಣೆ

ಮುಂಬೈ: ಕಾಲ್ ಸೆಂಟರ್ ಉದ್ಯೋಗಿಯಾಗಿದ್ದ ಶ್ರದ್ಧಾ ವಾಲಕರ್ ಅವರ ಮೂವರು ಸ್ನೇಹಿತರನ್ನು ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯಲ್ಲಿ ಭಾನುವಾರ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಇಲ್ಲಿನ ವಸೈ ಅಪರಾಧ ವಿಭಾಗದ ಕಚೇರಿಯಲ್ಲಿ ಇವರ ಹೇಳಿಕೆಗಳನ್ನು ದಾಖಲಿಸುವ ಪ್ರಕ್ರಿಯೆ ನಡೆಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಶನಿವಾರ ಶ್ರದ್ಧಾಳಿಗೆ ಪರಿಚಿತರಾಗಿದ್ದ ನಾಲ್ವರ ಸ್ನೇಹಿತರ ಹೇಳಿಕೆಗಳನ್ನು ಪೊಲೀಸರು ದಾಖಲಿಸಿಕೊಂಡಿದ್ದರು. 2020ರಲ್ಲಿ ಅಫ್ತಾಬ್‌ನಿಂದ ಹಲ್ಲೆಗೊಳಗಾಗಿದ್ದ ಶ್ರದ್ಧಾ ಈ ನಾಲ್ವರು ಸ್ನೇಹಿತರ ಪೈಕಿ ಇಬ್ಬರು ಪುರುಷ ಸ್ನೇಹಿತರಿಗೆ ಫೋನ್ ಮಾಡಿ ಘಟನೆಯ ವಿವರ ಹೇಳಿಕೊಂಡಿದ್ದರು. ಶ್ರದ್ಧಾಗೆ ನಿಕಟವರ್ತಿಗ ಳಾಗಿದ್ದ ಕಾಲ್ ಸೆಂಟರ್‌ನ ಮಾಜಿ ಮ್ಯಾನೇಜರ್ ಮತ್ತು ಆಕೆಯ ಸ್ನೇಹಿತೆಯೊಬ್ಬರನ್ನೂ ವಿಚಾರಣೆ ನಡೆಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

'ಪೌರ ಕಾರ್ಮಿಕರೊಂದಿಗೆ ಊಟ ಮಾಡಿ'

ಜಬಲ್‌ಪುರ, ಮಧ್ಯಪ್ರದೇಶ (ಪಿಟಿಐ): 'ಪೌರ ಕಾರ್ಮಿಕರನ್ನು ನಿಮ್ಮ ಮನೆಗಳಿಗೆ ಬರಮಾಡಿಕೊಂಡು ವಾರದಲ್ಲಿ ಕನಿಷ್ಠ ಒಮ್ಮೆಯಾದರೂ ಅವರೊಂದಿಗೆ ಕುಳಿತು ಊಟ ಮಾಡಿ' ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರ ಸಂಘಚಾಲಕ ಮೋಹನ್ ಭಾಗವತ್ ಅವರು ಸಂಘದ ಸ್ವಯಂಸೇವಕರ ಕುಟುಂಬದವರಿಗೆ ತಿಳಿಸಿದ್ದಾರೆ.

ಜಬಲ್‌ಪುರ ನಗರದ ಕೇಂದ್ರ ಭಾಗದಲ್ಲಿರುವ ಮಹಾಕೌಶಲ್ ಪ್ರದೇಶದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಸ್ವಯಂ ಸೇವಕರ ಕುಟುಂಬದವರನ್ನು ಉದ್ದೇಶಿಸಿ ಮಾತನಾಡಿದ ಅವರು, 'ಎಲ್ಲರೂ ಸ್ವದೇಶಿ ವಸ್ತುಗಳನ್ನು ಸಾಧ್ಯವಾದಷ್ಟು ಹೆಚ್ಚು ಬಳಕೆ ಮಾಡಬೇಕು. ಪಾಶ್ಚಿಮಾತ್ಯ ಕುಟುಂಬ ವ್ಯವಸ್ಥೆಯನ್ನು ದೂರವಿಡಬೇಕು' ಎಂದರು.

'ಸ್ವಯಂಸೇವಕರು ಜಾತಿ ವ್ಯವಸ್ಥೆ ತೊಡೆದುಹಾಕುವ ದಿಸೆಯಲ್ಲಿ ಕೆಲಸ ಮಾಡಬೇಕು' ಎಂದರು.

ಕುಂಟುತ್ತಾ ಸಾಗಿದೆ ಠೇವಣಿ ಬಡ್ಡಿ ಹೆಚ್ಚಳ

ಮುಂಬೈ (ಪಿಟಿಐ): ರೆಪೊ ದರದಲ್ಲಿ ಏರಿಕೆ ಆದಾಗ ಸಾಲದ ಮೇಲಿನ ಬಡ್ಡಿ ದರವನ್ನು ಹೆಚ್ಚಿಸುವ ಬ್ಯಾಂಕ್‌ಗಳು, ಠೇವಣಿಗಳಿಗೆ ನೀಡುವ ಬಡ್ಡಿ ದರವನ್ನು ಅಷ್ಟೇ ವೇಗದಲ್ಲಿ ಹೆಚ್ಚಿಸುತ್ತಿಲ್ಲ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈ ವರ್ಷದ ಮೇ ತಿಂಗಳಿನಿಂದ ಈಚೆಗೆ ರೆಪೊ ದರವನ್ನು ಶೇಕಡ 1.90ರಷ್ಟು ಹೆಚ್ಚಿಸಿದೆ. ಎಲ್ಲ ಪ್ರಮುಖ ಬ್ಯಾಂಕ್‌ಗಳು ಸಾಲದ ಮೇಲಿನ ಬಡ್ಡಿದರವನ್ನು (ಇಬಿಎಲ್‌ಆರ್) ಸಹ ಶೇ 1.90ರಷ್ಟು ಏರಿಕೆ ಮಾಡಿವೆ. ಆದರೆ, ಠೇವಣಿ ಬಡ್ಡಿ ದರವನ್ನು ಈ ಪ್ರಮಾಣ ದಲ್ಲಿ ಹೆಚ್ಚಳ ಮಾಡಿಲ್ಲ.




ಆರ್‌ಬಿಐನ ಈಚಿನ ಒಂದು ಲೇಖನದ ಪ್ರಕಾರ, 2022ರ ಅಕ್ಟೋಬರ್ ಅಂತ್ಯದವರೆಗೆ ಬ್ಯಾಂಕ್‌ಗಳು ರೆಪೊ ದರಕ್ಕೆ ಅನುಗುಣವಾಗಿ ತಮ್ಮ ಇಬಿಎಲ್‌ಆರ್ ಅನ್ನು ಶೇ 1.90ರಷ್ಟು ಹೆಚ್ಚಿಸಿವೆ. ಇದೇ ಅವಧಿಯಲ್ಲಿ ಒಂದು ವರ್ಷದ ಎಂಸಿಎಲ್‌ಆರ್ ಅನ್ನು ಶೇ 0.85ರಷ್ಟು ಏರಿಕೆ ಮಾಡಿವೆ. ಆದರೆ, ಅವಧಿ ಠೇವಣಿಗಳ ಬಡ್ಡಿದರವನ್ನು ಅತಿ ಕಡಿಮೆ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

ಹೊಸ ಠೇವಣಿಗಳಿಗೆ ದರವನ್ನು ಮೇ ತಿಂಗಳಿನಿಂದ ಅಕ್ಟೋಬರ್‌ವರೆಗೆ ಸರಾ ಸರಿ ಶೇ 0.48ರಷ್ಟು ಏರಿಕೆ ಮಾಡಲಾಗಿದೆ.

ಸರ್ಕಾರಿ ವಲಯದ ಬ್ಯಾಂಕ್‌ಗಳಿಗಿಂತಲೂ ಖಾಸಗಿ ವಲಯದ ಬ್ಯಾಂಕ್‌ಗಳ ಸಾಲ ಮತ್ತು ಠೇವಣಿ ಬಡ್ಡಿದರ ವರ್ಗಾವಣೆ ಹೆಚ್ಚಿಗೆ ಇದೆ. ಸಾಲ ನೀಡಿಕೆಯ ಬೆಳವಣಿಗೆಯು ಸಹ ಸರ್ಕಾರಿ ವಲಯದ ಬ್ಯಾಂಕ್‌ಗಳಿಗಿಂತಲೂ ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಗರಿಷ್ಠ ಮಟ್ಟದಲ್ಲಿದೆ ಎಂದು ಆರ್‌ಬಿಐ ಲೇಖನದಲ್ಲಿ ತಿಳಿಸಲಾಗಿದೆ.

ಬಡ್ಡಿ ದರ ಏರಿಕೆ



ಸಂಕ್ಷಿಪ್ತ ಸುದ್ದಿ

ಮೊರ್ಬಿ ಸೇತುವೆ ದುರಂತ: ಇಂದು 'ಸುಪ್ರೀಂ' ವಿಚಾರಣೆ

ನವದೆಹಲಿ (ಪಿಟಿಐ): ಗುಜರಾತ್‌ನ ಮೊರ್ಬಿ ಸೇತುವೆ ದುರಂತದ ತನಿಖೆಗೆ ನ್ಯಾಯಾಂಗ ಆಯೋಗ ರಚಿಸುವಂತೆ ಕೋರಿ ಸಲ್ಲಿಸಲಾಗಿರುವ ಪಿಐಎಲ್ ಅನ್ನು ಸುಪ್ರೀಂ ಕೋರ್ಟ್ ಸೋಮವಾರ ವಿಚಾರಣೆಗೆ ಒಳಪಡಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ವಕೀಲ ವಿಶಾಲ್ ತಿವಾರಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲಿದೆ.

ಶಿವಸೇನಾ (ಉದ್ಧವ್ ಬಣ) ಕಚೇರಿ ಧ್ವಂಸ

ಠಾಣೆ (ಪಿಟಿಐ): ಅತಿಕ್ರಮಣವಾಗಿ ನಿರ್ಮಿಸಲಾಗಿದ್ದ ಶಿವಸೇನಾ (ಉದ್ಧವ್ ಠಾಕ್ರೆ) ಸ್ಥಳೀಯ ಕಚೇರಿಯನ್ನು ಠಾಣೆ ಜಿಲ್ಲೆಯ ಕಲ್ಯಾಣ್–ಡೊಂಬಿವಲಿ ಪಾಲಿಕೆಯು ಕಾರ್ಯಾಚರಣೆ ನಡೆಸಿ ಧ್ವಂಸಗೊಳಿಸಿದೆ.

'ಸರ್ಕಾರಿ ಜಾಗದಲ್ಲಿ ಪಕ್ಷದ ಸ್ಥಳೀಯ ಕಚೇರಿ ಸೇರಿ 8 ಅಂಗಡಿಗಳನ್ನು ನಿರ್ಮಿಸಲಾಗಿತ್ತು. ಇವುಗಳನ್ನು ಧ್ವಂಸಗೊಳಿಸಲಾಯಿತು' ಎಂದು ಭಾನುವಾರ ಅಧಿಕಾರಿಗಳು ತಿಳಿಸಿದ್ದಾರೆ.

ಚಿರಂಜೀವಿಗೆ 'ಇಂಡಿಯನ್ ಫಿಲ್ಮ್ ಪರ್ಸನಾಲಿಟಿ ಆಫ್ ದಿ ಇಯರ್' ಗೌರವ

ಉದ್ಘಾಟನೆಗೂ ಮುನ್ನ ಚಿತ್ರ ಪ್ರದರ್ಶನ

• ಪ್ರೇಮಕುಮಾರ್ ಹರಿಯಬ್ಬೆ

ಪಣಜಿ: ಭಾರತೀಯ ಸಿನಿಮಾದ ಮೇರು ಕಲಾವಿದರೊಬ್ಬರಿಂದ ಅಂತರ ರಾಷ್ಟ್ರೀಯ ಚಲನ ಚಿತ್ರೋತ್ಸವವನ್ನು ಉದ್ಘಾಟಿಸುವ ಸಂಪ್ರದಾಯ ಕೊನೆಗೊಂಡಿದೆ. ಕೇಂದ್ರ ಪ್ರಸಾರ ಖಾತೆಯ ಹೊಣೆ ಹೊತ್ತ ಸಚಿವರೇ ಚಿತ್ರೋತ್ಸವವನ್ನು ಉದ್ಘಾಟಿಸುವ ಹೊಸ ಪರಿಪಾಟಕ್ಕೆ ಭಾನುವಾರ ಆರಂಭವಾದ ಗೋವಾ ಚಿತ್ರೋತ್ಸವ ಸಾಕ್ಷಿಯಾಯಿತು.

ಗೋವಾ ಯೂನಿವರ್ಸಿಟಿಯ ಒಳಾಂಗಣ ಕ್ರೀಡಾಂಗಣದಲ್ಲಿ ಸಂಜೆ ನಡೆದ ವರ್ಣರಂಜಿತ ಸಮಾರಂಭದಲ್ಲಿ ಸಚಿವ ಅನುರಾಗ್ ಠಾಕೂರ್, ರಾಜಕಾರಣಿಗಳು ಮತ್ತು ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ದೀಪ ಬೆಳಗಿಸಿ ಒಂಬತ್ತು ದಿನಗಳ ಚಿತ್ರೋತ್ಸವಕ್ಕೆ ಚಾಲನೆ ನೀಡಿದರು.

ಇತ್ತೀಚಿನ ವರ್ಷಗಳಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಮಾತುಗಳಿಗೆ ಹೆಚ್ಚಿನ ಅವಕಾಶ ಇರುತ್ತಿರಲಿಲ್ಲ. ಅನುರಾಗ್ ಠಾಕೂರ್, ಪ್ರಸಾರ ಖಾತೆ ರಾಜ್ಯಮಂತ್ರಿ ಡಾ.ಮುರುಗನ್, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ರಾಜ್ಯಪಾಲ ಶ್ರೀಧರನ್ ಪಿಳ್ಳೈ ಮತ್ತಿತರರು ಭಾಷಣ ಮಾಡಿ ಸಿನಿಮಾ, ಕಲೆ, ಕ್ರೀಡೆ ಮತ್ತಿತರ ರಂಗದ ಸಾಧನೆಗೆ ಪ್ರಧಾನಿ ನರೇಂದ್ರ ಮೋದಿಯವರ ದಿಟ್ಟ ನಾಯಕತ್ವವೇ ಕಾರಣ ಎಂದು ಪ್ರಶಂಸಿಸಿದರು. ಇನ್ನು ಕಾರ್ಯಕ್ರಮ ನಿರೂಪಕ ಕೇಳಿದ ಕೆಲ ಪ್ರಶ್ನೆಗಳಿಗೆ ವೇದಿಕೆಗೆ ಬಂದ ಅನೇಕರು ಉತ್ತರಿಸಿದ್ದರಿಂದ ಉದ್ಘಾಟನಾ ಸಮಾರಂಭದಲ್ಲಿ ಮಾತುಗಳು ವಿಜೃಂಭಿಸಿದವು.


ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ, ಯುವಜನ ಮತ್ತು ಕ್ರೀಡಾ ಖಾತೆ ಸಚಿವ ಅನುರಾಗ್ ಸಿಂಗ್ ಠಾಕೂರ್ ಮತ್ತು ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್ ಅವರು ಚಿತ್ರೋತ್ಸವದ ಅಂತರರಾಷ್ಟ್ರೀಯ ಜ್ಯೂರಿಗಳನ್ನು ಅಭಿನಂದಿಸಿದರು — ಪಿಟಿಐ ಚಿತ್ರ

ಈ ವರ್ಷದ ಇನ್ನೊಂದು ಬೆಳವಣಿಗೆ ಎಂದರೆ ಚಿತ್ರೋತ್ಸವದ ಆರಂಭಕ್ಕೆ ಮೊದಲೇ ಉದ್ಘಾಟನಾ ಚಿತ್ರ ಆಸ್ಟ್ರಿಯಾ ದೇಶದ ಡಯಟರ್ ಬರ್ನರ್ ನಿರ್ದೇಶನದ 'ಅಲ್ಮ ಅಂಡ್ ಆಸ್ಕರ್' ಚಿತ್ರದ ಪ್ರದರ್ಶನ ನಡೆದದ್ದು. ಚಿತ್ರ ತಂಡದ ಸದಸ್ಯರು ಮತ್ತು ಬರ್ನರ್ ಅವರಿಗೆ ಕೆಂಪುಹಾಸಿನ ಸ್ವಾಗತ ನೀಡಲಾಯಿತು.

ಸೌರಾಗೆ ಜೀವಮಾನ ಸಾಧನೆ ಪ್ರಶಸ್ತಿ: ದಿ. ಸತ್ಯಜಿತ್ ರೇ ಜೀವಮಾನ ಸಾಧನೆ ಪ್ರಶಸ್ತಿಯನ್ನು ಸ್ಪ್ಯಾನಿಷ್ ಚಿತ್ರ ನಿರ್ದೇಶಕ ಕಾರ್ಲೋಸ್ ಸೌರಾ ಅವರಿಗೆ ಪ್ರದಾನ ಮಾಡಲಾಯಿತು. ಕಾರ್ಲೋಸ್ ಅವರ ಮಗಳು ಅನ್ನಾ ಸಾರಾ ಅವರು ಸಚಿವ ಅನುರಾಗ್ ಸಿಂಗ್ ಠಾಕೂರ್ ಅವರಿಂದ ಪ್ರಶಸ್ತಿ ಸ್ವೀಕರಿಸಿದರು. ಇದೇ ವೇದಿಕೆಯಲ್ಲಿ 'ಇಂಡಿಯನ್ ಫಿಲ್ಮ್ ಪರ್ಸನಾಲಿಟಿ ಆಫ್ ದಿ ಇಯರ್' ಪ್ರಶಸ್ತಿಯನ್ನು ತೆಲುಗಿನ ಮೆಗಾಸ್ಟಾರ್ ನಟ ಚಿರಂಜೀವಿ ಅವರಿಗೆ ನೀಡಲಾಗಿದೆ ಎಂದು ಘೋಷಿಸಲಾಯಿತು.

ನಟರಾದ ಮನೋಜ್ ಬಾಜಪೇಯಿ, ಸುನೀಲ್ ಶೆಟ್ಟಿ, ಪರೇಶ್ ರಾವಲ್, ಸಿನಿಮಾ ಲೇಖಕ ವಿಜಯೇಂದ್ರ ಪ್ರಸಾದ್ ಅವರನ್ನು ಉದ್ಘಾಟನಾ ಸಮಾರಂಭದಲ್ಲಿ ಸತ್ಕರಿಸಲಾಯಿತು.

iffi 2022 53rd International Film Festival of India, Goa 20th - 28th November 2022


ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹500-690
ದ್ವಿತಳಿ (ಬಿ.ವಿ)	₹266-825

‘ಭಾರತದಲ್ಲಿ ಹಿಂಜರಿತದ ಸೂಚನೆ ಇಲ್ಲ’

ನವದೆಹಲಿ (ಪಿಟಿಐ): ‘ಭಾರತದಲ್ಲಿ ಆರ್ಥಿಕ ಹಿಂಜರಿತದ ಯಾವುದೇ ಸೂಚನೆ ಇಲ್ಲ’ ಎಂದು ನೀತಿ ಆಯೋಗದ ಮಾಜಿ ಉಪಾಧ್ಯಕ್ಷ ರಾಜೀವ್ ಕುಮಾರ್ ಹೇಳಿದ್ದಾರೆ.

‘ಜಾಗತಿಕ ಅನಿಶ್ಚಿತ ಪರಿಸ್ಥಿತಿಯು ಭಾರತದ ಆರ್ಥಿಕತೆಯ ಮೇಲೆ ಪರಿಣಾಮ ಬೀರಬಹುದು. ಹೀಗಿದ್ದರೂ 2023-24ನೇ ಹಣಕಾಸು ವರ್ಷದಲ್ಲಿ ಜಿಡಿಪಿಯು ಶೇ 6ರಿಂದ ಶೇ 7ರ ಮಟ್ಟದಲ್ಲಿ ಬೆಳವಣಿಗೆ ಕಾಣಲಿದೆ’ ಎಂದು ಅವರು ಹೇಳಿದ್ದಾರೆ.


ರಾಜೀವ್ ಕುಮಾರ್

‘ಅಮೆರಿಕ, ಯುರೋಪ್, ಜಪಾನ್ ಮತ್ತು ಚೀನಾದಲ್ಲಿ ಏಕಕಾಲಕ್ಕೆ ಆರ್ಥಿಕ ಬೆಳವಣಿಗೆಯು ಇಳಿಮುಖವಾಗಿದೆ. ಇದರಿಂದಾಗಿ ಮುಂಬರುವ ತಿಂಗಳುಗಳಲ್ಲಿ ಜಾಗತಿಕ ಆರ್ಥಿಕತೆಯು ಹಿಂಜರಿತದತ್ತ ಸಾಗಬಹುದು’ ಎಂದು ಕುಮಾರ್ ಅಂದಾಜು ಮಾಡಿದ್ದಾರೆ.

ಚಿರಸ್ಮರಣೆ



ಶ್ರೀ ಎಸ್. ಮೇಲಯ್ಯರವರು
ನಿವೃತ್ತ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್
ನೀವು ನಮ್ಮನ್ನಗಲಿ ಇಂದಿಗೆ 35 ವರ್ಷವಾಯಿತು. ನಿಮ್ಮನ್ನು ನೆನೆಯದ ದಿನವಿಲ್ಲ, ನೀವು ಮನೆಗೆ ಧರ್ಮಜನಂತೆ ಕರ್ಮದಿ ಯೋಗಿಯಂತೆ, ಆದರ್ಶದಿ ರಾಮನಂತೆ ಎಲ್ಲರಿಗೂ ಹಿತ ಕೋರುವ ಹೆತ್ತವರ ಪೂಜಿಸುವ ನಿಮ್ಮ ಹಿರಿತನ ಇಂದಿಗೂ ಎಂದಿಗೂ ಎಲ್ಲರಿಗೂ ದಾರಿದೀಪವಾಗಿದೆ.
ನಿಮಗೆ ಶಾಂತಿ ಕೋರುವ
ಮಕ್ಕಳು, ಅಳಿಯಂದಿರು, ಮತ್ತು ಮೊಮ್ಮಕ್ಕಳು.

ಚಿನ್ನ: ಹೂಡಿಕೆಗೆ 6 ದಾರಿಗಳು



ಬಂಡವಾಳ ಮಾರುಕಟ್ಟೆ
ಅವಿನಾಶ್ ಕೆ.ಟಿ.

ಚಿನ್ನದ ಮೇಲೆ ಹೂಡಿಕೆ ಎಂದಾಕ್ಷಣ ಬಹುತೇಕರ ಮನಸ್ಸಿನಲ್ಲಿ ಮೂಡುವ ಚಿತ್ರಣ ಆಭರಣ ಖರೀದಿ. ಆದರೆ ಒಡವೆ ಖರೀದಿಯ ಆಚೆಗೂ ಚಿನ್ನದ ಮೇಲಿನ ಹೂಡಿಕೆಯಲ್ಲಿ ಹಲವು ಆಯ್ಕೆಗಳಿವೆ. ಇಟಿಎಫ್, ಮ್ಯೂಚುವಲ್ ಫಂಡ್, ಸಾವರಿನ್ ಗೋಲ್ಡ್ ಬಾಂಡ್, ಡಿಜಿಟಲ್ ಗೋಲ್ಡ್ ಹೀಗೆ ವಿವಿಧ ಮಾದರಿಯ ಹೂಡಿಕೆಗಳು ಜನಪ್ರಿಯವಾಗಿವೆ. ಚಿನ್ನದ ಮೇಲೆ ಹೂಡಿಕೆ ಮಾಡಲು ಇರುವ ವಿವಿಧ ಅನುಕೂಲಕರ ಆಯ್ಕೆಗಳ ಬಗ್ಗೆ ಹೆಚ್ಚು ತಿಳಿಯೋಣ.

1) ಆಭರಣ ಖರೀದಿ: ಚಿನ್ನದ ಆಭರಣ ಖರೀದಿಸುವ ಮೂಲಕ ಅನೇಕರು ಹೂಡಿಕೆ ಆರಂಭಿಸಿರುವುದಾಗಿ ಭಾವಿಸುತ್ತಾರೆ. ಆದರೆ ಒಡವೆ ಖರೀದಿಯು ವಾಸ್ತವದಲ್ಲಿ ಹೂಡಿಕೆ ಅಲ್ಲ. ವೈಯಕ್ತಿಕ ಖುಷಿಗಾಗಿ ಚಿನ್ನ ತೆಗೆದುಕೊಳ್ಳುವುದು ತಪ್ಪಲ್ಲ. ಆದರೆ ಅದನ್ನು ಹೂಡಿಕೆ ಎಂದು ಭಾವಿಸಬೇಕಾಗಿಲ್ಲ. ಚಿನ್ನದ ಆಭರಣ ಖರೀದಿಸುವಾಗ ಬಹಳ ದೊಡ್ಡ ಹೊರೆ ಬೀಳುವುದು ಮೇಕಿಂಗ್ ಮತ್ತು ವೇಸ್ಟೇಜ್ ಶುಲ್ಕದ ಮೂಲಕ. ಸದ್ಯ ಮೇಕಿಂಗ್ ಚಾರ್ಜಸ್ ಶೇ 15ರಿಂದ ಶೇ 30ರವರೆಗೂ ಇದೆ. ಆಭರಣದ ವಿನ್ಯಾಸ ಹೇಗಿದೆ ಎನ್ನುವುದರ ಆಧಾರದಲ್ಲಿ ಮೇಕಿಂಗ್ ಚಾರ್ಜಸ್ ನಿರ್ಧಾರವಾಗುತ್ತದೆ. ಪುರಾತನ ಮಾದರಿಯ ಆಭರಣಗಳಾದಲ್ಲಿ ಶೇ 30ರವರೆಗೂ ಮೇಕಿಂಗ್ ಚಾರ್ಜಸ್ ನೀಡಬೇಕಾಗುತ್ತದೆ. ಇದಲ್ಲದೆ ಚಿನ್ನ ತೆಗೆದುಕೊಳ್ಳುವಾಗ ಶೇ 3ರಷ್ಟು ಜಿಎಸ್‌ಟಿ ತೆರಬೇಕಾಗುತ್ತದೆ. ಆಭರಣ ಖರೀದಿಸುವಾಗ ಅದರ ಶುದ್ಧತೆಯನ್ನು ದೃಢಪಡಿಸಿಕೊಳ್ಳುವುದು ಕೂಡ ಸವಾಲು. ಆಭರಣದ ಸುರಕ್ಷತೆಗಾಗಿ ಲಾಕರ್ ವ್ಯವಸ್ಥೆ ಬೇಕಾಗುತ್ತದೆ. ಈ ಎಲ್ಲ ವಿಚಾರಗಳನ್ನು ಪರಿಗಣಿಸಿ ನೋಡಿದಾಗ ವೈಯಕ್ತಿಕ ಸಂತೋಷಕ್ಕೆ ಆಭರಣ ಖರೀದಿಸುದು ತಪ್ಪಲ್ಲವಾದರೂ, ಅದು ಹೂಡಿಕೆ ಆಗುವುದಿಲ್ಲ ಎನ್ನುವುದು ಅರಿವಿಗೆ ಬರುತ್ತದೆ.

2. ಚಿನ್ನದ ಬಿಸ್ಕೆಟ್ ಖರೀದಿ: ಚಿನ್ನದ ಬಿಸ್ಕೆಟ್ ಖರೀದಿ ಚಿನ್ನದ ಮೇಲಿನ ಹೂಡಿಕೆಯ ಒಂದು ವಿಧ. ಚಿನ್ನದ ಬಿಸ್ಕೆಟ್ ಖರೀದಿ ವೇಳೆ ಮೇಕಿಂಗ್ ಚಾರ್ಜಸ್ ಗೊಡವೆ ಇರುವುದಿಲ್ಲ. ಚಿನ್ನದ ದರದ ಮೇಲೆ ಶೇ 3ರಷ್ಟು ಜಿಎಸ್‌ಟಿ ಪಾವತಿ ಮಾಡಬೇಕಾಗುತ್ತದೆ. ಹಾಲ್‌ಮಾರ್ಕ್ ಇರುವ ಗಟ್ಟಿಯನ್ನು ಖರೀದಿಸಿದರೆ ಗುಣಮಟ್ಟದ ಬಗ್ಗೆ ಚಿಂತಿಸಬೇಕಾಗಿರುವುದಿಲ್ಲ. ಆದರೆ ಹೆಚ್ಚು ಗಟ್ಟಿಗಳನ್ನು ಖರೀದಿಸಿದರೆ ಅವುಗಳ ಸುರಕ್ಷತೆಗಾಗಿ ನೀವು ಲಾಕರ್ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ.

3. ಡಿಜಿಟಲ್ ಚಿನ್ನ: ಚಿನ್ನವನ್ನು ಡಿಜಿಟಲ್ ರೂಪದಲ್ಲಿ ಖರೀದಿಸಲು ಅನೇಕ ವೇದಿಕೆಗಳಿವೆ. ₹ 100, ₹ 200, ₹ 500 ಹೀಗೆ ಸಣ್ಣ ಮೊತ್ತದ ಚಿನ್ನ ಖರೀದಿಸಲು ಸಾಧ್ಯವಿದೆ. ಡಿಜಿಟಲ್ ರೂಪದಲ್ಲಿ ಚಿನ್ನ ಖರೀದಿಸಿದಾಗ ಶೇ 3ರಷ್ಟು ಜಿಎಸ್‌ಟಿ ಜೊತೆಗೆ ಸಣ್ಣ ಮೊತ್ತವಾಗಿ ಪ್ಲಾಟ್‌ಫಾರಂ ನಿರ್ವಹಣಾ ಶುಲ್ಕ ಪಾವತಿಸಬೇಕಾಗುತ್ತದೆ. ಈ ಮಾದರಿಯಲ್ಲಿ ಚಿನ್ನ ಖರೀದಿಸಿದಾಗ ನಗದೀಕರಣ ಸುಲಭ. ಅಲ್ಲದೆ ಸುರಕ್ಷತೆ ಬಗ್ಗೆ ತಲೆಕೆಡಿಸಿಕೊಳ್ಳಬೇಕಿಲ್ಲ.

4. ಗೋಲ್ಡ್ ಇಟಿಎಫ್: ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಇಟಿಎಫ್‌ಗಳ (ವಿನಿಮಯ ವಹಿವಾಟು ನಿಧಿ) ಮೂಲಕವೂ ಚಿನ್ನದ ಮೇಲೆ ಹೂಡಿಕೆ ಮಾಡಬಹುದು. ಆದರೆ ಈ ಹೂಡಿಕೆಗೆ ನಿಮ್ಮ ಬಳಿ ಡಿ-ಮ್ಯಾಟ್ ಖಾತೆ ಇರಬೇಕು. ಎಚ್‌ಡಿಎಫ್‌ಸಿ ಗೋಲ್ಡ್ ಇಟಿಎಫ್, ಯುಟಿಐ ಗೋಲ್ಡ್, ನಿಪ್ಪಾನ್ ಇಟಿಎಫ್ ಗೋಲ್ಡ್, ಎಸ್‌ಬಿಐ ಗೋಲ್ಡ್ ಇಟಿಎಫ್ ಈ ಮಾದರಿಯ ಹೂಡಿಕೆಗೆ ಕೆಲವು ಉದಾಹರಣೆಗಳು. ಚಿನ್ನದ ಬೆಲೆ ಹೆಚ್ಚಾದಂತೆ ಗೋಲ್ಡ್ ಇಟಿಎಫ್ ಯೂನಿಟ್ ಮೌಲ್ಯ ಹೆಚ್ಚಾಗುತ್ತದೆ. ಅದು ತಗ್ಗಿದರೆ ಇಟಿಎಫ್ ಮೌಲ್ಯವೂ ತಗ್ಗುತ್ತದೆ. ಇಟಿಎಫ್ ಖರೀದಿಗೆ ಶೇ 0.5ರಿಂದ ಶೇ 0.6ರಷ್ಟು ಶುಲ್ಕ ನೀಡಬೇಕಾಗುತ್ತದೆ. ನಿಮಗೆ ಬೇಕಾದಾಗ ಖರೀದಿ ಮತ್ತು ಮಾರಾಟ ಸಾಧ್ಯವಿರುವುದರಿಂದ ಇಟಿಎಫ್‌ಗಳಲ್ಲಿ ನಗದೀಕರಣ ಸುಲಭ.

5. ಗೋಲ್ಡ್ ಮ್ಯೂಚುವಲ್ ಫಂಡ್: ಮ್ಯೂಚುವಲ್ ಫಂಡ್‌ಗಳ ಮೂಲಕವೂ ಚಿನ್ನದ ಮೇಲೆ ಹೂಡಿಕೆ ಮಾಡಬಹುದು. ಎಕ್ಸಿಸ್ ಗೋಲ್ಡ್ ಫಂಡ್, ಕೋಟಕ್ ಗೋಲ್ಡ್ ಫಂಡ್, ಎಸ್‌ಬಿಐ ಗೋಲ್ಡ್ ಫಂಡ್, ಎಚ್‌ಡಿಎಫ್‌ಸಿ ಗೋಲ್ಡ್ ಫಂಡ್ ಕೆಲವು ಉದಾಹರಣೆಗಳು. ಗೋಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲಿ ನಿರ್ವಹಣಾ ಶುಲ್ಕ ಶೇ 0.6ರಿಂದ ಶೇ 1ರವರೆಗೆ ಇರುತ್ತದೆ. ಬೇಕಾದಾಗ ಮಾರಾಟ ಮಾಡುವ ವ್ಯವಸ್ಥೆ ಇರುವುದರಿಂದ ಗೋಲ್ಡ್ ಮ್ಯೂಚುವಲ್ ಫಂಡ್‌ಗಳಲ್ಲಿ ನಗದೀಕರಣ ಸುಲಭ.

6. ಸಾವರಿನ್ ಗೋಲ್ಡ್ ಬಾಂಡ್: ಚಿನ್ನದ ಮೌಲ್ಯಕ್ಕೆ ಪ್ರತಿಯಾಗಿ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನೀಡುವ ಬಾಂಡ್‌ಗಳನ್ನು ಸಾವರಿನ್ ಗೋಲ್ಡ್ ಬಾಂಡ್ ಎನ್ನುತ್ತಾರೆ. ಸಾವರಿನ್ ಗೋಲ್ಡ್ ಬಾಂಡ್‌ಗಳನ್ನು ಸರ್ಕಾರದ ಪರವಾಗಿ ಆರ್‌ಬಿಐ ವಿತರಿಸುತ್ತದೆ. ಘನರೂಪದ ಚಿನ್ನದ ಬದಲಿಗೆ ಬಾಂಡ್ ವಿತರಿಸಲಾಗುತ್ತದೆ. ಪ್ರತಿ ಬಾಂಡ್ ಒಂದು ಗ್ರಾಂ ಚಿನ್ನಕ್ಕೆ ಸಮಾನವಾದ ಮೌಲ್ಯವನ್ನು ಪ್ರತಿನಿಧಿಸುತ್ತದೆ. 2022-23ನೇ ಸಾಲಿನ 1ನೇ ಹಂತದ ಬಾಂಡ್ ವಿತರಣೆಯಯಲ್ಲಿ ಪ್ರತಿ ಗ್ರಾಂ ಚಿನ್ನದ ಮೌಲ್ಯವನ್ನು ₹ 5,091ಕ್ಕೆ ನಿಗದಿಪಡಿಸಲಾಗಿತ್ತು. ಪ್ರಮುಖ ಅಂಚೆ ಕಚೇರಿಗಳು, ನಿಗದಿತ ಬ್ಯಾಂಕ್ ಶಾಖೆಗಳಿಂದ ಇವನ್ನು ಖರೀದಿಸಬಹುದು. ಡಿ-ಮ್ಯಾಟ್ ಖಾತೆ ಇಲ್ಲದಿದ್ದರೂ ಗೋಲ್ಡ್ ಬಾಂಡ್ ಖರೀದಿ ಸಾಧ್ಯವಿದೆ. ಆಭರಣ ಚಿನ್ನದ ಮೇಲೆ ಹೂಡಿಕೆ ಮಾಡಿದಾಗ ಚಿನ್ನದ ಬೆಲೆ ಹೆಚ್ಚಳವಾದಾಗ ಮಾತ್ರ ಗಳಿಕೆ ಸಾಧ್ಯ. ಆದರೆ ಸಾವರಿನ್ ಗೋಲ್ಡ್ ಬಾಂಡ್‌ನಲ್ಲಿ ಚಿನ್ನದ ಬೆಲೆ ಹೆಚ್ಚಳವಾದಾಗ ಅದರ ಲಾಭ ಸಿಗುವ ಜೊತೆಗೆ ವಾರ್ಷಿಕ ಶೇ 2.5ರಷ್ಟು ಬಡ್ಡಿ ಲಾಭವೂ ಸಿಗುತ್ತದೆ. ಪ್ರತಿ 6 ತಿಂಗಳಿಗೊಮ್ಮೆ ಬಡ್ಡಿ ಪಾವತಿಯಾಗುತ್ತದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಅಲ್ಪ ಕುಸಿತ ದಾಖಲಿಸಿದ ಷೇರುಪೇಟೆ



ಸತತ ನಾಲ್ಕು ವಾರಗಳಿಂದ ಗಳಿಕೆಯ ಹಾದಿಯಲ್ಲಿದ್ದ ಷೇರುಪೇಟೆ ಸೂಚ್ಯಂಕಗಳು ಕುಸಿತ ದಾಖಲಿಸಿವೆ. ನವೆಂಬರ್ 18ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಇಳಿಕೆ ಕಂಡಿವೆ. 61,663 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ಶೇ 0.21ರಷ್ಟು ಕುಸಿದಿದೆ. 18,307 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ನಿಫ್ಟಿ ಶೇ 0.22ರಷ್ಟು ಇಳಿಕೆಯಾಗಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಮಿಶ್ರ ಪ್ರತಿಕ್ರಿಯೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಕುಸಿತಕ್ಕೆ ಕಾರಣ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 2.3ರಷ್ಟು ಜಿಗಿದಿದ್ದು ಬ್ಯಾಂಕ್ ನಿಫ್ಟಿ ಸೂಚ್ಯಂಕ ಶೇ 0.7ರಷ್ಟು ಹೆಚ್ಚಳ ದಾಖಲಿಸಿದೆ. ಮತ್ತೊಂದೆಡೆ ನಿಫ್ಟಿ ಮಾಧ್ಯಮ ಸೂಚ್ಯಂಕ ಶೇ 5.3ರಷ್ಟು, ವಾಹನ ಸೂಚ್ಯಂಕ ಶೇ 2ರಷ್ಟು, ಎಫ್‌ಎಂಸಿಜಿ ಮತ್ತು ಎನರ್ಜಿ ಸೂಚ್ಯಂಕ ತಲಾ ಶೇ 1.7ರಷ್ಟು ಕುಸಿದಿವೆ. ಬಿಎಸ್‌ಇ ಮಿಡ್‌ಕ್ಯಾಪ್ ಸೂಚ್ಯಂಕ ಶೇ 1.3ರಷ್ಟು ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 0.8ರಷ್ಟು ಇಳಿಕೆಯಾಗಿವೆ.

ಪೇಟಿಎಂ, ಸ್ಟಾರ್ ಹೆಲ್ತ್ ಆ್ಯಂಡ್ ಅಲೈಡ್ ಇನ್ಶೂರೆನ್ಸ್ ಕಂಪನಿ, ಕೋಲ್ ಇಂಡಿಯಾ, ಜೊಮಾಟೊ, ನೈಕಾ ಕುಸಿದಿವೆ. ಹಿಂದೂಸ್ತಾನ್ ಜಿಂಕ್, ಕೋಟಕ್ ಮಹೀಂದ್ರ ಬ್ಯಾಂಕ್, ಅಂಬುಜಾ ಸಿಮೆಂಟ್ಸ್, ಇಂಡಸ್ ಟವರ್ಸ್ ಮತ್ತು ಗೋದ್ರೆಜ್ ಕನ್ಸೂಮರ್ ಪ್ರಾಡಕ್ಟ್ಸ್ ಗಳಿಸಿಕೊಂಡಿವೆ.

ಮುನ್ನೋಟ: ಅರಿಹಂತ್ ಇನ್ಸ್ಟಿಟ್ಯೂಟ್ ಲಿ., ಪಿಟಿಸಿ, ನಿಟ್ಕೋ, ಸೀಮನ್ಸ್, ಸಿನಿ ವಿಸ್ತಾ ಲಿ. ಸೇರಿ ಕೆಲವು ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ವಿದ್ಯಮಾನಗಳ ಜೊತೆಗೆ ದೇಶಿಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಡಿಮ್ಯಾಟ್ ಖಾತೆ: ಶೇ 41ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೇಶದಲ್ಲಿ ಡಿಮ್ಯಾಟ್ ಖಾತೆಗಳ ಪ್ರಮಾಣವು ಒಂದು ವರ್ಷದಲ್ಲಿ ಶೇಕಡ 41ರಷ್ಟು ಹೆಚ್ಚಾಗಿದೆ. ಈ ವರ್ಷದ ಅಕ್ಟೋಬರ್ ವೇಳೆಗೆ ಒಟ್ಟು ಡಿಮ್ಯಾಟ್ ಖಾತೆಗಳ ಸಂಖ್ಯೆ 10.4 ಕೋಟಿ ಆಗಿದೆ. ಹಿಂದಿನ ವರ್ಷದ ಅಕ್ಟೋಬರ್ ಸಂದರ್ಭದಲ್ಲಿ ಒಟ್ಟು 7.4 ಕೋಟಿ ಡಿಮ್ಯಾಟ್ ಖಾತೆಗಳು ಇದ್ದವು.

ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವಿಶ್ಲೇಷಕರು ನಡೆಸಿರುವ ಅಧ್ಯಯನ ಪ್ರಕಾರ, ಡಿಮ್ಯಾಟ್ ಖಾತೆ ತೆರೆಯುವ ಪ್ರಮಾಣವು ಆಗಸ್ಟ್‌ನಿಂದ ಕಡಿಮೆ ಆಗುತ್ತಿದೆ. ಆಗಸ್ಟ್‌ನಲ್ಲಿ 26 ಲಕ್ಷ, ಸೆಪ್ಟೆಂಬರ್‌ನಲ್ಲಿ 20 ಹಾಗೂ ಅಕ್ಟೋಬರ್‌ನಲ್ಲಿ 18 ಲಕ್ಷ ಖಾತೆಗಳನ್ನು ತೆರೆಯಲಾಗಿದೆ.

ದೇಶದಲ್ಲಿ ಈಕ್ವಿಟಿಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಈಗಲೂ ಕಡಿಮೆ ಇರುವ ಕಾರಣ, ಮುಂದಿನ ದಿನಗಳಲ್ಲಿ ಡಿಮ್ಯಾಟ್ ಖಾತೆ ತೆರೆಯುವುದು ಹೆಚ್ಚಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಹಿರಿಯ ಸಮೂಹ ಉಪಾಧ್ಯಕ್ಷ ನಿತಿನ್ ಅಗರ್ವಾಲ್ ಹೇಳಿದ್ದಾರೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹545

ಬದಲಾವಣೆ ತರಲು ಕೇಂದ್ರ ಸರ್ಕಾರದ ಪರಿಶೀಲನೆ

ಜಿಎಸ್‌ಟಿ ಕಾಯ್ದೆ: ಕೆಲವು ಶಿಕ್ಷಾರ್ಹ ಅಪರಾಧಗಳು ಹೊರಕ್ಕೆ?

ಮುಖ್ಯಾಂಶಗಳು
- ಕೆಲವು ಅಪರಾಧಗಳಿಗೆ ಐಪಿಸಿ ಅಡಿಯಲ್ಲಿ ಮಾತ್ರ ಶಿಕ್ಷೆ ಸಾಧ್ಯತೆ
- ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 132ಕ್ಕೆ ತಿದ್ದುಪಡಿ ತರಲು ಚಿಂತನೆ



ನವದೆಹಲಿ (ಪಿಟಿಐ): ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಅಡಕವಾಗಿರುವ ಶಿಕ್ಷಾರ್ಹ ಅಪರಾಧಗಳ ಉಲ್ಲೇಖವನ್ನು ಜಿಎಸ್‌ಟಿ ಕಾಯ್ದೆಯಿಂದ ತೆಗೆಯುವ ಬಗ್ಗೆ ಕೇಂದ್ರ ಸರ್ಕಾರ ಪರಿಶೀಲನೆ ನಡೆಸಿದೆ. ಜಿಎಸ್‌ಟಿ ಕಾಯ್ದೆಯನ್ನು ತೆರಿಗೆ ಪಾವತಿದಾರರಿಗೆ ಇನ್ನಷ್ಟು ಸ್ನೇಹಿ ಆಗಿಸುವ ಉದ್ದೇಶ ಇದರ ಹಿಂದಿದೆ.

ಇದಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ಜಿಎಸ್‌ಟಿ ಮಂಡಳಿಯ ಮುಂದಿನ ಸಭೆಯಲ್ಲಿ ಮಂಡಿಸುವ ಸಾಧ್ಯತೆ ಇದೆ. ಇದಕ್ಕೆ ಮಂಡಳಿಯ ಒಪ್ಪಿಗೆ ದೊರೆತಲ್ಲಿ, ಕೇಂದ್ರ ಹಣಕಾಸು ಸಚಿವಾಲಯವು ಜಿಎಸ್‌ಟಿ ಕಾಯ್ದೆಗೆ ಸೂಕ್ತ ತಿದ್ದುಪಡಿಗಳನ್ನು ಶಿಫಾರಸು ಮಾಡಲಿದೆ. ತಿದ್ದುಪಡಿ ಮಸೂದೆಯನ್ನು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

‘ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 132ರಲ್ಲಿ ತರಬೇಕಿರುವ ಬದಲಾವಣೆಗಳನ್ನು ಕಾನೂನು ಸಮಿತಿಯು ಅಂತಿಮಗೊಳಿಸಿದೆ’ ಎಂದು ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಐಪಿಸಿಯಲ್ಲಿ ವಿವರಿಸಲಾಗಿರುವ ರೀತಿಯ ಶಿಕ್ಷಾರ್ಹ ಅಪರಾಧಗಳ ಉಲ್ಲೇಖವನ್ನು ಜಿಎಸ್‌ಟಿ ಕಾಯ್ದೆಯಿಂದ ತೆಗೆಯಬಹುದು ಎಂದು ಅವರು ತಿಳಿಸಿದ್ದಾರೆ.

ತಿದ್ದುಪಡಿಗಳಿಗೆ ಸಂಸತ್ತಿನ ಅನುಮೋದನೆ ದೊರೆತ ನಂತರದಲ್ಲಿ ರಾಜ್ಯಗಳು ತಮ್ಮ ಜಿಎಸ್‌ಟಿ ಕಾಯ್ದೆಯಲ್ಲಿ ಸೂಕ್ತ ಬದಲಾವಣೆಗಳನ್ನು ತರಬೇಕಾಗುತ್ತದೆ.

ನಕಲಿ ಇನ್‌ವಾಯ್ಸ್‌ಗಳನ್ನು ನೀಡುವುದು ಮತ್ತು ಸ್ವೀಕರಿಸುವುದನ್ನು ಐಪಿಸಿಗೆ ಮಾತ್ರ ಅನುಗುಣವಾಗಿ ಶಿಕ್ಷೆಗೆ ಗುರಿಪಡಿಸುವ ಸಾಧ್ಯತೆ ಇದೆ ಎಂದು ಎಎಂಆರ್‌ಜಿ ಆ್ಯಂಡ್ ಅಸೋಸಿಯೇಟ್ಸ್‌ನ ಹಿರಿಯ ಪಾಲುದಾರ, ತೆರಿಗೆ ತಜ್ಞ ರಜತ್ ಮೋಹನ್ ಹೇಳಿದ್ದಾರೆ.

‘ವಂಚನೆಗೆ ಐಪಿಸಿ ಅಡಿಯಲ್ಲಿ ಗರಿಷ್ಠ ಏಳು ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಬಹುದು. ಆದರೆ ಜಿಎಸ್‌ಟಿ ಕಾಯ್ದೆಯ ಅಡಿಯಲ್ಲಿ, ವಂಚನೆಗೆ ಐದು ವರ್ಷಗಳವರೆಗೆ ಮಾತ್ರ ಜೈಲುಶಿಕ್ಷೆ ವಿಧಿಸಬಹುದು. ಈಗ ತರಲು ಉದ್ದೇಶಿಸಿರುವ ಬದಲಾವಣೆಯು, ತೆರಿಗೆ ವಂಚನೆಯ ಮೊತ್ತ ಎಷ್ಟೇ ಇದ್ದರೂ ಅಪರಾಧಿಗಳಿಗೆ ಗರಿಷ್ಠ ಏಳು ವರ್ಷಗಳವರೆಗೆ ಶಿಕ್ಷೆ ವಿಧಿಸಲು ಅವಕಾಶ ಕೊಡಬಹುದು’ ಎಂದು ಅವರು ವಿವರಿಸಿದ್ದಾರೆ.

ಜಿಎಸ್‌ಟಿ ಕಾಯ್ದೆಯ ಸೆಕ್ಷನ್ 132ರ ಅಡಿಯಲ್ಲಿ ಈಗ ಇರುವ ಅವಕಾಶಗಳ ಪ್ರಕಾರ, ವಂಚನೆ ಆಗಿರುವ ತೆರಿಗೆ ಮೊತ್ತ ಆಧರಿಸಿ ಶಿಕ್ಷೆಯ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ ಎಂದು ಮೋಹನ್ ತಿಳಿಸಿದ್ದಾರೆ.

ಪರಿಹಾರ ನಿಧಿಗೆ ಒಪ್ಪಿಗೆ: ಚಾರಿತ್ರಿಕ ಕ್ಷಣ

ನವದೆಹಲಿ: ಈಜಿಪ್ಟ್‌ನಲ್ಲಿ ನಡೆದ ವಿಶ್ವಸಂಸ್ಥೆಯ ಹವಾಮಾನ ಶೃಂಗಸಭೆಯು (ಸಿಒಪಿ27) ಹವಾಮಾನ ಬದಲಾವಣೆಯ ಪರಿಣಾಮದಿಂದ ಉಂಟಾಗುವ ನಷ್ಟ ಮತ್ತು ಹಾನಿ ಭರಿಸಲು ಪರಿಹಾರ ನಿಧಿ ಸ್ಥಾಪಿಸಲು ನಿರ್ಧರಿಸಿದೆ. ಇದು, ಭಾರತ ಸೇರಿ ಹಲವು ರಾಷ್ಟ್ರಗಳ ದೀರ್ಘ ಕಾಲದ ಬೇಡಿಕೆಯಾಗಿತ್ತು.

ಆದರೆ, ಎಲ್ಲ ರೀತಿಯ ಪಳೆಯುಳಿಕೆ ಇಂಧನಗಳ ಬಳಕೆಯನ್ನು ಹಂತ ಹಂತವಾಗಿ ತಗ್ಗಿಸಬೇಕೆಂಬ ಭಾರತದ ಕರೆಗೆ ಯುರೋಪ್ ಒಕ್ಕೂಟ, ಅಮೆರಿಕ ಸೇರಿದಂತೆ ವಿಶ್ವದ ಬಹುದೇಕ ದೇಶಗಳು ಓಗೊಟ್ಟರೂ, ಈ ಎಲ್ಲ ರಾಷ್ಟ್ರಗಳು ನಿರ್ಣಾಯಕ ಒಪ್ಪಂದಕ್ಕೆ ಬರುವಂತೆ ಮಾಡುವಲ್ಲಿ ವಿಫಲವಾಗಿದೆ.

197 ಸದಸ್ಯ ರಾಷ್ಟ್ರಗಳು ಒಪ್ಪಿದ ‘ಪರಿಹಾರ ನಿಧಿ ಸ್ಥಾಪನೆ ಖಾತ್ರಿಪಡಿಸುವ ಸಿಒಪಿ 27ರ ಒಪ್ಪಂದವು ಚಾರಿತ್ರಿಕವಾದುದು. ಇದಕ್ಕಾಗಿ ಇಡೀ ಜಗತ್ತು ತುಂಬಾ ಸಮಯದಿಂದ ಕಾಯುತ್ತಿದೆ’ ಎಂದು ಭಾರತ ಬಣ್ಣಿಸಿದೆ.

ಕಳೆದ ವರ್ಷ ಸ್ಕಾಟ್ಲೆಂಡ್‌ನಲ್ಲಿ ನಡೆದಿದ್ದ ಶೃಂಗಸಭೆಯಲ್ಲಿನ ಒಪ್ಪಂದಕ್ಕೆ ಹೋಲಿಸಿದರೆ ಈ ಬಾರಿ ಹವಾಮಾನ ಬದಲಾವಣೆ ಕುರಿತ ಇತರ ನಿರ್ಣಾಯಕ ವಿಷಯಗಳ ಫಲಿತಾಂಶವು ತುಸು ಪ್ರಗತಿ ಆಗಿರುವುದನ್ನೂ ಪ್ರತಿಬಿಂಬಿಸುತ್ತದೆ.

ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್, ಕೃಷಿ ಮತ್ತು ಆಹಾರ ಭದ್ರತೆಯಲ್ಲಿ ಹವಾಮಾನ ಬದಲಾವಣೆ ಕುರಿತ ಯೋಜನೆಗಳ ಜಾರಿಗೊಳಿಸುವಾಗ ಇಂಗಾಲ ಹೊರಸೂಸುವಿಕೆ ತಗ್ಗಿಸುವ ಹೊಣೆಯನ್ನು ಸಣ್ಣ ರೈತರಿಗೆ ವರ್ಗಾಯಿಸಬಾರದು ಎಂದರು.

ಸಿಒಪಿ 27 ಶುಕ್ರವಾರ ಸಮಾಪನವಾಗಬೇಕಿತ್ತು. ಆದರೆ, ಮಾಲಿನ್ಯ ತಗ್ಗಿಸುವಿಕೆ, ನಷ್ಟ ಮತ್ತು ಹಾನಿ ಪರಿಹಾರ ನಿಧಿ ಸ್ಥಾಪನೆ ವಿಷಯಗಳ ಬಗ್ಗೆ ಒಪ್ಪಂದಕ್ಕೆ ಬರಲು ದೀರ್ಘ ಸಮಯ ತೆಗೆದುಕೊಂಡಿದ್ದರಿಂದ ಶೃಂಗಸಭೆಯು ಭಾನುವಾರದವರೆಗೂ ನಡೆಯಿತು.

ಪರಿಹಾರ ನಿಧಿಗೆ ತಡೆ ಯಾರದು?

ಅಭಿವೃದ್ಧಿ ರಾಷ್ಟ್ರಗಳು ವಿಶೇಷವಾಗಿ ಅಮೆರಿಕ, ಹವಾಮಾನ ಬದಲಾವಣೆಯಿಂದಾಗುವ ಭಾರಿ ಹಾನಿಗಳಿಗೆ ಕಾನೂನುಬದ್ಧವಾಗಿ ಹೊಣೆ ಹೊರಬೇಕಾಗುತ್ತದೆ ಎಂಬ ಆತಂಕದಿಂದ ಈ ಹೊಸ ಪರಿಹಾರ ನಿಧಿ ಸ್ಥಾಪನೆ ಉದ್ದೇಶವನ್ನು ವಿರೋಧಿಸಿತ್ತು. ನಷ್ಟ ಮತ್ತು ಹಾನಿ ಭರಿಸುವ ಹಣಕಾಸು ಸೌಲಭ್ಯದ ಪ್ರಸ್ತಾಪವನ್ನು ಮುಂದಿಡುವ ಜತೆಗೆ, ಸಿಒಪಿ27ರಿಂದ ನಿರ್ಗಮಿಸುವುದಿಲ್ಲ ಎಂದು ಜಿ 77 (ಭಾರತವು ಈ ಗುಂಪಿನ ಭಾಗ) ಮತ್ತು ಚೀನಾ, ಕನಿಷ್ಠ ಅಭಿವೃದ್ಧಿ ಹೊಂದಿದ ದೇಶಗಳು, ದ್ವೀಪ ರಾಷ್ಟ್ರಗಳು, ದುರ್ಬಲ ರಾಷ್ಟ್ರಗಳು ಪಟ್ಟುಹಿಡಿದಿದ್ದವು.

ಸಂಕ್ಷಿಪ್ತ ಸುದ್ದಿ

ಟ್ರಂಪ್ ಟ್ವಿಟರ್ ಖಾತೆ ಸಕ್ರಿಯ

ನ್ಯೂಯಾರ್ಕ್ (ಪಿಟಿಐ): ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಟ್ವಿಟರ್ ಖಾತೆಯು ಎರಡು ವರ್ಷಗಳ ಬಳಿಕ ಸಕ್ರಿಯಗೊಂಡಿದೆ ಎಂದು ಟ್ವಿಟರ್‌ನ ಮಾಲೀಕ ಇಲಾನ್ ಮಸ್ಕ್ ಟ್ವೀಟ್ ಮಾಡಿದ್ದರು.

ಟ್ರಂಪ್ ಖಾತೆ ಸಕ್ರಿಯಗೊಳಿಸಬೇಕೇ? ಬೇಡವೇ? ಎಂಬ ಕುರಿತು ನಡೆಸಿದ್ದ ಆನ್‌ಲೈನ್ ಸಮೀಕ್ಷೆಯಲ್ಲಿ ಶೇ 51.8ರಷ್ಟು ಜನರು ಪರವಾಗಿ, ಶೇ 48.2 ಜನರು ವಿರುದ್ಧವಾಗಿ ಮತ ಚಲಾಯಿಸಿದ್ದರು. ‘ಜನರು ಮಾತನಾಡಿದ್ದಾರೆ. ಜನರ ಮಾತು ದೇವರ ಮಾತಿದ್ದಂತೆ’ ಎಂದು ಮಸ್ಕ್ ಟ್ವೀಟ್‌ನಲ್ಲಿ ತಿಳಿಸಿದ್ದಾರೆ. ಟ್ರಂಪ್ ಟ್ವಿಟರ್ ಖಾತೆ ಮರುಸಕ್ರಿಯ ಸಂದರ್ಭದಲ್ಲಿ ಅನುಯಾಯಿಗಳ ಸಂಖ್ಯೆ 10 ಲಕ್ಷ ಇತ್ತು. ನಂತರದ 30 ನಿಮಿಷದಲ್ಲಿ 21 ಲಕ್ಷಕ್ಕೆ ಹೆಚ್ಚಿದೆ ಎನ್ನಲಾಗಿದೆ.

19 ಜನರಿಗೆ ಛಡಿಯೇಟು ಶಿಕ್ಷೆ

ಕಾಬೂಲ್ (ಎಪಿ): ಅಕ್ರಮ ಸಂಬಂಧ, ಕಳವು, ಮನೆಯಿಂದ ಓಡಿಹೋಗಿರುವುದು ಸೇರಿ ವಿವಿಧ ಆರೋಪಗಳು ಸಾಬೀತಾದ್ದರಿಂದ ಒಂಭತ್ತು ಮಹಿಳೆಯರು ಸೇರಿ 19 ಮಂದಿಗೆ ಅಫ್ಗಾನಿಸ್ತಾನದಲ್ಲಿ ಛಡಿಯೇಟು ಶಿಕ್ಷೆ ನೀಡಲಾಗಿದೆ. ಈ ಮೂಲಕ ದೇಶದಲ್ಲಿ ಇಸ್ಲಾಮಿಕ್ ಕಾನೂನು ಅಥವಾ ಶರಿಯಾ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ ಎಂಬ ಸೂಚನೆಯನ್ನು ತಾಲಿಬಾನ್ ಆಡಳಿತವು ದೃಢಪಡಿಸಿದೆ. ತಕ್ಕರ್ ಪ್ರಾಂತ್ಯದ ತಲೋಗನ್ ನಗರದ ಪ್ರಮುಖ ಮಸೀದಿಯೊಂದರ ಎದುರು ತಲಾ 39 ಛಡಿಯೇಟು ನೀಡುವ ಶಿಕ್ಷೆ ಜಾರಿಗೊಳಿಸಲಾಗಿದೆ. ಶಿಕ್ಷೆಗೆ ಒಳಗಾದವರು ಯಾರು, ಛಡಿಯೇಟು ಬಳಿಕ ಅವರ ಸ್ಥಿತಿ ಏನಾಗಿತ್ತು ಎಂಬುದರ ವಿವರವನ್ನು ನೀಡಿಲ್ಲ.

ಚೀನಾ: ಕೋವಿಡ್‌ಗೆ ಬಲಿ

ಬೀಜಿಂಗ್ (ಎಪಿ): ಚೀನಾ ರಾಜಧಾನಿಯಲ್ಲಿ ಕೋವಿಡ್‌ನಿಂದ 87 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ. ಸೋಂಕು ತಡೆಗೆ ಕಠಿಣ ಕ್ರಮ ಜಾರಿಗೊಳಿಸಿದ 6 ತಿಂಗಳ ನಂತರ ವರದಿಯಾದ ಮೊದಲ ಪ್ರಕರಣ ಇದಾಗಿದೆ. ದೇಶದಲ್ಲಿ ಶೇ 92ರಷ್ಟು ಜನರಿಗೆ ಕನಿಷ್ಠ ಒಂದು ಡೋಸ್ ಲಸಿಕೆ ನೀಡಿದ್ದು, 80 ವರ್ಷ ಮೀರಿದವರಲ್ಲಿ ಲಸಿಕೆ ಪಡೆದವರು ಕಡಿಮೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗ ತಿಳಿಸಿದೆ.







1. ವಿಶ್ವಕಪ್ ಟೂರ್ನಿಯ ಉದ್ಘಾಟನಾ ಸಮಾರಂಭ ನಡೆದ ಅಲ್ ಬೈತ್ ಕ್ರೀಡಾಂಗಣದಲ್ಲಿ ಸುಡುಮದ್ದು ಪ್ರದರ್ಶನ ಮೂಡಿಸಿದ ಚಿತ್ತಾರ. 2. ದಕ್ಷಿಣ ಕೊರಿಯಾದ ಗಾಯಕ ಜಾಂಗ್ ಕೂಕ್ ಅವರು ಪ್ರದರ್ಶನ ನೀಡಿದರು. 3. ಕಲಾವಿದರು ನೃತ್ಯ ಪ್ರದರ್ಶಿಸಿದರು –ಎಎಫ್‌ಪಿ ಚಿತ್ರಗಳು

ಇರಾನ್ ತಂಡದ ವಿರುದ್ಧ ಸೆಣಸು ಇಂದು: ಶುಭಾರಂಭದ ನಿರೀಕ್ಷೆ

ಇಂಗ್ಲೆಂಡ್‌ಗೆ ಹ್ಯಾರಿ ಕೇನ್ ಬಲ



ಇಂಗ್ಲೆಂಡ್ ತಂಡದ ಹ್ಯಾರಿ ಕೇನ್ –ಎಎಫ್‌ಪಿ ಚಿತ್ರ

ದೋಹಾ (ರಾಯಿಟರ್ಸ್): ಐದೂವರೆ ದಶಕಗಳ ಪ್ರಶಸ್ತಿ ಬರ ನೀಗಿಸುವ ಗುರಿ ಇಟ್ಟುಕೊಂಡಿರುವ ಇಂಗ್ಲೆಂಡ್ ತಂಡ, ವಿಶ್ವಕಪ್ ಟೂರ್ನಿಯಲ್ಲಿ ತನ್ನ ಅಭಿಯಾನವನ್ನು ಸೋಮವಾರ ಆರಂಭಿಸಲಿದೆ.

ದೋಹಾದ ಅಲ್ ಖಲೀಫಾ ಇಂಟರ್‌ನ್ಯಾಷನಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಹ್ಯಾರಿ ಕೇನ್ ಬಳಗ, ಏಷ್ಯಾದ ಫುಟ್‌ಬಾಲ್ ಶಕ್ತಿಗಳಲ್ಲಿ ಒಂದಾಗಿರುವ ಇರಾನ್ ತಂಡದ ಸವಾಲು ಎದುರಿಸಲಿದೆ. ಉಭಯ ತಂಡಗಳು ಅಂತರರಾಷ್ಟ್ರೀಯ ಪಂದ್ಯದಲ್ಲಿ ಎದುರಾಗುತ್ತಿರುವುದು ಇದೇ ಮೊದಲು.

ಇದುವರೆಗೆ 16 ಸಲ ವಿಶ್ವಕಪ್‌ನಲ್ಲಿ ಆಡಿರುವ ಇಂಗ್ಲೆಂಡ್, ಒಮ್ಮೆ ಮಾತ್ರ (1966) ಕಿರೀಟ ಮುಡಿಗೇರಿಸಿಕೊಂಡಿತ್ತು. ಆ ಬಳಿಕ ಸತತ ನಿರಾಸೆ ಅನುಭವಿಸಿದೆ. 2018 ರಲ್ಲಿ ರಷ್ಯಾದಲ್ಲಿ ನಡೆದಿದ್ದ ಟೂರ್ನಿಯ ಸೆಮಿಫೈನಲ್‌ನಲ್ಲಿ ಇಟಲಿ ಎದುರು ಪೆನಾಲ್ಟಿ ಶೂಟೌಟ್‌ನಲ್ಲಿ ಸೋತಿತ್ತು.

75 ಅಂತರರಾಷ್ಟ್ರೀಯ ಪಂದ್ಯಗಳಿಂದ 51 ಗೋಲುಗಳನ್ನು ಗಳಿಸಿರುವ ಕೇನ್ ಅವರ ಮೇಲೆ ಇಂಗ್ಲೆಂಡ್ ಹೆಚ್ಚಿನ ಭರವಸೆ ಇಟ್ಟಿದೆ. ಕಳೆದ ವಿಶ್ವಕಪ್‌ನಲ್ಲಿ ಆರು ಗೋಲುಗಳನ್ನು ಗಳಿಸಿದ್ದ ಅವರು 'ಗೋಲ್ಡನ್ ಬೂಟ್' ಗೌರವ ಪಡೆದಿದ್ದರು. ಜೇಮ್ಸ್ ಮ್ಯಾಡಿಸನ್, ಜಾಕ್ ಗ್ರೇಲಿಶ್, ಫಿಲ್ ಫಾಡೆನ್ ಮತ್ತು 19 ವರ್ಷದ ಮಿಡ್‌ಫೀಲ್ಡರ್ ಜೂಡ್ ಬೆಲಿಂಗ್‌ಹ್ಯಾಂ ಅವರಿಂದಲೂ ಉತ್ತಮ ಪ್ರದರ್ಶನ ನಿರೀಕ್ಷಿಸುತ್ತಿದೆ.



ಇರಾನ್ ಆಟಗಾರರ ಅಭ್ಯಾಸ –ಎಎಫ್‌ಪಿ ಚಿತ್ರ

ಮುಖ್ಯಾಂಶಗಳು

- ಉಭಯ ತಂಡಗಳು ಎದುರಾಗಲಿರುವುದು ಇದೇ ಮೊದಲು
- 1966ರ ಬಳಿಕ ಇಂಗ್ಲೆಂಡ್ ವಿಶ್ವಕಪ್ ಗೆದ್ದಿಲ್ಲ
- ಕಳೆದ ಸಲ ಸೆಮಿಫೈನಲ್‌ನಲ್ಲಿ ಸೋತಿತ್ತು

ಇಂದಿನ ಪಂದ್ಯಗಳು

ಇಂಗ್ಲೆಂಡ್–ಇರಾನ್
ಸಂಜೆ 6.30

ಸೆನೆಗಲ್–ನೆದರ್ಲೆಂಡ್ಸ್
ರಾತ್ರಿ 9.30

ಅಮೆರಿಕ–ವೇಲ್ಸ್
ತಡರಾತ್ರಿ 12.30

ಇಂಗ್ಲೆಂಡ್ ತಂಡ ತಾನಾಡಿದ ಕೊನೆಯ ಆರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಗೆಲುವು ಪಡೆದಿಲ್ಲ. ವಿಶ್ವಕಪ್‌ಗೆ ಬರುವ ಮುನ್ನ ಆಡಿದ್ದ ಅಂತಿಮ ಪಂದ್ಯದಲ್ಲಿ ಜರ್ಮನಿ ಜತೆ 3–3 ಗೋಲುಗಳ ಡ್ರಾ ಸಾಧಿಸಿತ್ತು. ವಿಶ್ವಕಪ್ ಟೂರ್ನಿಯ ಅರ್ಹತಾ ಸುತ್ತಿನ 10 ಪಂದ್ಯಗಳಲ್ಲಿ ಎಂಟರಲ್ಲಿ ಗೆದ್ದಿತ್ತು.

ಆತ್ಮವಿಶ್ವಾಸದಲ್ಲಿ ಇರಾನ್: ಮತ್ತೊಂದೆಡೆ ಇರಾನ್ ತಂಡ ವಿಶ್ವಕಪ್ ಟೂರ್ನಿಯ ಸಿದ್ಧತೆಯ ಹಾದಿಯಲ್ಲಿ ಸಾಕಷ್ಟು ಸವಾಲುಗಳನ್ನು ಎದುರಿಸಿದೆ. ಒಂದು ತಿಂಗಳಿಗೂ ಅಧಿಕ ಸಮಯದಿಂದ ಇರಾನ್‌ನಲ್ಲಿ ನಡೆಯುತ್ತಿರುವ ಸರ್ಕಾರಿ ವಿರೋಧಿ ಪ್ರತಿಭಟನೆ, ತಂಡದ ತಯಾರಿಯ ಮೇಲೂ ತನ್ನ ಪರಿಣಾಮ ಬೀರಿದೆ.

ಸ್ಟ್ರೈಕರ್ ಸರ್ದರ್ ಅಜ್‌ಮೋನ್ ಅವರನ್ನೊಳಗೊಂಡ ಇರಾನ್ ಫಿಫಾ ರ‍್ಯಾಂಕಿಂಗ್‌ನಲ್ಲಿ 20ನೇ ಸ್ಥಾನದಲ್ಲಿದ್ದು, ಎದುರಾಳಿ ತಂಡಕ್ಕೆ ಪ್ರಬಲ ಪೈಪೋಟಿ ನೀಡುವ ಸಾಮರ್ಥ್ಯ ಹೊಂದಿದೆ.

ಇರಾನ್ ಸತತ ಮೂರನೇ ವಿಶ್ವಕಪ್‌ನಲ್ಲಿ ಆಡುತ್ತಿದೆ. ಒಟ್ಟಾರೆ ಐದು ವಿಶ್ವಕಪ್ ಟೂರ್ನಿಗಳಲ್ಲಿ ಆಡಿದೆಯಾದರೂ, ಒಮ್ಮೆಯೂ ಗುಂಪು ಹಂತವನ್ನು ದಾಟಿಲ್ಲ.

ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನೆಮಾ, ಎಂಟಿವಿ.

ವರ್ಣರಂಜಿತ ಚಾಲನೆ

ಅಲ್ ಬೈತ್ ಕ್ರೀಡಾಂಗಣದಲ್ಲಿ ಅರಬ್ ಸಂಸ್ಕೃತಿ ಅನಾವರಣ

ದೋಹಾ (ರಾಯಿಟರ್ಸ್): ಕಲಾವಿದರ ಮನಮೋಹಕ ಪ್ರದರ್ಶನ, ನೆರಳು ಬೆಳಕು ಮೂಡಿಸಿದ ಚಿತ್ತಾರ, ಅರಬ್ ಸಂಸ್ಕೃತಿಯ ಅನಾವರಣದೊಂದಿಗೆ ಫಿಫಾ ವಿಶ್ವಕಪ್ ಟೂರ್ನಿಗೆ ಭಾನುವಾರ ವರ್ಣರಂಜಿತ ಚಾಲನೆ ಲಭಿಸಿತು.

ದೋಹಾದಿಂದ ಉತ್ತರಕ್ಕೆ 50 ಕಿ.ಮೀ ದೂರದ ಅಲ್ ಖೋರ್‌ನಲ್ಲಿರುವ ಅಲ್ ಬೈತ್ ಕ್ರೀಡಾಂಗಣದಲ್ಲಿ ನಡೆದ ಉದ್ಘಾಟನಾ ಸಮಾರಂಭ ಫುಟ್‌ಬಾಲ್ ಪ್ರೇಮಿಗಳ ಮನಗೆದ್ದಿತು. ಕತಾರ್– ಈಕ್ವೆಡಾರ್ ನಡುವಿನ ಪಂದ್ಯಕ್ಕೂ ಮುನ್ನ ನಡೆದ ಕಾರ್ಯಕ್ರಮವನ್ನು ವೀಕ್ಷಿಸಲು 60 ಸಾವಿರ ಆಸನ ಸಾಮರ್ಥ್ಯದ ಕ್ರೀಡಾಂಗಣದಲ್ಲಿ ವಿವಿಧ ದೇಶಗಳಿಂದ ಬಂದಿದ್ದ ಅಭಿಮಾನಿಗಳು ಕಿಕ್ಕಿರಿದು ನೆರೆದಿದ್ದರು.

ದಕ್ಷಿಣ ಕೊರಿಯಾದ 'ಬಿಟಿಎಸ್' ಬ್ಯಾಂಡ್‌ನ ಕಲಾವಿದ ಜಾಂಗ್ ಕೂಕ್ ಅವರು ಕತಾರ್‌ನ ಗಾಯಕ ಫಹದ್ ಅಲ್ ಖುಬೈಸಿ ಜತೆ ಟೂರ್ನಿಯ ಗೀತೆ ಹಾಡಿದರು. ಅಮೆರಿಕದ ನಟ ಮಾರ್ಗನ್ ಫ್ರೀಮನ್ ಪಾಲ್ಗೊಂಡರು. ಅರೇಬಿಯಾದ ಸಾಂಪ್ರದಾಯಿಕ ನೃತ್ಯ ಸಮಾರಂಭದ ಕಳೆ ಹೆಚ್ಚಿಸಿತು.

ಕತಾರ್ ದೊರೆ ಶೈಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಮಾತನಾಡಿ, 'ಕತಾರ್ ಹಾಗೂ ಅರಬ್ ನಾಡಿನ ಪರವಾಗಿ ನಾನು ಎಲ್ಲರನ್ನೂ ವಿಶ್ವಕಪ್ ಟೂರ್ನಿಗೆ ಸ್ವಾಗತಿಸುತ್ತಿದ್ದೇನೆ' ಎಂದರು.

'ವಿವಿಧ ದೇಶಗಳ ಜನರು ವೈವಿಧ್ಯತೆಯಲ್ಲೂ ಏಕತೆಯ ಸಂದೇಶ ಸಾರಲು ಇಲ್ಲಿ ನೆರೆದಿದ್ದಾರೆ. ಕತಾರ್‌ನ ಇತಿಹಾಸದಲ್ಲಿ ಇದೊಂದು ಅಪೂರ್ಣ ಕ್ಷಣ' ಎಂದು ಹೇಳಿದರು.



ಫ್ರಾನ್ಸ್ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಮಾರ್ಸೆಲ್ ದೆಸೈಲಿ ಅವರು ಉದ್ಘಾಟನಾ ಸಮಾರಂಭದಲ್ಲಿ ಫಿಫಾ ಟ್ರೋಫಿ ಪ್ರದರ್ಶಿಸಿದರು

ಎನೆರ್ ಮಿಂಚು; ಈಕ್ವೆಡಾರ್ ಶುಭಾರಂಭ

ದೋಹಾ (ರಾಯಿಟರ್ಸ್): ಆತಿಥೇಯ ಕತಾರ್ ಒಡ್ಡಿದ ಸವಾಲನ್ನು ಮೆಟ್ಟಿನಿಂತ ಈಕ್ವೆಡಾರ್ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಅಲ್ ಬೈತ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯವನ್ನು ಈಕ್ವೆಡಾರ್ 2–0 ಗೋಲುಗಳಿಂದ ಗೆದ್ದಿತು. ಆತಿಥೇಯ ತಂಡವನ್ನು ಬೆಂಬಲಿಸಲು ನೆರೆದಿದ್ದ ಅಭಿಮಾನಿಗಳಿಗೆ ನಿರಾಸೆ ಎದುರಾಯಿತು.

ಈಕ್ವೆಡಾರ್ ತಂಡದ ಎರಡೂ ಗೋಲುಗಳನ್ನು ಗಳಿಸಿದ ಅನುಭವಿ ಸ್ಟ್ರೈಕರ್ ಎನೆರ್ ವಲೆನ್ಸಿಯಾ ಗೆಲುವಿನ ರೂವಾರಿ ಎನಿಸಿದರು. ಎರಡೂ ಗೋಲುಗಳು ಮೊದಲ ಅವಧಿಯಲ್ಲಿ ದಾಖಲಾದವು. ಚೊಚ್ಚಲ ವಿಶ್ವಕಪ್ ಪಂದ್ಯವನ್ನಾಡಿದ ಕತಾರ್ ಎರಡನೇ ಅವಧಿಯಲ್ಲಿ ಪುಟಿದೆದ್ದು ನಿಲ್ಲಲು ಪ್ರಯತ್ನಿಸಿತಾದರೂ ದಕ್ಷಿಣ ಅಮೆರಿಕದ ತಂಡ ಅದಕ್ಕೆ ಅವಕಾಶ ನೀಡಲಿಲ್ಲ.

ಮೊದಲ 10 ನಿಮಿಷಗಳಲ್ಲಿ ಸಮ ಬಲದ ಹೋರಾಟ ನಡೆಯಿತು. ಪಂದ್ಯ ಮುಂದುವರಿದಂತೆ ಈಕ್ವೆಡಾರ್ ಹಿಡಿತ ಬಿಗಿಗೊಳಿಸಿತು. 16ನೇ ನಿಮಿಷದಲ್ಲಿ ಗೋಲು ಗಳಿಸಲು ಮುನ್ನುಗ್ಗಿದ ವಲೆನ್ಸಿಯಾ ಅವರನ್ನು ಎದುರಾಳಿ ಗೋಲ್‌ಕೀಪರ್ ಸಾದ್ ಅಲ್‌ಶೀಬ್ ಕೆಳಕ್ಕೆ ಬೀಳಿಸಿದರು. ಅದಕ್ಕೆ ರೆಫರಿ ಪೆನಾಲ್ಟಿ ಅವಕಾಶ ನೀಡಿದರು. ಪೆನಾಲ್ಟಿ ಕಿಕ್‌ನಲ್ಲಿ ಎನೆರ್ ಗೋಲು ಗಳಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. 31ನೇ ನಿಮಿಷದಲ್ಲಿ ಎನೆರ್ ಎರಡನೇ ಗೋಲು ಗಳಿಸಿದರು. ಏಂಜೆಲೊ ಪ್ರೆಸಿಯಾಡೊ ನೀಡಿದ ಕ್ರಾಸ್‌ನಲ್ಲಿ ಚೆಂಡನ್ನು ಹೆಡ್ ಮಾಡಿ ಗುರಿ ಸೇರಿಸಿದರು. ಕತಾರ್ ತಂಡದ ಸ್ಟಾರ್ ಆಟಗಾರ ಅಲ್ಮೋಜ್ ಅಲಿ ಮತ್ತು ಮೊಹಮ್ಮದ್ ಮುಂತರಿ ಅವರಿಗೆ ಗೋಲು ಗಳಿಸಲು ಉತ್ತಮ ಅವಕಾಶ ದೊರೆತರೂ ಚೆಂಡನ್ನು ಗುರಿ ಸೇರಿಸಲು ವಿಫಲರಾದರು.



ಗೋಲು ಗಳಿಸಿದ ಎನೆರ್ ವಲೆನ್ಸಿಯಾ (ಬಲ) ಅವರು ಸಹ ಆಟಗಾರರೊಂದಿಗೆ ಸಂಭ್ರಮಿಸಿದರು

ಬೆಂಜೆಮಾಗೆ ಗಾಯ: ವಿಶ್ವಕಪ್‌ನಿಂದ ಔಟ್

ದೋಹಾ (ಎಪಿ): ಪ್ರಶಸ್ತಿಯನ್ನು ತನ್ನಲ್ಲೇ ಉಳಿಸಿಕೊಳ್ಳಬೇಕೆಂಬ ಕನಸಿನೊಂದಿಗೆ ಕತಾರ್‌ಗೆ ಬಂದಿರುವ ಫ್ರಾನ್ಸ್ ತಂಡ, ವಿಶ್ವಕಪ್ ಟೂರ್ನಿಯ ಆರಂಭಕ್ಕೆ ಮುನ್ನವೇ ಆಘಾತ ಅನುಭವಿಸಿದೆ.

ಈ ಬಾರಿಯ 'ಬ್ಯಾಲನ್ ಡಿ ಓರ್' ಪ್ರಶಸ್ತಿ ವಿಜೇತ ಸ್ಟ್ರೈಕರ್ ಕರೀಂ ಬೆಂಜೆಮಾ ಅವರು ಗಾಯದ ಕಾರಣ ಟೂರ್ನಿಯಿಂದ ಹೊರಬಿದ್ದಿದ್ದಾರೆ. ಶನಿವಾರ ಅಭ್ಯಾಸದ ವೇಳೆ ಅವರ ಎಡತೊಡೆಯ ಸ್ನಾಯುವಿಗೆ ಗಾಯವಾಗಿದೆ.



ಕರೀಂ ಬೆಂಜೆಮಾ

'ಸಹ ಆಟಗಾರರ ಜತೆ ಪೂರ್ಣ ಪ್ರಮಾಣದ ಅಭ್ಯಾಸದಲ್ಲಿ ತೊಡಗಿದ್ದಾಗ ಗಾಯವಾಗಿದೆ. ಅವರ ಎಡತೊಡೆಯ ಸ್ನಾಯು ಹರಿದಿರುವುದು ಎಂಆರ್‌ಐ ಸ್ಕ್ಯಾನಿಂಗ್‌ನಿಂದ ಖಚಿತವಾಗಿದೆ. ಬೆಂಜೆಮಾ ವಿಶ್ವಕಪ್‌ನಲ್ಲಿ ಆಡುವುದಿಲ್ಲ' ಎಂದು ಫ್ರಾನ್ಸ್ ಫುಟ್‌ಬಾಲ್ ಫೆಡರೇಷನ್ ಪ್ರಕಟಣೆ ತಿಳಿಸಿದೆ. 2014ರ ವಿಶ್ವಕಪ್‌ನಲ್ಲಿ ಆಡಿದ್ದ ಅವರು, ಫ್ರಾನ್ಸ್ ಪರ ಅತಿಹೆಚ್ಚು ಗೋಲು ಗಳಿಸಿದ್ದರು. ವಿವಾದಕ್ಕೆ ಸಿಲುಕಿ ತಂಡದಲ್ಲಿ ಸ್ಥಾನ ಕಳೆದುಕೊಂಡಿದ್ದರಿಂದ 2018 ರಲ್ಲಿ ಆಡಿರಲಿಲ್ಲ.

ಪಾಲ್ ಪೊಗ್ಬಾ ಮತ್ತು ಎಂಗೊಲೊ ಕಾಂಟೆ ಬಳಿಕ ಇದೀಗ ಬೆಂಜೆಮಾ ಕೂಡಾ ಗಾಯಗೊಂಡಿರುವುದು ಹಾಲಿ ಚಾಂಪಿಯನ್ನರಿಗೆ ಭಾರಿ ಹಿನ್ನಡೆ ಉಂಟುಮಾಡಿದೆ.

ಅಮೆರಿಕಕ್ಕೆ ವೇಲ್ಸ್ ಸವಾಲು

ದೋಹಾ (ಎಪಿ): ಸೋಮವಾರ ರಾತ್ರಿ ನಡೆಯಲಿರುವ ಪಂದ್ಯದಲ್ಲಿ ಅಮೆರಿಕ ಮತ್ತು ವೇಲ್ಸ್ ಎದುರಾಗಲಿದ್ದು, ಜಿದ್ದಾಜಿದ್ದಿನ ಸೆಣಸಾಟ ನಿರೀಕ್ಷಿಸಲಾಗಿದೆ.

ವೇಲ್ಸ್ ತಂಡ 64 ವರ್ಷಗಳ ಬಳಿಕ ವಿಶ್ವಕಪ್‌ನಲ್ಲಿ ಆಡುತ್ತಿದೆ. 1958 ರಲ್ಲಿ ಕೊನೆಯ ಬಾರಿ ಆಡಿದ್ದಾಗ ಕ್ವಾರ್ಟರ್ ಫೈನಲ್‌ವರೆಗೆ ತಲುಪಿತ್ತು. ಅಮೆರಿಕ ಎಂಟು ವರ್ಷಗಳ ಬಿಡುವಿನ ಬಳಿಕ ವಿಶ್ವಕಪ್‌ಗೆ ಅವಕಾಶ ಪಡೆದಿದೆ.

ಉಭಯ ತಂಡಗಳು ಇದುವರೆಗೆ ಸ್ನೇಹಪರ ಪಂದ್ಯಗಳಲ್ಲಿ ಎರಡು ಸಲ ಎದುರಾಗಿವೆ. 2003 ರಲ್ಲಿ ಮೊದಲ ಬಾರಿ ಎದುರಾಗಿದ್ದಾಗ ಅಮೆರಿಕ 2–0 ರಲ್ಲಿ ಗೆದ್ದಿತ್ತು. 2020 ರಲ್ಲಿ ನಡೆದ ಪಂದ್ಯ ಗೋಲುರಹಿತ ಡ್ರಾದಲ್ಲಿ ಕೊನೆಗೊಂಡಿತ್ತು. 2014 ರಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದ ಅಮೆರಿಕ ತಂಡ, ಬೆಲ್ಜಿಯಂ ಕೈಯಲ್ಲಿ 1–2 ರಲ್ಲಿ ಸೋತು ಹೊರಬಿದ್ದಿತ್ತು.

ನೆದರ್ಲೆಂಡ್ಸ್‌ಗೆ ಜಯದ ನಿರೀಕ್ಷೆ

ದೋಹಾ (ರಾಯಿಟರ್ಸ್): ಕಳೆದ 15 ಪಂದ್ಯಗಳಲ್ಲಿ ಅಜೇಯ ಸಾಧನೆ ಮಾಡಿರುವ ನೆದರ್ಲೆಂಡ್ಸ್ ತಂಡ, ವಿಶ್ವಕಪ್ ಟೂರ್ನಿಯ ತನ್ನ ಮೊದಲ ಪಂದ್ಯದಲ್ಲಿ ಸೋಮವಾರ ಸೆನೆಗಲ್ ತಂಡದ ಸವಾಲು ಎದುರಿಸಲಿದೆ. ನೆದರ್ಲೆಂಡ್ಸ್ ತಂಡ 2020ರ ಯೂರೊ ಕಪ್ ಟೂರ್ನಿಯಲ್ಲಿ ಜೆಕ್ ರಿಪಬ್ಲಿಕ್ ಎದುರು ಸೋತಿತ್ತು. ಆ ಬಳಿಕ ನಡೆದ ಯಾವುದೇ ಪಂದ್ಯವನ್ನೂ ಸೋತಿಲ್ಲ. ಅದೇ ಆತ್ಮವಿಶ್ವಾಸದೊಂದಿಗೆ ವಿಶ್ವಕಪ್ ಟೂರ್ನಿಯಲ್ಲಿ ಅಭಿಯಾನ ಆರಂಭಿಸಲಿದೆ.

ವಿಶ್ವಕಪ್‌ನಲ್ಲಿ ಮೂರು ಸಲ ರನ್ನರ್ಸ್ ಅಪ್ ಆಗಿರುವ 'ಡಚ್' ತಂಡ ರಷ್ಯಾದಲ್ಲಿ 2018 ರಲ್ಲಿ ನಡೆದಿದ್ದ ಟೂರ್ನಿಗೆ ಅರ್ಹತೆ ಪಡೆದುಕೊಂಡಿರಲಿಲ್ಲ.

ಆಫ್ರಿಕಾ ಖಂಡದಿಂದ ಅರ್ಹತೆ ಪಡೆದಿರುವ ಮೂರು ತಂಡಗಳಲ್ಲಿ ಒಂದೆನಿಸಿರುವ ಸೆನೆಗಲ್, ಪ್ರಮುಖ ಆಟಗಾರರನ್ನು ಒಳಗೊಂಡಿದ್ದು ಅಚ್ಚರಿಯ ಫಲಿತಾಂಶವನ್ನು ಎದುರು ನೋಡುತ್ತಿದೆ. ಆದರೆ ಸ್ಟಾರ್ ಸ್ಟ್ರೈಕರ್ ಸ್ಯಾಡಿಯೊ ಮಾನೆ ಅವರು ಗಾಯದ ಕಾರಣ ವಿಶ್ವಕಪ್‌ನಲ್ಲಿ ಆಡದೇ ಇರುವುದು ಹಿನ್ನಡೆ ಉಂಟುಮಾಡಿದೆ. ಮಾನೆ ಅನುಪಸ್ಥಿತಿ ಇತರ ಆಟಗಾರರ ಮೇಲಿನ ಒತ್ತಡ ಹೆಚ್ಚಿಸಿದೆ. ಸೆನೆಗಲ್, ಎದುರಾಳಿಗಳಿಗೆ ಪ್ರಬಲ ಪೈಪೋಟಿ ನೀಡುವುದರಲ್ಲಿ ಅನುಮಾನವಿಲ್ಲ.

ಆಶೀಶ್ ಮಹೇಶ್ ಶತಕದ ಸೊಬಗು

ಕೂಚ್ ಬಿಹಾರ್ ಟ್ರೋಫಿ: 6 ವಿಕೆಟ್ ಕಬಳಿಸಿದ ಪಿಯೂಶ್ ಠಾಕೂರ್

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಆಶೀಶ್ ಮಹೇಶ್ ಗಳಿಸಿದ ಅಮೋಘ ಶತಕದ ಬಲದಿಂದ ಕರ್ನಾಟಕ ತಂಡವು ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ 19 ವರ್ಷದೊಳಗಿನವರ ಪಂದ್ಯದಲ್ಲಿ ಹಿಮಾಚಲ ಪ್ರದೇಶ ವಿರುದ್ಧ ಬಿಗಿಹಿಡಿತ ಸಾಧಿಸಿದೆ.

ಇಲ್ಲಿನ ರಾಜನಗರ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯ ಮೊದಲ ಇನಿಂಗ್ಸ್‌ನಲ್ಲಿ ಕರ್ನಾಟಕ 83 ಓವರ್‌ಗಳಲ್ಲಿ 368 ರನ್‌ಗಳಿಗೆ ಆಲೌಟ್ ಆಯಿತು. 262 ರನ್‌ಗಳ ಮುನ್ನಡೆ ಗಳಿಸಿತು. ಆಶೀಶ್ (118 ರನ್, 4x22) ಶತಕ ದಾಖಲಿಸಿದರು.

ಎರಡನೇ ಇನಿಂಗ್ಸ್ ಆರಂಭಿಸಿರುವ ಹಿಮಾಚಲ ಪ್ರದೇಶ ದಿನದಾಟದ ಅಂತ್ಯಕ್ಕೆ 42 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 148 ರನ್ ಗಳಿಸಿದೆ. ಲೋಕೇಶ ಚೌಹಾಣ್ (ಅಜೇಯ 45 ರನ್, 4x9) ಹಾಗೂ ಅನಿಮೇಶ್ ಠಾಕೂರ್ ಬದಲಿಗೆ ಕಣಕ್ಕಿಳಿದಿರುವ ಸೌರಭ್ ಠಾಕೂರ್ (1ರನ್) ಕ್ರೀಸ್‌ನಲ್ಲಿದ್ದಾರೆ. ಇನಿಂಗ್ಸ್ ಹಿನ್ನಡೆ ತಪ್ಪಿಸಿಕೊಳ್ಳಲು ಹಿಮಾಚಲ ತಂಡಕ್ಕೆ 114 ರನ್ ಬೇಕಿದೆ.

ಭಾನುವಾರ ಒಂದು ಬದಿಯಲ್ಲಿ ವಿಕೆಟ್ ಉರುಳುತ್ತಿದ್ದವು. ಮತ್ತೊಂದು ತುದಿಯಲ್ಲಿ ಆಶೀಶ್ ಮಹೇಶ ಅಬ್ಬರಿಸಿದರು. 86 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು.



ಹಿಮಾಚಲ ಪ್ರದೇಶ ತಂಡದ ವಿರುದ್ಧ ಶತಕ ಸಿಡಿಸಿದ ಆಶೀಶ್ ಮಹೇಶ್ ಸಂಭ್ರಮಿಸಿದ್ದು ಹೀಗೆ... –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ಸ್ಪಿನ್ನರ್‌ಗಳ ಮಿಂಚು: ಎರಡನೇ ದಿನವೂ ಸ್ಪಿನ್ನರ್‌ಗಳು ಮಿಂಚಿದರು. ಶನಿವಾರ 2 ವಿಕೆಟ್ ಪಡೆದಿದ್ದ ಪಿಯೂಶ್ ಠಾಕೂರ್(136ಕ್ಕೆ6), ಭಾನುವಾರ ನಾಲ್ಕು ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಹಿಮಾಚಲ ಪ್ರದೇಶ:59.4 ಓವರ್‌ಗಳಲ್ಲಿ 106 ರನ್; ಕರ್ನಾಟಕ: 83 ಓವರ್‌ಗಳಲ್ಲಿ 368 ರನ್(ಧ್ರುವ್ ಪ್ರಭಾಕರ 32, ಯಶೋವರ್ಧನ ಪರಂತಾಪ್ 42, ಆಶೀಶ್ ಮಹೇಶ 118,ಹಾರ್ದಿಕರಾಜ್ 19, ಧನುಷಗೌಡ 25, ಪ್ರವಲ್ ಸಿಂಗ್ 70ಕ್ಕೆ2, ಪಿಯೂಶ್ ಠಾಕೂರ್ 136ಕ್ಕೆ6). ದ್ವಿತೀಯ ಇನಿಂಗ್ಸ್: ಹಿಮಾಚಲಪ್ರದೇಶ: 42 ಓವರ್‌ಗಳಲ್ಲಿ 5 ವಿಕೆಟ್‌ಗೆ 148 ರನ್(ಲೋಕೇಶ ಚೌಹಾಣ್ ಅಜೇಯ 45, ಪಿಯೂಶ್ ಶರ್ಮಾ 36, ಗಂಗಾಸಿಂಗ್ 25, ಮೊಹಸಿನ್ ಖಾನ್ 37ಕ್ಕೆ2).

ಪ್ರೊ ಕಬಡ್ಡಿ ಲೀಗ್: ಡೆಲ್ಲಿಗೆ ಜಯ

ಹೈದರಾಬಾದ್ (ಪಿಟಿಐ): ನವೀನ್ ಕುಮಾರ್ ಅವರ ಉತ್ತಮ ಆಟದ ನೆರವಿನಿಂದ ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್‌ನಲ್ಲಿ ಗೆಲುವು ಪಡೆಯಿತು.

ಭಾನುವಾರ ನಡೆದ ಪಂದ್ಯದಲ್ಲಿ ದಬಾಂಗ್ 42–30 ರಲ್ಲಿ ಹರಿಯಾಣ ಸ್ಟೀಲರ್ಸ್ ತಂಡವನ್ನು ಮಣಿಸಿತು. ನವೀನ್ ಅವರು 15 ಪಾಯಿಂಟ್ಸ್ ಹಾಗೂ ಆಶು ಮಲಿಕ್ 10 ಪಾಯಿಂಟ್ಸ್ ಗಳಿಸಿದರು. ವಿರಾಮದ ವೇಳೆಗ ದೆಹಲಿಯ ತಂಡ 23–13 ರಲ್ಲಿ ಮುನ್ನಡೆ ಸಾಧಿಸಿತ್ತು.ದಿನದ ಎರಡನೇ ಪಂದ್ಯದಲ್ಲಿ ಪುಣೇರಿ ಪಲ್ಟನ್ 35–33 ರಲ್ಲಿ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು. ಮೋಹಿತ್ ಗೋಯತ್ (9), ಆಕಾಶ್ ಶಿಂಧೆ (7) ಮತ್ತು ಅಸ್ಲಂ ಇನಾಂದಾರ್ (6) ಅವರು ಪಲ್ಟನ್ ತಂಡದ ಗೆಲುವಿಗೆ ಕಾರಣರಾದರು.

ಇಂದಿನ ಪಂದ್ಯಗಳು: ತಮಿಳ್ ತಲೈವಾಸ್– ಬೆಂಗಾಲ್ ವಾರಿಯರ್ಸ್
ಯು.ಪಿ.– ಗುಜರಾತ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	16	10	4	2	59
ಬೆಂಗಳೂರು	16	10	5	1	57
ಜೈಪುರ	15	10	5	0	53
ಯುಪಿ	15	7	6	2	45
ಡೆಲ್ಲಿ	16	8	8	0	45
ಮುಂಬಾ	15	8	7	0	44

ಎಂಟರಘಟ್ಟಕ್ಕೆ ವಂಶಜ್, ವಿಶ್ವನಾಥ್

ನವದೆಹಲಿ (ಪಿಟಿಐ): ವಿಶ್ವನಾಥ್ ಸುರೇಶ್, ವಂಶಜ್ ಸೇರಿದಂತೆ ಭಾರತದ ಎಂಟು ಮಂದಿ ಬಾಕ್ಸರ್‌ಗಳು, ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಬಾಕ್ಸಿಂಗ್‌ನಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ. ವಿಶ್ವನಾಥ್ 48 ಕೆಜಿ ಮತ್ತು ವಂಶಜ್ 63.5 ಕೆಜಿ ವಿಭಾಗದಲ್ಲಿ ಎಂಟರಘಟ್ಟ ತಲುಪಿದರು. ಜಾದೂಮಣಿ (51 ಕೆಜಿ), ಆಶಿಶ್ (54 ಕೆಜಿ), ದೀಪಕ್ (75 ಕೆಜಿ), ಮಹಿಳೆಯರ ವಿಭಾಗದಲ್ಲಿ ಭಾವನಾ ಶರ್ಮಾ (48 ಕೆಜಿ), ತಮನ್ನಾ (50 ಕೆಜಿ) ಮತ್ತು ಗ್ರಿವಿಯಾ ದೇವಿ (54 ಕೆಜಿ) ಕ್ವಾರ್ಟರ್ ತಲುಪಿದ ಇನ್ನುಳಿದ ಬಾಕ್ಸರ್‌ಗಳು.

ಕ್ರಿಕೆಟ್: ರಾಜಗೋಪಾಲ್ ನಿಧನ

ಬೆಂಗಳೂರು: ಮದ್ರಾಸ್ ಹಾಗೂ ಮೈಸೂರು ರಾಜ್ಯ ಕ್ರಿಕೆಟ್ ತಂಡಗಳನ್ನು ಪ್ರತಿನಿಧಿಸಿದ್ದ ವಿಕೆಟ್‌ಕೀಪರ್–ಬ್ಯಾಟ್ಸ್‌ಮನ್ ಕೆ.ಆರ್. ರಾಜಗೋಪಾಲ್ (82) ಶುಕ್ರವಾರ ನಿಧನರಾದರು.

ಕಳೆದ ಕೆಲವು ವರ್ಷಗಳಿಂದ ಅವರು ಮೂತ್ರಪಿಂಡದ ಸಮಸ್ಯೆಯಿಂದ ಬಳಲುತ್ತಿದ್ದರು. ಕೆಲ ವರ್ಷಗಳ ಹಿಂದೆ ಅವರ ಪತ್ನಿ ಪಿ. ಇಂದಿರಾ ನಿಧನರಾಗಿದ್ದರು. ಅವರಿಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ.

ಪ್ರಸಕ್ತ ಕಾಲಘಟ್ಟದಲ್ಲಿರುವ ಸ್ಟ್ರೈಕ್‌ರೇಟ್ ಪ್ರಧಾನವಾಗಿರುವ ಬ್ಯಾಟಿಂಗ್ ಶೈಲಿಯು ಆಗಿನ ಕಾಲದಲ್ಲಿಯೇ ರಾಜಗೋಪಾಲ್ ಅವರಿಗೆ ಇತ್ತು ಎಂದು ಹೇಳಲಾಗುತ್ತದೆ. 60 ಹಾಗೂ 70 ದಶಕಗಳಲ್ಲಿ ರಾಜಗೋಪಾಲ್ ಅವರು ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡಿದ್ದರು. ಕರ್ನಾಟಕದಿಂದ ಭಾರತ ತಂಡಕ್ಕೆ ಆಯ್ಕೆಯಾಗುವ ಭರವಸೆ ಮೂಡಿಸಿದ್ದ ಪ್ರಮುಖ ಆಟಗಾರರೂ ಆಗಿದ್ದರು.

1967ರ ಪ್ರಥಮ ದರ್ಜೆ ಕ್ರಿಕೆಟ್ ಋತುವಿನಲ್ಲಿ 800 ರನ್ ಗಳಿಸಿದ್ದರು. ಆದರೆ ಅವರು ದೈಹಿಕವಾಗಿ ಫಿಟ್ ಆಗಿಲ್ಲವೆಂದು ವೈದ್ಯರು ಘೋಷಿಸಿದ್ದರು. ಇದರಿಂದಾಗಿ ಆ ವರ್ಷ ಆಸ್ಟ್ರೇಲಿಯಾದ ಎದುರಿನ ಸರಣಿಯಲ್ಲಿ ಆಡುವ ಅವಕಾಶ ಕೈತಪ್ಪಿತು.



ರಾಜಗೋಪಾಲ್ –ಟ್ವಿಟರ್ ಚಿತ್ರ

ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಅವರು 55 ಪಂದ್ಯಗಳಿಂದ 3074 ರನ್ ಗಳಿಸಿದ್ದರು. ಅದರಲ್ಲಿ ಏಳು ಶತಕಗಳು ಸೇರಿವೆ. ಕೀಪಿಂಗ್‌ನಲ್ಲಿಯೂ ಚುರುಕಾಗಿದ್ದ ಅವರು 52 ಕ್ಯಾಚ್ ಹಾಗೂ 22 ಸ್ಟಂಪಿಂಗ್ ಮಾಡಿದ್ದರು.

'ಅವರು ಆಗಿನ ಸಂದರ್ಭದಲ್ಲಿದ್ದ ಸ್ಟೈಲಿಷ್ ಬ್ಯಾಟರ್‌ಗಳಲ್ಲಿ ಪ್ರಮುಖರಾಗಿದ್ದರು. ದೈವದತ್ತ ಪ್ರತಿಭೆ ಅವರದ್ದು. ಆದರೆ ಅವರಿಗೆ ಉನ್ನತ ಅವಕಾಶಗಳು ಸಿಗಲಿಲ್ಲವೆಂಬುದು ದುರದೃಷ್ಟಕರ. ಸಭ್ಯ ವ್ಯಕ್ತಿತ್ವ ಅವರದ್ದು' ಎಂದು ಕರ್ನಾಟಕದ ಮಾಜಿ ಕ್ರಿಕೆಟಿಗ ಸುಧಾಕರ್ ರಾವ್ ಸ್ಮರಿಸಿದರು.

ನಿಧನ ವಾರ್ತೆ

ಫುಟ್‌ಬಾಲ್ ದಿಗ್ಗಜ ಬಾಬು ಮಣಿ



ಬಾಬು ಮಣಿ

ಬೆಂಗಳೂರು: ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬಾಬು ಮಣಿ (59) ಅವರು ಕೋಲ್ಕತ್ತದಲ್ಲಿ ಭಾನುವಾರ ನಿಧನರಾದರು. ಕಿಡ್ನಿ ಸಂಬಂಧಿತ ಸಮಸ್ಯೆಯಿಂದ ಅವರು ಬಳಲುತ್ತಿದ್ದರು.

ಬಾಬು ಮಣಿ ಅವರಿಗೆ ಪತ್ನಿ ಮತ್ತು ಪುತ್ರ ಇದ್ದಾರೆ.

ಬೆಂಗಳೂರಿನಲ್ಲಿ ಜನಿಸಿದ್ದ ಬಾಬು ಕೋಲ್ಕತ್ತದಲ್ಲಿ ನೆಲೆಸಿದ್ದರು. 1986–87ರ ಅವಧಿಯಲ್ಲಿ ರಾಷ್ಟ್ರೀಯ ತಂಡದ ನಾಯಕತ್ವ ವಹಿಸಿದ್ದರು. 1985 ಮತ್ತು 1987ರಲ್ಲಿ ದಕ್ಷಿಣ ಏಷ್ಯಾ ಕ್ರೀಡಾಕೂಟದಲ್ಲಿ ಚಿನ್ನ ಗೆದ್ದ ಭಾರತ ತಂಡದ ಸದಸ್ಯರಾಗಿದ್ದರು.

ಬೆಂಗಳೂರು ಇಂಡಿಪೆಂಡೆಂಟ್ಸ್ ಕ್ಲಬ್ ಪರ ವಿಂಗರ್ ಆಗಿ ವೃತ್ತಿಜೀವನ ಆರಂಭಿಸಿದ್ದ ಬಾಬು, 1981ರ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. ಬಳಿಕ ಐಟಿಐ ಕ್ಲಬ್ ಮತ್ತು ಕೋಲ್ಕತ್ತದ ಮೊಹಮ್ಮಡನ್ ಸ್ಪೋರ್ಟಿಂಗ್ ತಂಡಗಳಿಗಾಗಿ ಆಡಿದ್ದರು.

1985ರಲ್ಲಿ ಮೋಹನ್ ಬಾಗನ್ ತಂಡದಲ್ಲಿ ಆಡಿದ್ದ ಅವರು, ಅದೇ ವರ್ಷ ನೆಹರೂ ಕಪ್ ಟೂರ್ನಿಯಲ್ಲಿ ಕಣಕ್ಕಿಳಿದಿದ್ದರು. ವೃತ್ತಿಜೀವನಕ್ಕೆ ವಿದಾಯ ಹೇಳುವ ಮುನ್ನ ಈಸ್ಟ್ ಬೆಂಗಾಲ್ ತಂಡಕ್ಕಾಗಿ ಮೂರು ವರ್ಷ ಆಡಿದ್ದರು.

ಐಒಎ: ಉಷಾ, ಸುಮಾಗೆ ಮತದಾನ ಅವಕಾಶ

ನವದೆಹಲಿ (ಪಿಟಿಐ): ಅಥ್ಲೀಟ್ ಪಿ.ಟಿ.ಉಷಾ, ಒಲಿಂಪಿಕ್ ಕಂಚಿನ ಪದಕ ವಿಜೇತ ಕುಸ್ತಿಪಟು ಯೋಗೇಶ್ವರ್ ದತ್, ಶೂಟರ್ ಸುಮಾ ಶಿರೂರು ಸೇರಿದಂತೆ ಉನ್ನತ ಸಾಧನೆ ಮಾಡಿದ ಎಂಟು ಕ್ರೀಡಾಪಟುಗಳಿಗೆ ಡಿ.10 ರಂದು ನಡೆಯಲಿರುವ ಭಾರತ ಒಲಿಂಪಿಕ್ ಸಂಸ್ಥೆಯ (ಐಒಎ) ಚುನಾವಣೆಯಲ್ಲಿ ಮತದಾನಕ್ಕೆ ಅವಕಾಶ ನೀಡಲಾಗಿದೆ.

ಹೊಸದಾಗಿ ರಚನೆಯಾಗಿರುವ ಅಥ್ಲೀಟ್‌ಗಳ ಸಮಿತಿಯು 'ಉನ್ನತ ಸಾಧನೆ' ಮಾಡಿದ ಎಂಟು ಕ್ರೀಡಾಪಟುಗಳನ್ನು ಆಯ್ಕೆ ಮಾಡಿದೆ. ಎಂ.ಎಂ.ಸೌಮ್ಯಾ (ಹಾಕಿ), ರೋಹಿತ್ ರಾಜ್‌ಪಾಲ್ (ಟೆನಿಸ್), ಅಖಿಲ್ ಕುಮಾರ್ (ಬಾಕ್ಸಿಂಗ್), ಅಪರ್ಣಾ ಪೋಪಟ್ (ಬ್ಯಾಡ್ಮಿಂಟನ್) ಮತ್ತು ಡೋಲಾ ಬ್ಯಾನರ್ಜಿ (ಆರ್ಚರಿ) ಅವರು ಈ ಗೌರವ ಪಡೆದ ಇತರ ಐವರು ಕ್ರೀಡಾಪಟುಗಳಾಗಿದ್ದಾರೆ.

ಐಒಎ ಚುನಾವಣಾ ಪ್ರಕ್ರಿಯೆಯ ಜವಾಬ್ದಾರಿ ವಹಿಸಿರುವ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾಗೇಶ್ವರ ರಾವ್ ಅವರು ಎಂಟು ಮಂದಿಯ ಹೆಸರನ್ನು ಅಧಿಕೃತವಾಗಿ ಪ್ರಕಟಿಸಿಲ್ಲ. 'ಅಥ್ಲೀಟ್‌ಗಳ ಸಮಿತಿಯು ಎಂಟು ಮಂದಿಯ ಹೆಸರನ್ನು ಅಂತಿಮಗೊಳಿಸಿದೆ. ಎಲ್.ನಾಗೇಶ್ವರ ರಾವ್ ಅವರು ಆ ಹೆಸರುಗಳನ್ನು ಪ್ರಕಟಿಸಲಿದ್ದಾರೆ' ಎಂದು ಮೂಲಗಳು ಖಚಿತಪಡಿಸಿವೆ.

ಎರಡನೇ ಟಿ20 ಕ್ರಿಕೆಟ್ ಪಂದ್ಯ: ಭಾರತದ ಜಯಭೇರಿ; ಟಿಮ್ ಸೌಥಿ ಹ್ಯಾಟ್ರಿಕ್ ವ್ಯರ್ಥ

ಸೂರ್ಯ ಪ್ರತಾಪಕ್ಕೆ ಬಸವಳಿದ ಕಿವೀಸ್

ಮೌಂಟ್ ಮಾಂಗನೂಯಿ (ಪಿಟಿಐ): ಮುಂಬೈನ ಸೂರ್ಯಕುಮಾರ್ ಯಾದವ್ ಭಾನುವಾರ ಬೇ ಓವಲ್ ಕ್ರೀಡಾಂಗಣದಲ್ಲಿ ಪ್ರಖರವಾಗಿ ಬೆಳಗಿದರು.

ಅವರ ಅಬ್ಬರದ ಶತಕದ ಮುಂದೆ ಆತಿಥೇಯ ನ್ಯೂಜಿಲೆಂಡ್ ತಂಡವು 65 ರನ್‌ಗಳ ಸೋಲಿಗೆ ಶರಣಾಯಿತು. ವೇಗಿ ಟಿಮ್ ಸೌಥಿ ಅವರ ಹ್ಯಾಟ್ರಿಕ್ ಕೂಡ ವ್ಯರ್ಥವಾಯಿತು. ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಭಾರತ ತಂಡವು 1–0 ಮುನ್ನಡೆ ಗಳಿಸಿತು. ಮೊದಲ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು.

ಎರಡನೇ ಪಂದ್ಯದಲ್ಲಿ ಟಾಸ್ ಗೆದ್ದ ಕಿವೀಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿಕೆಟ್‌ಕೀಪಿಂಗ್ ಜೋಡಿ ಇಶಾನ್ ಕಿಶನ್ ಮತ್ತು ರಿಷಭ್ ಪಂತ್ ಇನಿಂಗ್ಸ್ ಆರಂಭಿಸಿದರು. ಆದರೆ, ರಿಷಭ್ ಆರನೇ ಓವರ್‌ನಲ್ಲಿ ಔಟಾದರು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಸೂರ್ಯಕುಮಾರ್ (ಅಜೇಯ 111; 51ಎ, 4X11, 6X7) ಶತಕದಬ್ಬರದ ನೆರವಿನಿಂದ ಭಾರತ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 191 ರನ್ ಗಳಿಸಿತು.

ಅಂತರರಾಷ್ಟ್ರೀಯ ಟಿ20 ಮಾದರಿಯಲ್ಲಿ ಸೂರ್ಯ ಗಳಿಸಿದ ಎರಡನೇ ಶತಕ ಇದಾಗಿದೆ 41ನೇ ಪಂದ್ಯ ಆಡಿದ ಅವರ ಖಾತೆಯಲ್ಲಿ ಒಟ್ಟು 1,395 ರನ್‌ಗಳು ಇವೆ.

ಅವರು ಇಲ್ಲಿ ಕೇವಲ 49 ಎಸೆತಗಳಲ್ಲಿ ಶತಕದ ಗಡಿ ಮುಟ್ಟಿದರು. ಕಿವೀಸ್ ತಂಡದ ಎಲ್ಲ ಬೌಲರ್‌ಗಳೂ ಸೂರ್ಯ ಅವರನ್ನು ಕಟ್ಟಿಹಾಕುವ ಪ್ರಯತ್ನದಲ್ಲಿ ವಿಫಲರಾದರು.

ಗುರಿ ಬೆನ್ನಟ್ಟಿದ ನ್ಯೂಜಿಲೆಂಡ್ ತಂಡವು 18.5 ಓವರ್‌ಗಳಲ್ಲಿ 126 ರನ್ ಗಳಿಸಿ ಆಲೌಟ್ ಆಯಿತು. ನಾಯಕ ಕೇನ್ ವಿಲಿಯಮ್ಸನ್ (61; 52ಎ) ಒಬ್ಬರೇ ಅರ್ಧಶತಕ ಗಳಿಸಿದರು. ಉಳಿದವರಿಂದ ನಿರೀಕ್ಷಿತ ಆಟ ಮೂಡಿಬರಲಿಲ್ಲ.

ಭಾರತದ ದೀಪಕ್ ಹೂಡಾ (10ಕ್ಕೆ4) ಹಾಗೂ ಸಿರಾಜ್ (24ಕ್ಕೆ2) ಆತಿಥೇಯರ ಬ್ಯಾಟಿಂಗ್ ಪಡೆಗೆ ಕಡಿವಾಣ ಹಾಕಿದರು.

ಸೌಥಿ ಹ್ಯಾಟ್ರಿಕ್: ನ್ಯೂಜಿಲೆಂಡ್ ತಂಡದ ವೇಗಿ ಟಿಮ್ ಸೌಥಿ ಇನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದರು. ಅವರು ಹಾರ್ದಿಕ್ ಪಾಂಡ್ಯ, ದೀಪಕ್ ಹೂಡಾ ಹಾಗೂ ವಾಷಿಂಗ್ಟನ್ ಸುಂದರ್ ವಿಕೆಟ್‌ಗಳನ್ನು ಗಳಿಸಿದರು.

ಮುಖ್ಯಾಂಶಗಳು

- ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಸೂರ್ಯ ಎರಡನೇ ಶತಕ
- ದೀಪಕ್ ಹೂಡಾಗೆ ನಾಲ್ಕು ವಿಕೆಟ್
- ಕಿವೀಸ್ ತಂಡದ ಕೇನ್ ವಿಲಿಯಮ್ಸನ್ ಅರ್ಧಶತಕ

‘ಟೆಸ್ಟ್ ತಂಡದ ಬುಲಾವ್ ನಿರೀಕ್ಷೆ’

ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಮಿಂಚಿನ ಸಂಚಲನ ಮೂಡಿಸಿರುವ ಮುಂಬೈಕರ್ ಸೂರ್ಯಕುಮಾರ್ ಯಾದವ್ ಟೆಸ್ಟ್ ಕ್ರಿಕೆಟ್ ಆಡುವ ನಿರೀಕ್ಷೆಯಲ್ಲಿದ್ದಾರೆ.

‘ಶೀಘ್ರದಲ್ಲಿಯೇ ಟೆಸ್ಟ್ ತಂಡದ ಬುಲಾವ್ ಬರಲಿದೆ’ ಎಂದು ಭಾನುವಾರ ಪಂದ್ಯದ ನಂತರ ಹೇಳಿದರು.

ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲ ಶತಕ ಹೊಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕೆಂಪುವರ್ಣದ ಚೆಂಡಿನಲ್ಲಿ ಆಡುವ ಮೂಲಕವೇ ಕ್ರಿಕೆಟ್ ಜೀವನ ಆರಂಭವಾಯಿತು. ನನ್ನ ಮುಂಬೈ ತಂಡಕ್ಕೆ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಆಡಿದ್ದೇನೆ. ಅದರಿಂದಾಗಿ ಟೆಸ್ಟ್ ಮಾದರಿಯ ಅರಿವು ತಕ್ಕಮಟ್ಟಿಗೆ ಇದೆ. ದೀರ್ಘ ಮಾದರಿಯ ಪಂದ್ಯಗಳಲ್ಲಿಆಡುವುದನ್ನು ಯಾವಾಗಲೂ ಆನಂದಿಸುತ್ತೇನೆ. ಟೆಸ್ಟ್ ತಂಡದಲ್ಲಿ ಆಡುವ ಅವಕಾಶ ಇಷ್ಟರಲ್ಲಿಯೇ ನನ್ನದಾಗಲಿದೆ’ ಎಂದರು.



ಸೂರ್ಯಕುಮಾರ್ –ಎಪಿ/ಪಿಟಿಐ ಚಿತ್ರ



ದೀಪಕ್ ಹೂಡಾ

ಸ್ಕೋರ್ ಕಾರ್ಡ್

ಭಾರತ 6ಕ್ಕೆ 191 (20 ಓವರ್)

ಇಶಾನ್ ಸಿ ಸೌಥಿ ಬಿ ಸೋಧಿ 36 (31ಎ, 4X5, 6X1), ರಿಷಭ್ ಸಿ ಸೌಥಿ ಬಿ ಫರ್ಗ್ಯುಸನ್ 6 (13ಎ, 4X1), ಸೂರ್ಯಕುಮಾರ್ ಔಟಾಗದೆ 111 (51ಎ, 4X11, 6X7), ಶ್ರೇಯಸ್ ಹಿಟ್‌ವಿಕೆಟ್ ಬಿ ಫರ್ಗ್ಯುಸನ್ 13 (9ಎ, 4X1, 6X1), ಹಾರ್ದಿಕ್ ಸಿ ನೀಶಾಮ್ ಬಿ ಸೌಥಿ 13 (13ಎ), ಹೂಡಾ ಸಿ ಫರ್ಗ್ಯುಸನ್ ಬಿ ಸೌಥಿ 0 (1ಎ), ಸುಂದರ್ ಸಿ ನೀಶಾಮ್ ಬಿ ಸೌಥಿ 0 (1ಎ), ಭುವನೇಶ್ವರ್ ಔಟಾಗದೆ 1 (1ಎ)

ಇತರೆ 11 (ಲೆಗ್‌ಬೈ 2, ವೈಡ್ 9) **ವಿಕೆಟ್ ಪತನ:** 1-36 (ರಿಷಭ್ ಪಂತ್, 5.1), 2-69 (ಇಶಾನ್ ಕಿಶನ್, 9.1), 3-108 (ಶ್ರೇಯಸ್ ಅಯ್ಯರ್, 12.4), 4-190 (ಹಾರ್ದಿಕ್ ಪಾಂಡ್ಯ, 19.3), 5-190 (ದೀಪಕ್ ಹೂಡಾ, 19.4), 6-190 (ವಾಷಿಂಗ್ಟನ್ ಸುಂದರ್, 19.5)

ಬೌಲಿಂಗ್: ಟಿಮ್ ಸೌಥಿ 4–0–34–3, ಆ್ಯಡಂ ಮಿಲ್ನೆ 4–0–35–0, ಲಾಕಿ ಫರ್ಗ್ಯುಸನ್ 4–0–49–2, ಜೇಮ್ಸ್ ನೀಶಾಮ್ 1–0–9–0, ಇಶ್ ಸೋಧಿ 4–0–35–1, ಮಿಚೆಲ್ ಸ್ಯಾಂಟ್ನರ್ 3–0–27–0

ನ್ಯೂಜಿಲೆಂಡ್ 126 (18.5 ಓವರ್)

ಫಿನ್ ಸಿ ಅರ್ಷದೀಪ್ ಬಿ ಭುವನೇಶ್ವರ್ 0 (2ಎ), ಡೆವೊನ್ ಸಿ ಅರ್ಷದೀಪ್ ಬಿ ಸುಂದರ್ 25 (22ಎ, 4X3), ಕೇನ್ ಬಿ ಸಿರಾಜ್ 61 (52ಎ, 4X4, 6X2), ಫಿಲಿಪ್ಸ್ ಬಿ ಯಜುವೇಂದ್ರ 12 (6ಎ, 4X1, 6X1), ಡೆರಿಲ್ ಸಿ ಶ್ರೇಯಸ್ ಬಿ ಹೂಡಾ 10 (11ಎ), ನೀಶಾಮ್ ಸಿ ಇಶಾನ್ ಬಿ ಯಜುವೇಂದ್ರ 0 (3ಎ), ಸ್ಯಾಂಟ್ನರ್ ಸಿ ಮತ್ತು ಬಿ ಸಿರಾಜ್ 2 (7ಎ), ಆ್ಯಡಂ ಸಿ ಅರ್ಷದೀಪ್ ಬಿ ಹೂಡಾ 6 (5ಎ, 6X1), ಸೋಧಿ ಸ್ಟಂಪ್ಡ್ ರಿಷಭ್ ಬಿ ಹೂಡಾ 0 (1ಎ), ಸೌಥಿ ಸಿ ಪಂತ್ ಬಿ ಹೂಡಾ 0 (1ಎ), ಫರ್ಗ್ಯುಸನ್ ಔಟಾಗದೆ 1 (1ಎ)

ಇತರೆ 8 (ಲೆಗ್‌ಬೈ 1, ವೈಡ್ 7)

ವಿಕೆಟ್ ಪತನ: 1-0 (ಫಿನ್ ಅಲೆನ್, 0.2), 2-56 (ಡೆವೊನ್ ಕಾನ್ವೆ, 8.1), 3-69 (ಗ್ಲೆನ್ ಫಿಲಿಪ್ಸ್, 9.3), 4-88 (ಡೆರಿಲ್ ಮಿಚೆಲ್, 12.5), 5-89 (ಜೇಮ್ಸ್ ನೀಶಾಮ್, 13.3), 6-99 (ಮಿಚೆಲ್ ಸ್ಯಾಂಟ್ನರ್, 15.5), 7-124 (ಕೇನ್ ವಿಲಿಯಮ್ಸನ್, 17.5), 8-125 (ಇಶ್ ಸೋಧಿ, 18.2), 9-125 (ಟಿಮ್ ಸೋಧಿ, 18.3), 10-126 (ಆ್ಯಡಂ ಮಿಲ್ನೆ, 18.5)

ಬೌಲಿಂಗ್: ಭುವನೇಶ್ವರ್ ಕುಮಾರ್ 3–0–12–1, ಅರ್ಷದೀಪ್ ಸಿಂಗ್ 3–0–29–0, ಮೊಹಮ್ಮದ್ ಸಿರಾಜ್ 4–1–24–2, ವಾಷಿಂಗ್ಟನ್ ಸುಂದರ್ 2–0–24–1, ಯಜುವೇಂದ್ರ ಚಾಹಲ್ 4–0–26–2, ದೀಪಕ್ ಹೂಡಾ 2.5–0–10–4

ಫಲಿತಾಂಶ: ಭಾರತಕ್ಕೆ 65 ರನ್‌ಗಳ ಜಯ

ನೈಸ್ ಡಿಎಚ್ ಕಪ್: ಬಾಷ್‌ಗೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಷ್ ತಂಡದವರು ‘ನೈಸ್ ಡಿಎಚ್ ಕಪ್ ಕಾರ್ಪೊರೇಟ್ ಫೈವ್ ಎ ಸೈಡ್ ಫುಟ್‌ಬಾಲ್ ಟೂರ್ನಿ’ಯ ಪಂದ್ಯದಲ್ಲಿ ಭಾರಿ ಗೆಲುವು ಪಡೆದರು.

ಭಾನುವಾರ ನಡೆದ ಪಂದ್ಯದಲ್ಲಿ ಬಾಷ್ 13–0 ಗೋಲುಗಳಿಂದ ಎಚ್‌ಎಲ್ ಕ್ಲೆಮೊವ್ ತಂಡವನ್ನು ಸೋಲಿಸಿತು.

ಅರುಣ್ ಕುಮಾರ್ 5, ಸೈಯದ್ ಶಾದಾಬ್ ಮತ್ತು ಉಮೇಶ್ ಕುಮಾರ್ ತಲಾ 2 ಗೋಲು ಗಳಿಸಿದರು. ಅರುಣ್ ರಾಯ್ ಪ್ಯಾಟ್ರಿಕ್, ಅರುಣ್, ಸಂಜೀವ್ ಮತ್ತು ವಿಕಾಸ್ ಪಾರ್ಥರಾಜು ಅವರು ತಲಾ ಒಂದು ಗೋಲು ತಂದಿತ್ತರು.

ಇತರ ಪಂದ್ಯಗಳಲ್ಲಿ ಟೈಟನ್ 5–2 ರಲ್ಲಿ ಪುರವಂಕರ ವಿರುದ್ಧ; ಎಪ್ಸಿಲಾನ್ 3–0 ರಲ್ಲಿ ತಾವಂತ್ ವಿರುದ್ಧ; ವಿಸೆನ್ 2–1 ರಲ್ಲಿ ಐಕ್ವಿಯಾ ವಿರುದ್ಧ ಗೆಲುವು ಪಡೆದವು.

NICE DH Cup 2022

ಪೂಜಾರಾಗೆ ಅರ್ಜುನ ಪ್ರಶಸ್ತಿ ಪ್ರದಾನ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಚೇತೇಶ್ವರ್ ಪೂಜಾರ ಅವರಿಗೆ ಘೋಷಣೆಯಾಗಿ ಐದು ವರ್ಷಗಳ ನಂತರ ಅರ್ಜುನ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

2017ರಲ್ಲಿಯೇ ಅವರಿಗೆ ಈ ಪ್ರಶಸ್ತಿ ಘೋಷಣೆಯಾಗಿತ್ತು. ಆದರೆ ಕ್ರಿಕೆಟ್ ಪ್ರವಾಸಗಳ ಕಾರಣದಿಂದಾಗಿ ಪೂಜಾರಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೆ ಹಾಜರಾಗಲು ಸಾಧ್ಯವಾಗಿರಲಿಲ್ಲ. ಶನಿವಾರ ಅವರಿಗೆ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಪ್ರಶಸ್ತಿ ಪ್ರದಾನ ಮಾಡಿದರು.

‘ನನಗೆ ಅರ್ಜುನ ಪ್ರಶಸ್ತಿ ಹಸ್ತಾಂತರಿಸಲು ಕಾರ್ಯಕ್ರಮ ಆಯೋಜಿಸಿದ್ದಕ್ಕಾಗಿ ಕ್ರೀಡಾ ಇಲಾಖೆ, ಬಿಸಿಸಿಐ ಹಾಗೂ ಸಚಿವ ಅನುರಾಗ್ ಠಾಕೂರ್ ಅವರಿಗೆ ಧನ್ಯವಾದಗಳು. ಘೋಷಣೆಯಾದ ವರ್ಷದಲ್ಲಿ ಕ್ರಿಕೆಟ್ ಸರಣಿಗಳಲ್ಲಿ ಆಡಲು ತೆರಳಿದ್ದೆ. ಆದ್ದರಿಂದ ಸಮಾರಂಭಕ್ಕೆ ಹಾಜರಾಗಲು ಸಾಧ್ಯವಾಗಿರಲಿಲ್ಲ’ ಎಂದು ಪೂಜಾರ ಟ್ವೀಟ್ ಮಾಡಿದ್ದಾರೆ.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸೌರಾಷ್ಟ್ರ ತಂಡವನ್ನು ಪೂಜಾರ ಪ್ರತಿನಿಧಿಸಿದ್ದಾರೆ. ದೆಹಲಿಯಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ತಂಡವು ಆಡುತ್ತಿದೆ. ಅಲ್ಲಿಯೇ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ.


ಪೂಜಾರ ಅವರಿಗೆ 2017ನೇ ಸಾಲಿನ ಅರ್ಜುನ ಪ್ರಶಸ್ತಿಯನ್ನು ನವದೆಹಲಿಯಲ್ಲಿ ಶನಿವಾರ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಪ್ರದಾನ ಮಾಡಿದರು –ಟ್ವೀಟ್ ಚಿತ್ರ